50 ಕರ್ನಾಟಕ
KARNATAKA

ಬಾರೋಕ್ ಕಲೆ

ಡಾ. ಎಸ್.ಸಿ.ಪಾಟೀಲ





ಕರ್ನಾಟಕ ಲಲಿತಕಲಾ ಅಕಾಡೆಮಿ

ಬಾರೋಕ್ ಕಲೆ

ಡಾ. ಎಸ್. ಸಿ. ಪಾಟೀಲ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨
(ದೂರವಾಣಿ ಸಂಖ್ಯೆ: ೦೮೦-೨೨೪೮೦೨೯೭)

BHAROOK KALE : Research Essays by Dr. S.C. Patil, Dean, faculty of Fine Art, Kannada University Hampi. Published by Balawant Rao Patil Registrar, Karnataka Lalithakala Academy, Kannada Bhavana, J.C. Road, Bangalore - 560 002.

First Edition : 1987
Second Edition : 2009
© : Authors
Pages : viii + 140 + xvi colour plates
Copies : 1000
Price : Rs. **100/-**

ಪ್ರಥಮ ಮುದ್ರಣ : ೧೯೮೭
ದ್ವಿತೀಯ ಮುದ್ರಣ : ೨೦೦೯
ಹಕ್ಕುಗಳು : ಲೇಖಕರವು
ಪುಟಗಳು : viii + 140 + xvi ವರ್ಣಚಿತ್ರಗಳು
ಪ್ರತಿಗಳು : ೧೦೦೦
ಬೆಲೆ : ರೂ. ೧೦೦/-
ಮುಖಪುಟ : ಎನ್.ಎಮ್. ಅಂಗಡಿ

ಪ್ರಕಾಶಕರು
ಬಲವಂತರಾವ್ ಪಾಟೀಲ್
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002

ಮುದ್ರಕರು
ಇಳಾ ಮುದ್ರಣ
ಬೆಂಗಳೂರು-560 026
ದೂರವಾಣಿ: 26757159

ಅಧ್ಯಕ್ಷರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಳೆದ ನಲವತ್ತುಮೂರು ವರ್ಷಗಳಿಂದ ಲಲಿತಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆ ಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರಕಲಾಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ ಕಲಾವಿದರ ಮಾಲೆ ಪುಸ್ತಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲಿಷ್ ಭಾಷೆಗೂ ಅನುವಾದಿಸಿ ಪ್ರಕಟಿಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನೂ ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ 'ಬಾರೋಕ್ ಕಲೆ' ಪುಸ್ತಕವು ಬಾರೋಕ್ ಸಂಪ್ರದಾಯದ ಕುರಿತು ಮತ್ತು ಕಲಾವಿದರ ಸಾಧನೆಗಳನ್ನು ಪರಿಚಯಿಸುತ್ತದೆ. ಈ ಪುಸ್ತಕದ ಲೇಖಕರು ಪ್ರೊ. ಎಸ್.ಸಿ. ಪಾಟೀಲರು ಅವರು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಲಲಿತಕಲಾನಿಕಾಯದ ಡೀನ್ ಹಾಗೂ ದೃಶ್ಯ ಕಲಾವಿಭಾಗದ ಪ್ರಾಧ್ಯಾಪಕರಾಗಿ ಮತ್ತು ಮುಖ್ಯಸ್ಥರಾಗಿ, ಅನೇಕ ಎಂ.ಫಿಲ್. ಪಿಹೆಚ್.ಡಿ. ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ, ಸ್ವತಃ ಕಲಾವಿದರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಬಾರೋಕ್ ಕಲೆ, ಕಲಾವಿದರ ಜೀವನ, ಸಾಧನೆಗಳನ್ನು ಈ ಪುಸ್ತಕದ ಮೂಲಕ ಓದುಗರ ಗಮನಕ್ಕೆ ತಂದಿದ್ದಾರೆ.

ಈ ಮೊದಲು ಕಿರು ರೂಪದಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸ್ತಕಗಳನ್ನು ಈಗ ದೊಡ್ಡ ಗಾತ್ರದಲ್ಲಿ ಸಿದ್ಧಪಡಿಸಿ ಓದುಗರ ಕೈಗೆ ಇಡುತ್ತಿದ್ದೇವೆ. ಎಂದಿನಂತೆ ಕಲಾಸ್ತಕರು, ಕಲಾವಿದರು, ಕಲಾ ಇತಿಹಾಸ ಪ್ರೇಮಿಗಳು ಈ ಪುಸ್ತಕಗಳನ್ನು ಸ್ವಾಗತಿಸುತ್ತಾರೆಂದು ಆಶಿಸಲಾಗಿದೆ. ಈ ಪುಸ್ತಕವನ್ನು ಪ್ರಕಟಿಸಲು ಅನುಮತಿಕೊಟ್ಟ ಲೇಖಕರಾದ ಡಾ. ಎಸ್.ಸಿ. ಪಾಟೀಲರಿಗೆ, ಈ ಪುಸ್ತಕವನ್ನು ಮುದ್ರಿಸಿದ ಇಳಾ ಮುದ್ರಣದವರಿಗೂ ಪ್ರಕಟಿಸಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಲವಂತರಾವ್ ಪಾಟೀಲ್ ಅವರಿಗೂ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

● ನಾಡೋಜ ಡಾ. ಜೆ.ಎಸ್. ಖಂಡೇರಾವ್

ಅರಿಕೆ

(ಪ್ರಥಮ ಮುದ್ರಣ ೧೯೮೭)

ಬಾಲ್ಯದ ಮನಸ್ಸು ನಿಜವಾಗಿಯೂ ಒಂದು ಸಂಗ್ರಹಾಲಯ ಜೀವನದ ನೂರಾರು ಸಂಗತಿಗಳು ಮನಸ್ಸಿನಲ್ಲಿ ಸಂಗ್ರಹಗೊಳ್ಳುತ್ತ ದೊಡ್ಡವರಾದಾಗ ಗಟ್ಟಿಗೊಂಡು ಮೂರ್ತರೂಪ ಪಡೆಯುತ್ತವೆ. ನನ್ನ ಕುತೂಹಲಕ್ಕೆ ನನ್ನ ಚಟುವಟಿಕೆಗಳಿಗೆ ನಾನೋದಿದ ಓದಿಗೆ ಪೂರಕವಾಗಿ ನಾನು ಚಿತ್ರಕಲಾಧ್ಯಯನ ಮಾಡಿದ್ದು ಈ ಬಾಲ್ಯದ ಸಂಗ್ರಾಹ್ಯಬಲದಿಂದಲೇ ಒಂದೆಡೆ ಓದು ಇನ್ನೊಂದೆಡೆ ಕುತೂಹಲದ ಚಿತ್ರಕಲೆ ಓದಿನ ಜೊತೆಗೆ ಚಿತ್ರಕಲಾಭ್ಯಾಸ ಸಾಗಿದಂತೆ ಚಿತ್ರಕಲೆಯನ್ನು ಕುರಿತಾದ ಪುಸ್ತಕಗಳ ಕೊರತೆಯನ್ನು ತುಂಬಿಕೊಳ್ಳುವುದೇ ಕಠಿಣವಾಗಿತ್ತು. ಅಂತಹದರಲ್ಲಿಯೇ ನನ್ನ ಪರೀಕ್ಷೆಗಳೆಲ್ಲ ಮುಗಿದು ಹೋದವು.

ಮುಂದೆ ಶಿಕ್ಷಣ ವಿಷಯದಲ್ಲಿ ನಾನು ಸ್ನಾತಕೋತ್ತರ ಪದವಿಗಾಗಿ, ಕಿರು ಪ್ರಬಂಧ ಒಂದನ್ನು ರಚಿಸಬೇಕಾಗಿ ಬಂತು. ಆ ಸಂದರ್ಭದಲ್ಲಿ ನನ್ನ ಅಭಿರುಚಿಯನ್ನು ಅರ್ಥೈಸಿಕೊಂಡು ಪ್ರೊ. ವ್ಹಿ. ಜಿ. ಮಾರಿಹಾಳ ಅವರು ನನಗೆ "ಮಾಧ್ಯಮಿಕ ಶಾಲಾ ಹಂತದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ" ಎಂಬ ವಿಷಯವನ್ನು ಕೊಟ್ಟು ಸಂಶೋಧನಾ ಅಧ್ಯಯನಕ್ಕೆ ಮಾರ್ಗದರ್ಶನ ಮಾಡಿದರು. ಆಗ ನನಗೆ ವ್ಯಾಪಕವಾದ ಅಧ್ಯಯನದ ಅವಕಾಶ ದೊರಕಿತು. ಇನ್ನಷ್ಟು ಆಳಕ್ಕಿಳಿದೆ, ಅದರ ಪರಿಣಾಮವಾಗಿ ಸಾಹಿತ್ಯ ಮತ್ತು ಬದುಕಿಗೆ ಚಿತ್ರಕಲೆಯ ಅವಶ್ಯಕತೆಯೆಷ್ಟೆಂಬುದು ನನಗೆ ತಿಳಿದುಬಂದಿತು.

ಪ್ರಸ್ತುತ ಸಂದರ್ಭದಲ್ಲಿ ಕನ್ನಡದಲ್ಲಿ ಕೊರತೆ ಎನಿಸಬಹುದಾಗಿರುವ ನೂರು ಸಂಗತಿಗಳು ಮನಸ್ಸಿನಲ್ಲಿ ಕುಳಿತು ಏನಾದರೂ ಬರೆಯಬೇಕೆನಿಸುತ್ತಿತ್ತು. ಪೂಜ್ಯ ಗುರುಗಳಾದ ಡಾ. ಎಂ.ಎಂ. ಕಲಬುರ್ಗಿಯವರು, ಅಧ್ಯಯನಕ್ಕೆ ದಿಕ್‌ಸೂಚಿಯಾಗಿ ನಿಂತರು. ಡಾ. ಬಿ.ಅರ್. ಹಿರೇಮಠ ಅವರು ನನ್ನನ್ನು ಬರಹಕ್ಕೆ ತೊಡಗಿಸಿ ಬೆಲೆಯುಳ್ಳ ಮಾರ್ಗದರ್ಶನ ಮಾಡಿದ್ದಾರೆ. ಜೊತೆಗೆ ಗೆಳೆಯರ ಬಳಗ ಸದಾ ಉತ್ಸಾಹವನ್ನೀಯುತ್ತಿತ್ತು. ಇಂತಹ ಹಿನ್ನೆಲೆಯಲ್ಲಿ 'ಬಾರೋಕ್' ಕಲೆಯ ಲೇಖನಗಳು ರೂಪುಗೊಂಡವು. ಸಾಧನೆ, ಕರ್ನಾಟಕ ಭಾರತಿ, ಸಾಹಿತ್ಯ ಪರಿಷತ್ ಪತ್ರಿಕೆಗಳು ಅವುಗಳನ್ನು ಪ್ರಕಟಿಸಿದವು ಮತ್ತೆ ಕೆಲವು ಲೇಖನಗಳು ಸಿದ್ಧವಾದವು. ಅವುಗಳೆಲ್ಲ ಒಂದೇ ಸಂಪ್ರದಾಯಕ್ಕೆ ಒಳಪಟ್ಟಿದ್ದರಿಂದ ಬಾರೋಕ್ ಕಲೆಯ ವಿವಿಧ ಮಗ್ಗಲುಗಳ ಪರಿಚಯ ಒಂದೆಡೆಗೆ, ಮಾಡಿಕೊಡುವ ಪ್ರಯತ್ನದ ಫಲವಾಗಿ ಬಾರೋಕ್ ಕಲೆ ಪುಸ್ತಕ ಪ್ರಕಟಗೊಳ್ಳುತ್ತಿದೆ. ಸಹೃದಯರು ಇದನ್ನು ಸ್ವಾಗತಿಸುವಿರಾಗಿ ಆಶಿಸಿದ್ದೇನೆ. ತಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಈ ಪುಸ್ತಕ ಪ್ರಕಟಣೆಗೆ ಮುಂದಾದ ಧಾರವಾಡದ ಭಾರತೀಯ ಕಲಾಕೇಂದ್ರದ ಪ್ರಾಚಾರ್ಯರು

ಎಸ್.ಎಸ್. ಪಾಟೀಲ ಮತ್ತು ಅವರ ಸಿಬ್ಬಂದಿ ಬಳಗಕ್ಕೆ ಆಡಳಿತ ಮಂಡಳಿಗೆ ಕೃತಜ್ಞತೆಗಳು. ಈ ಕೃತಿಗೆ ಮುನ್ನುಡಿ ಮತ್ತು ಹಾರೈಕೆಗಳನ್ನು ಬರೆದುಕೊಟ್ಟು ಸಹಕರಿಸಿದ ಡಾ॥ ಎಸ್.ಎಮ್. ವೃಷಭೇಂದ್ರಸ್ವಾಮಿ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ ಧಾರವಾಡ ಹಾಗೂ ಡಾ. ಬಿ.ಕೆ. ಹಿರೇಮಠ ಪ್ರಾಧ್ಯಾಪಕರು, ಬಸವೇಶ್ವರ ಪದವಿ ಮಹಾವಿದ್ಯಾಲಯ ಬಾಗಲಕೋಟ ಪ್ರೊ. ಎ.ಯು. ಪಾಟೀಲ ಧಾರವಾಡ ಹಿಂದಿನ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಟಿ.ಪಿ. ಅಕ್ಕಿ ಮುಂತಾದ ಹಿರಿಯರನ್ನು, ವಿದ್ಯಾದಾನ ಸಮಿತಿಯ ಆಡಳಿತ ಮಂಡಳಿ, ಉಪ್ಪಿನ ಬೆಟಗೇರಿ ಇವರನ್ನು ಪ್ರೀತಿಯಿಂದ ನೆನೆಯುತ್ತೇನೆ.

೧೯೮೭ **–ಎಸ್.ಸಿ. ಪಾಟೀಲ**

ಉಪನ್ಯಾಸಕರು, ಎಸ್.ಜಿ.ವಿ. ಪ.ಪೂ.ಕಾಲೇಜ್

ಉಪ್ಪಿನ ಬೆಟಗೇರಿ, ಧಾರವಾಡ ಜಿಲ್ಲೆ

ದ್ವಿತೀಯ ಮುದ್ರಣ
(೨೦೦೯)

ಈ ನನ್ನ ಬಾರೋಕ್‌ಕಲೆ ಪುಸ್ತಕವು ೧೯೮೭ರಲ್ಲಿ ಧಾರವಾಡ ಭಾರತೀಯ ಕಲಾಕೇಂದ್ರ ದಿಂದ ಪ್ರಕಟವಾಗಿತ್ತು. ಈ ಪುಸ್ತಕವು ಈಗ ೨೨ ವರ್ಷಗಳ ನಂತರ ಎರಡನೆಯ ಮುದ್ರಣ ಕಾಣುತ್ತಿರುವುದು ನನಗೆ ಸಂತೋಷ ತಂದಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು, ಸದಸ್ಯರು ಈ ಕೃತಿಯನ್ನು ಆಯ್ಕೆಮಾಡಿ ಪ್ರಕಟಿಸುತ್ತಿರುವುದಕ್ಕೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ೧೯೯೨ರಲ್ಲಿ ಈ ಕೃತಿಗೆ ಲಲಿತಕಲಾ ಅಕಾಡೆಮಿಯು ನೀಡುವ ಉತ್ತಮ ಗ್ರಂಥ ಪ್ರಶಸ್ತಿಯು ಬಂದಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ.

ಈ ಕೃತಿ ಪ್ರಕಟವಾಗುವ ವಿಷಯವನ್ನು ನನ್ನ ವಿದ್ಯಾಗುರುಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿಯ ಮಾನ್ಯ ಕುಲಪತಿಗಳು, ಆದ ಡಾ. ಎ. ಮುರಿಗೆಪ್ಪ ಅವರಲ್ಲಿ ಪ್ರಸ್ತಾಪಿಸಿದಾಗ ತುಂಬ ಸಂತೋಷಪಟ್ಟು ಶುಭ ಹಾರೈಸಿದ್ದಾರೆ, ಹಾಗೆಯೇ ಕುಲಸಚಿವರಾದ ಶ್ರೀ ಎಸ್.ಎಸ್. ಪೂಜಾರ್ ಅವರಿಗೆ ಕೃತಜ್ಞತೆಗಳು. ಈ ಕೃತಿ ಪ್ರಕಟಣೆಯಲ್ಲಿ ನೆರವಾದ ಡಾ. ಕೇಶವನ್ ಪ್ರಸಾದ್ ಕೆ. ಮರಟ್ಟಿ, ಡಾ॥ ಕೆ.ಎಂ. ಮೈತ್ರಿ. ವಿದ್ಯಾರ್ಥಿ ಮಿತ್ರರಾದ ಡಾ॥ ಸಿದ್ದಲಿಂಗಸ್ವಾಮಿ ಹಿರೇಮಠ, ಡಾ॥ ಜಿ. ಲಕ್ಷ್ಮೀಪತಿ, ಶ್ರೀ ಶಂಕರ ಕುಂದಗೋಳ, ಡಾ. ಮೋಹನ್‌ರಾವ್ ಬಿ. ಪಂಚಾಳ್ ಮುಖಪುಟ ವಿನ್ಯಾಸ ಮಾಡಿದ ಎನ್.ಎಮ್. ಅಂಗಡಿ ಅವರನ್ನು ಮತ್ತು ಬೆರಳಚ್ಚು ತಿದ್ದುವಲ್ಲಿ ನೆರವಾದ ಬಿ.ಎಂ. ಪಾಟೀಲ ಮುಂತಾದವರನ್ನು ಪ್ರೀತಿಯಿಂದ ನೆನೆಯುತ್ತೇನೆ. ನನ್ನ ಬರವಣಿಗೆಯ ಹಿಂದೆ ಹಲವಾರು ರೀತಿಯಲ್ಲಿ ನೆರವು ನೀಡಿದ ಪತ್ನಿ ಶಶಿಕಲಾ ಪಾಟೀಲ ಮತ್ತು ಮಕ್ಕಳಾದ ಪ್ರತಿಭಾ, ಚಿತ್ರಾ ಅವರನ್ನು ಸ್ಮರಿಸದೇ ಇರಲಾರೆ. ಪ್ರಕಟಣೆಯಲ್ಲಿ ಸಹಕರಿಸಿದ ಎಲ್ಲರಿಗೂ ಮತ್ತೊಮ್ಮೆ ವಂದನೆಗಳು.

ಡೀನ್,

ಲಲಿತಕಲಾ ನಿಕಾಯ, **–ಡಾ. ಎಸ್.ಸಿ. ಪಾಟೀಲ**

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ : ಒಂದು

ಬಾರೋಕ್ ಕಲೆಯ ಹುಟ್ಟು ಮತ್ತು ಬೆಳವಣಿಗೆ

ಒಂದು ಸಂಸ್ಕೃತಿ ಮುಂದಿನ ಮತ್ತೊಂದು ಸಂಸ್ಕೃತಿಗೆ ತನ್ನ ಬಳುವಳಿಯನ್ನು ವಂಶವಾಹಿನಿಯಾಗಿ ಕೊಡುವುದು ಆಶ್ಚರ್ಯದ ವಿಷಯವಲ್ಲ. ಅದು ಕೆಲವು ಸಲ ತನಗರಿವಿಲ್ಲದೆಯೇ ನಡೆಯುವ ಕ್ರಿಯೆ. ಇಟಲಿಯ ಬಗೆಗೆ ಹೇಳುವಾಗ ಈ ಮಾತು ಹೆಚ್ಚು ಸೂಕ್ತವಾಗುತ್ತದೆ. ಗ್ರೀಕ್ ಸಂಸ್ಕೃತಿಯ ವಾರಸುದಾರಿಕೆ ರೋಮದ್ದಾದರೆ, ರೋಮಿನ ವಾರಸುದಾರಿಕೆಯ ಹೆಜ್ಜೆಯ ಗುರುತುಗಳು ಇಟಲಿಯ ಸಾಹಿತ್ಯ ಕಲೆಗಳಲ್ಲಿ ಪಡಿಮೂಡಿ ಹೊಸ ರೂಪ ತಳೆಯಲು ಕಾರಣವಾಗಿದೆ. ರೋಮಿನ ಧರ್ಮ, ತತ್ವಜ್ಞಾನ, ಸಾಹಿತ್ಯಕಲೆಗಳು ಇಟಲಿಯ ಕಲೆಯ ಬೆಳವಣಿಗೆಗೆ ಭದ್ರ ತಳಹದಿಯಾಗಿವೆ.

ಇಟಲಿಯ ಸಾಂಸ್ಕೃತಿಕ ಕಲಾ ಇತಿಹಾಸದ ಪ್ರವಾಹದಲ್ಲಿ ಸಣ್ಣ ದೊಡ್ಡ ತೆರೆಗಳಿಗಿಂತಲೂ ಕೆಲವು ಶತಮಾನಗಳಲ್ಲಿ ಕಲಾವಿದರ ಮಹಾಪೂರಗಳೇ ಬಂದುಹೋಗಿವೆ. ಈ ಮಾಹಾಪೂರದಿಂದ ಹಾನಿಗಿಂತ ಲಾಭವೇ ಹೆಚ್ಚಾಗಿ ಆದದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇಟಲಿಯಲ್ಲಿ ಹದಿನಾರರಿಂದ ಹದಿನೆಂಟನೆಯ ಶತಮಾನಗಳ ಬಹುಮುಖ ಕಲಾಸಾಧನೆಯನ್ನು ಸರಿಗಟ್ಟುವ ದೇಶ ಮತ್ತೊಂದಿಲ್ಲ ಎನ್ನುವಷ್ಟರ ಮಟ್ಟಿಗೆ ಕಲಾಸಾಧನೆ ಪ್ರಪುಲ್ಲಿತವಾಗಿ ಬೆಳೆದುಬಂದಿರುವದು ಐತಿಹಾಸಿಕ ಸತ್ಯ.

ಇಟಲಿಯ ವಾಸ್ತುಕಲೆ, ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯ, ಮುಂತಾದ ಕಲೆಗಳು, ರ್‍ಯಾಪಲ್, ಲಿಯೊನಾರ್ಡೊ ದವಿಂಚಿ, ರೆಂಬ್ರಾಂಟ್, ಮೈಕೆಲ್ ಎಂಜಿಲೋ, ಬರ್ನೀನಿ, ಜಿಯತ್ತೋ, ಡಾಂಟೆ, ಪೆಟ್ರಾರ್ಕ್, ಬೋಕಾಷಿಯೋ ಮುಂತಾದ ಸೃಜನಶೀಲ ಕಲಾವಿದರು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನು ನವೀನ ರೂಪದಲ್ಲಿ ತರಲು ನಡೆಸಿದ ಚಳವಳಿ ಕಲಾಲೋಕಕ್ಕೊಂದು ಹೊಸ ತಿರುವು ನೀಡಿತು. ಇಟಲಿಯ ಕಲೆ ಹಲವಾರು ವರ್ಣಗಳಲ್ಲಿ ಹಲವಾರು ವಿಧಗಳಲ್ಲಿ ಅರಳುತ್ತಿರುವ ಸಂದರ್ಭದಲ್ಲಿ ಅಲ್ಲಿಯ ಖ್ಯಾತ ಕಲಾವಿದರು ತಮ್ಮ ಅಭಿವ್ಯಕ್ತಿಯನ್ನು ವಿಸ್ತರಿಸಲು ನಡೆಸಿದ ಪ್ರಯತ್ನದ ಪರಿಣಾಮವೇ 'ಬಾರೋಕ್ ಕಲೆ'ಯಾಗಿದೆ.

ಬಾರೋಕ್ ಕಲೆ ಎಂದರೇನು?

Baroque from the Portuguese word 'Barrocc' Meaning an irregularly shaped pearl[೧] ಬಾರೋಕೋ ಎಂಬ ಪೋರ್ಚುಗೀಸ್ ಶಬ್ದದಿಂದ 'ಬರೋಕ' ಎಂಬ ಪೋರ್ಚುಗೀಸ್ ಶಬ್ದದಿಂದ 'ಬರೋಕ' ಎಂಬ ಶಬ್ದ ಹುಟ್ಟಿಕೊಂಡಿತು. 'ಆಕಾರಗೆಟ್ಟ ಮುತ್ತು' ಎಂದು ಆ ಮಾತಿನ ಅರ್ಥ. ಈ ಶತಮಾನದ ತನಕವೂ ಆ ಅರ್ಥವೇ ಎಂದರೆ 'ವಿಕೃತ' ಇಲ್ಲವೆ 'ಸಂಯಮರಹಿತ' ಎಂಬ ಅರ್ಥವೇ ಬಾರೋಕ್ ಎಂಬ ಶಬ್ದಕ್ಕೆ ರೂಢಿಯಲ್ಲಿತ್ತು[೨]. ಸ್ಪಾನಿಷ್ ಭಾಷೆಯಲ್ಲಿ ಬಾರೋಕ್ ಎಂದರೆ ಅನಿರ್ಧಿಷ್ಟ ಅಕಾರದ ಮುತ್ತು. ಅಥವಾ ಬಿರಿಯುವದೇನೋ ಎಂಬಂತೆ ತೋರುವ ವರ್ತಲಾಕಾರದ 'ಮುತ್ತು' ಎಂದು ಹೆಸರಿದೆ. ಆಕೃತಿಗಳು ತಮ್ಮ ಮೇರೆಯನ್ನು ಮೀರಿ ಹೊರಬರುವವೇನೋ ಎಂಬಂತೆ ಕಾಣುವ ವಾಸ್ತುಶಿಲ್ಪ ಮತ್ತು ಚಿತ್ರಗಳನ್ನು ಬಾರೋಕ್ ಕಲೆ ಎಂದು ಕರೆಯಲಾಗುತ್ತದೆ. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ವಿಪರೀತ ಪಾಂಡಿತ್ಯ ಪ್ರದರ್ಶನ ಮಾಡುತ್ತಿದ್ದವರ ಅವಹೇಳನಕ್ಕಾಗಿ ಬಾರೋಕ್ ಪದವನ್ನು ಬಳಸುತ್ತಿದ್ದುದು ಉಂಟು.[೩] ೧೬೦೦ರಿಂದ ೧೭೫೦ರ ತನಕ ಯುರೋಪಿನಲ್ಲಿ ಕಾಣಿಸಿದ ಕಲಾಪ್ರವೃತ್ತಿ ಮತ್ತು ಸೃಷ್ಟಿಗಳ ವಿಚಾರದಲ್ಲಿ ಈ ಮಾತನ್ನು ತಾತ್ಸಾರದ ದೃಷ್ಟಿಯಿಂದಲೇ ಬಳಸಿದ್ದಾರೆ. ಹಿಂದಣ ಕಾಲದ ಕಲಾಕೃತಿಗಳನ್ನು ಮೂದಲಿಸುವದಕ್ಕಾಗಿಯೂ ಈ ಶಬ್ದ ಬಳಸಿದ್ದುಂಟು.[೪] ಹದಿನೇಳನೆಯ ಶತಮಾನದ ಐರೋಪ್ಯ ಕಲೆಯನ್ನು ಬಣ್ಣಿಸುವದಕ್ಕೆ ಇಂದು ಬಾರೋಕ್ ಪದವನ್ನು ಬಳಸುತ್ತಾರೆ.[೫] ಹದಿನೇಳನೆಯ ಶತಮಾನದ ಇಟಲಿಯ ಕಲೆ ಬಾರೋಕ್ ಕಲೆ[೬]ಯೇ ಆಗಿದೆ. ಬಾರೋಕ್ ಎಂಬ ಶಬ್ದವನ್ನು ಕಲೆ ಹಾಗೂ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಮೊಟ್ಟಮೊದಲು ಉಪಯೋಗಿಸಿದವರು ಹತ್ತೊಂಬತ್ತನೆಯ ಶತಮಾನದ ಜರ್ಮನಿಯ ಬರ್ಕ್‌ಹಾರ್ಡ್ಜ್ ಮತ್ತು ವುಲ್ಫ್‌ಲಿನ್ ಎಂಬ ಕಲಾವಿಮರ್ಶಕರು. ಇಂಗ್ಲಿಷಿನಲ್ಲಿ ಈ ಶಬ್ದವನ್ನು ಮೂರು ತೆರನಾದ ಬೇರೆ ಬೇರೆ ಅರ್ಥಗಳಲ್ಲಿ ಬಳಸಲಾಗಿದೆ. ಮೊದಲನೆಯದಾಗಿ ಹದಿನಾರನೆಯ ಶತಮಾನದ ಉತ್ತರ ಭಾಗದಿಂದ ಹಿಡಿದು ಹದಿನೆಂಟನೆಯ ಶತಮಾನದ ಪೂರ್ವಭಾಗದವರೆಗಿನ ಅವಧಿಯಲ್ಲಿ ಅಂದರೆ ಮ್ಯಾನರಿಸಮ್ ಪಂಥ ಮತ್ತು ರೋಕೋಕೋ ಯುಗದ ನಡುವಿನ ಕಾಲದಲ್ಲಿ ಪ್ರಚಲಿತವಾಗಿದ್ದ ಕಲಾಸಂಪ್ರದಾಯವನ್ನು ಬಾರೋಕ್ ಶೈಲಿ ಎನ್ನುತ್ತಾರೆ. ಎರಡನೆಯದಾಗಿ ಹದಿನೇಳನೆಯ ಶತಮಾನದಲ್ಲಿ ಬಳಸುತ್ತಿದ್ದ ವಿಶಿಷ್ಟ ಶೈಲಿಯಿಂದಾಗಿ ಆ ಶತಮಾನವನ್ನೇ ಬಾರೋಕ್ ಯುಗವೆನ್ನುವುದುಂಟು. ಮೂರನೆಯದಾಗಿ ಬಾರೋಕ್ ಎಂಬ ವಿಶೇಷಣವನ್ನು

---

೧. Dagobert D, Runes & Harry, G. Schrickel (Ed): Encyclopedia of the Arts. Page-95

೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೬

೩. ಜ್ಞಾನಗಂಗೋತ್ರಿ : ಕಲೆ, ಸಾಹಿತ್ಯ, ಸಂಪುಟ-೫, ಪುಟ-೪೦೨

೪. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೬

೫. ಜ್ಞಾನಗಂಗೋತ್ರಿ : ಕಲೆ, ಸಾಹಿತ್ಯ, ಸಂಪುಟ-೫, ಪುಟ-೨೩

೬. Erwino Christensen : The History of Western Art, Page-254

ಅಸಮರೂಪವುಳ್ಳ ವಕ್ರವಿಕ್ರಿತ ವಿಚಿತ್ರ ಕಲ್ಪನೆಯ ಅತ್ಯಾಲಂಕಾರದ ಎಂಬ ಮಾತುಗಳಿಗೆ ಸಂವಾದಿಯಾಗಿ ಬಳಸಿದ್ದುಂಟು[೭] ಎಂಬ ವಾದವೂ ಇದೆ.

ಇಂದಿನ ಕಲಾವಿಮರ್ಶಕರು ಮತ್ತು ಚರಿತ್ರಕಾರರು ಮಾತ್ರ ಈ ಬಾರೋಕ್ ಪ್ರವೃತ್ತಿಯು ಸ್ವತಂತ್ರವಾದುದಲ್ಲ; ವಿಕೃತ ರೂಪದ್ದು ಅಲ್ಲ; ಅದು ಪುನರುಜ್ಜೀವನ ಯುಗಕ್ಕೆ ಸಂಬಂಧಿಸಿದ್ದೆಂದೂ, ಅದರದೇ ಒಂದು ಫಲವೆಂದು[೮] ಅಭಿಪ್ರಾಯ ಪಡುವವರಿದ್ದಾರೆ. ಹೀಗೆ ವಾದ ವಿವಾದಗಳಿದ್ದರೂ ಕಲೆಯ ಸಂದರ್ಭದಲ್ಲಿ ಬಾರೋಕ್ ಎನ್ನುವ ಮಾತನ್ನು 'ವೈವಿಧ್ಯಮಯವಾದದ್ದು, ವಿವಿಧ ಅಂಶಗಳನ್ನು ಒಳಗೊಂಡು ಮೇಳೈಸಿ ಸಮರಸವನ್ನು ಪ್ರಚೋದಿಸುವಂತಹದು' ಎಂಬ ಅರ್ಥದಲ್ಲಿ ಬಳಸಬೇಕೆಂದು[೯] ಹೇಳುವ ವಿಮರ್ಶಕರ ಮಾತನ್ನು ಪ್ರಾಯಶಃ ಒಪ್ಪಬಹುದಾಗಿದೆ. ಒಟ್ಟಿನಲ್ಲಿ ಬಾರೋಕ್ ಕಲೆ ಇಂದೊಂದು ನವೀನ ರೂಪದಲ್ಲಿ ಪ್ರಾರಂಭಗೊಂಡ ಕಲಾ ರೂಪವಾಗಿದೆ.

ಬಾರೋಕ್ ಕಲೆ ಧಾರ್ಮಿಕ ಪ್ರೇರಣೆ :

ಪ್ರಪಂಚದ ಯಾವುದೇ ಸಂಸ್ಕೃತಿಯನ್ನು ಅವಲೋಕಿಸಿದರೂ ಆ ಸಂಸ್ಕೃತಿಯಲ್ಲಿ ಯಾವುದೋ ಪ್ರಬಲವಾದ ಧರ್ಮದ ದಟ್ಟಪ್ರಭಾವ, ಅಲ್ಲಿಯ ಸಾಹಿತ್ಯ, ಸಂಗೀತ ಕಲೆಗಳಲ್ಲಿ ಬೀರಿರುವದು ಕಂಡುಬರುತ್ತದೆ. ಇಟಲಿಯ ಕಲೆಯೂ ಕೂಡ ಕ್ರೈಸ್ತ ಧರ್ಮದ ಕೊಡುಗೆಯಾಗಿ ಕೆಲವು ಕಲಾವಿದರ ಹೊಸತನದ ಪ್ರತೀಕವಾಗಿ ಹೊರಹೊಮ್ಮಿದೆ. ಬಾರೋಕ್ ಕಲೆಗೆ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದ ಕೈ ಕ್ರೈಸ್ತ ಧರ್ಮದ್ದಾಗಿದೆ.

ಇಟಲಿ, ಆಷ್ಟ್ರೀಯ, ಜರ್ಮನ್, ಪ್ಲಾಂಡರಗಳಲ್ಲಿಯ ರೋಮನ್ ಕ್ಯಥೋಲಿಕ್ ಧರ್ಮಪೀಠಗಳವರು ಬಾರೋಕ್ ಕಲೆಯ ಪೋಷಕರು, ಅವರು ಧರ್ಮ ಪ್ರಚಾರಕ್ಕಾಗಿ ಈ ಕಲೆಯನ್ನು ಸಾಕಷ್ಟು ಬಳಸಿಕೊಂಡರು. ಇಂದರಿಂದ ಬಾರೋಕ್ ಕಲೆ ಆರಂಭದೆಸೆಯಲ್ಲಿ ಇಗರ್ಜಿಗಳಿಗೆ ಸೀಮಿತವಾಗಿದ್ದಿತು.[೧೦] ಕ್ರೈಸ್ತ ಧರ್ಮದ ಅನುಯಾಯಿಗಳು ಧರ್ಮ ಪ್ರಚಾರದ ಸಾಧನವಾಗಿ ಅದರ ಭವ್ಯತೆ ಮತ್ತು ನಿಗೂಢತೆಗಳನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಈ ಕಲಾಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡರು. ರೋಮ್, ಪ್ಲಾರೆನ್ಸ್, ವೇನಿಸ್ ಈ ನಗರಗಳು ಅಲ್ಲಿಯ ಶ್ರೀಮಂತ ಕುಟುಂಬಗಳು ಇಟಲಿಯ ಕಲೆಗೆ ಪ್ರೋತ್ಸಾಹ ಕೊಡುವುದರಲ್ಲಿ ಪರಸ್ಪರ ಸ್ಪರ್ಧೆಯೇ ನಡೆಸಿದವೆಂದರೆ[೧೧] ತಪ್ಪಾಗಲಾರದು. ಬಾರೋಕ್ ಶೈಲಿಯ ವಾಸ್ತುವಿನ್ಯಾಸಕ್ಕೆ ಶಿಲ್ಪಕಲೆಗೆ, ಭಿತ್ತಿ ಚಿತ್ರ (ಚಿತ್ರಕಲೆ)ಗಳಿಗೆ ರಾಜಾಶ್ರಯದಿಂದ ಮತ್ತು ಧರ್ಮಪೀಠದವರಿಂದ ಕಲಾವಿದರಿಗೆ ಸಾಕಷ್ಟು ಸಹಾಯಸೌಲಭ್ಯ, ಪ್ರೋತ್ಸಾಹಗಳನ್ನು ಒದಗಿಸಿಕೊಟ್ಟು ಈ ಬಾರೋಕ್ ಕಲೆಯ ಬೆಳವಣಿಗೆಗೆ ಎಲ್ಲ ರೀತಿಯಿಂದಲೂ ಚೈತನ್ಯ ತುಂಬಿದರು. ಮೇಲಾಗಿ ಬಾರೋಕ್

---

೭ ವಿಶ್ವಕೋಶ: ಸಂಪುಟ-೭, ಪುಟ-೩೮೫

೮. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೬

೯. ವಿಶ್ವಕೋಶ; ಸಂಪುಟ-೭, ಪುಟ-೩೮೫

೧೦. ಜ್ಞಾನಗಂಗೋತ್ರಿ : ಕಲೆ, ಸಾಹಿತ್ಯ, ಸಂಪುಟ-೫, ಪುಟ-೪೦೩

೧೧. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೫೬

ಕಲಾ ಚಳವಳಿಯ ಪ್ರಮುಖ ಕಲಾವಿದರು ಕ್ರೈಸ್ತ ಧರ್ಮದ ಅನುಯಾಯಿಗಳೂ ಆಗಿದ್ದರಿಂದ ಈ ಕಲೆ ಕ್ರೈಸ್ತ ಧರ್ಮದ ನೆರಳನ್ನು ಬಿಟ್ಟು ಬರಲಾಗಲಿಲ್ಲ. ಈ ಕಾರಣಕ್ಕಾಗಿಯೇ ಬಾರೋಕ್ ಕಲೆ ಕ್ರೈಸ್ತ ಧರ್ಮದ ಚೌಕಟ್ಟಿನಲ್ಲಿಯೇ ಉಳಿದು ಕಣ್ಮರೆಯಾಯಿತು.

ಬಾರೋಕ್ ಕಲೆಯ ಪ್ರಮುಖ ಕಲಾವಿದರು :

ಬಾರೋಕ್ ಕಲಾಪಂಥದ ಚಳವಳಿಯನ್ನು ಹಲವಾರು ಕಲಾವಿದರು ಮುಂದುವರಿಸಿ ಕೊಂಡು ಬಂದರೂ ಈ ಕಲೆಯ ಜನಕನೆಂದು ಹೆಸರು ಪಡೆದವನು ಇಟಲಿಯ ಪ್ರಖ್ಯಾತ ಕಲಾವಿದ ಮೈಕೆಲ್ ಎಂಜಿಲೋ, ಈ ಪಂಥದ ಅನುಯಾಯಿಗಳಾಗಿ ಬಂದ ಪ್ರಮುಖರಲ್ಲಿ ಬರ್ನೀನಿ, ರೂಬಿನ್ಸ, ಗಿಯೊವಾನಿ, ಎಲ್‌ಗ್ರೇಕೊ, ರೆಂಬ್ರಾಂಟ, ವೆಲ್ಜಿಜ್, ರ್‍ಯಾಪಲ್, ಟೆಷನ್, ಗುರ್ವಿನೋ ಗುರ್ವಾನೀ, ಬೋರೋಮಿನಿ, ಪಟ್ರಾಡಿಕೊರ್ಟನಾ – ಮುಂತಾದ ಕಲಾವಿದರು. ಬಾರೋಕ್ ಕಲಾಸಂಪ್ರದಾಯವನ್ನು ಒಬ್ಬೊಬ್ಬರು ಒಂದೊಂದು ಮುಖದಿಂದ ಸ್ವತಂತ್ರವಾಗಿ ಈ ಕಲೆಯನ್ನು ಬೆಳೆಸಿದರು.

ಬಾರೋಕ್ ಕಲೆಯ ಪ್ರಸಾರ :

ರೋಮಿನಲ್ಲಿ ಬಾರೋಕ್ ಕಲೆ ಹದಿನಾರನೆಯ ಶತಮಾನದ ಕೊನೆಯ ಭಾಗದಲ್ಲಿ ಪ್ರಾರಂಭಗೊಂಡು ಅದು ವ್ಯಾಪಕವಾಗಿ ಬೆಳವಣಿಗೆಯನ್ನು ಹೊಂದಿದ್ದುದು ಇಟಲಿ ಹಾಗೂ ಯುರೋಪಿನ ರಾಷ್ಟ್ರಗಳಲ್ಲಿ ಪ್ರಮುಖವಾಗಿ ರೋಮ್, ಫ್ಲಾರೆನ್ಸ್, ವೇನಿಸ್, ಆಷ್ಟ್ರೀಯಾ, ಜರ್ಮನಿ, ಫ್ಲಾಂಡರಗಳಲ್ಲಿ; ಹದಿನೆಂಟನೆಯ ಶತಮಾನದ ಮಧ್ಯದವರೆಗೆ ಬೆಳೆದು ಮುಂದೆ ಇದರ ಪ್ರಭಾವ ಕಡಿಮೆಯಾಗಿದ್ದುದು ಕಂಡುಬರುತ್ತದೆ.

ಬಾರೋಕ್ ಕಲೆಯ ಲಕ್ಷಣಗಳು :

ಕಲಾಭಿಜ್ಞರು ಈ ಶೈಲಿ ವಿಶೇಷವನ್ನು ಮ್ಯಾನರಿಸಂ (Mannarism) ಎಂಬುದಾಗಿ ಕರೆದಿದ್ದಾರೆ. ಕಲಾಶೈಲಿಯ ಯಾವುದಾದರೊಂದು ಲಕ್ಷಣವನ್ನು ಅತಿಶಯವಾಗಿ ಬಳಸುವಿಕೆಗೆ ಆ ಹೆಸರನ್ನು ಹೇಳುತ್ತಾರೆ[೧೨]. ವುಲ್‌ಫ್ಲೀನ್‌ರವರು ಬಾರೋಕ್ ಕಲೆಯ ಲಕ್ಷಣಗಳನ್ನು ವಾಸ್ತುಶಿಲ್ಪ ಮತ್ತು ಚಿತ್ರಕಲೆಯನ್ನಾಗಿ, ಪೇಂಟರ್ಸ್ ಮತ್ತು ಪ್ಲಾಸ್ಟಿಕ್ ಕಲಾವಿದರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ವಿಂಗಡನೆ ಮಾಡುತ್ತಾರೆ[೧೩]. ಇಲ್ಲಿ ಕೆಲವು ಪ್ರಮುಖ ಲಕ್ಷಣಗಳನ್ನು ನೋಡಬಹುದಾಗಿದೆ.

೧. ಶರೀರ ಮತ್ತು ವಸ್ತ್ರಾಲಂಕಾರಗಳಲ್ಲಿ ಪ್ರಬಲವಾದ ಚಲನಶೀಲತೆಯನ್ನು ಹೊಂದಿದೆ.
೨. ಶಿಲ್ಪದಲ್ಲಿ ಸಾಧಿಸಿದ ಉಬ್ಬು ಇಳಿತಗಳಿಂದ ಉಂಟಾಗುವ ನೆರಳಬೆಳಕುಗಳ ವಿನ್ಯಾಸ ಶಿಲ್ಪದ ಒಟ್ಟು ಪರಿಣಾಮ : ಸಾಧನೆಯ ಒಂದು ಮುಖ್ಯ ಅಂಶ[೧೪] ಉದಾ: ರೆಂಬ್ರಾಂಟನ ಕಲಾಕೃತಿಗಳನ್ನು ಹೆಸರಿಸಬಹುದು.

---

೧೨. ಡಾ. ಶಿವರಾಮ ಕಾರಂತ; ಕಲಾ ಪ್ರಪಂಚ, ಪುಟ-೨೮೨.

೧೩. Heinrich wolffflin differentiated between paniterly (malerisch) and plastic (sculpuresque) The baroque as painterly (Pictoorial) (Erwwino, Christensen : The History of Western Art- Page-254)

೧೪. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೪೦೩

೩. ಉಪಯೋಗಿಸಿದ ಬಣ್ಣಗಳು, ಬೆಳಕು, ಸ್ಥಳ, ಬಿಡಿ ಬಿಡಿಯಾಗಿರುವುದು.

೪. ಈಗರ್ಜಿಗಳ ಗೋಡೆಗಳು ಹೊರಗೂ ಒಳಗೂ ಬಾಗಿಕೊಂಡಂತಿರುವದು ಈ ವಾಸ್ತುಶಿಲ್ಪದ ರಚನೆಯ ವೈಶಿಷ್ಟ್ಯವಾಗಿದೆ.[೧೫]

೫. ಬಾರೋಕ್ ಕಲೆಯ ವಾಸ್ತು ವಿನ್ಯಾಸದಲ್ಲಿ ಕಟ್ಟಡಗಳ ಛಾವಣಿಗಳು ಆಕರ್ಷಣೀಯವಾಗಿ ಭವ್ಯತೆಯ ವಿಪರೀತ ಅಲಂಕರಣಗಳಿಂದ ಆವೃತವಾಗಿರುವುದು.

೬. ಬಾರೋಕ್ ಕಲೆಯಲ್ಲಿ ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ ಇವು ಮೂರು ಒಟ್ಟುಗೂಡಿ ನೋಡುವವರಲ್ಲಿ ಉದಾತ್ತ ಭಾವನೆಗಳನ್ನು ಮೂಡಿಸುತ್ತದೆ.

೭. ಈ ಶೈಲಿಯ ಕಲೆಯಲ್ಲಿ ಒಂದು ಕಲಾಕೃತಿಯ ಅಂಗಗಳಿಗಿಂತ ಆಕೃತಿಯ ಒಟ್ಟು ಪರಿಣಾಮದ ಕಡೆಗೆ ಹೆಚ್ಚು ಗಮನ ಕೊಡಲಾಗುತ್ತದೆ.

೮. ಬಾರೋಕ್ ವಾಸ್ತುಶಿಲ್ಪದ ವಿನ್ಯಾಸದಲ್ಲಿ ಬೃಹದಾಕಾರದ ಸ್ಥಂಭಗಳು ಕಟ್ಟಡದ ನೆಲಗಟ್ಟಿನಿಂದ ಆರಂಭವಾಗಿ ಅಂತಸ್ತುಗಳನ್ನು ಹಾಯ್ದು ಛಾವಣಿಯನ್ನು ಮುಟ್ಟುತ್ತವೆ.[೧೬]

೯. ಬಾರೋಕ್ ವಾಸ್ತು ವಿನ್ಯಾಸವು ನಾಟಕೀಯವಾದ (ಆರ್ಟಿಫಿಸಿಯಲ್) ಪರಿಣಾಮವನ್ನು ಹೊಂದಿದೆ.[೧೭]

೧೦. ಕ್ರೈಸ್ತ ಧರ್ಮದ ಭವ್ಯತೆ ಮತ್ತು ನಿಗೂಢತೆಗಳನ್ನು ಹೊರಹಾಕುವ ಉದ್ದೇಶವನ್ನು ಬಾರೋಕ್ ಕಲೆ ಹೊಂದಿರುವುದು.

೧೧. ಚಿತ್ರ, ಶಿಲ್ಪ, ವಾಸ್ತುಕೃತಿಗಳ ಆಂತರಿಕ ಅಲಂಕಾರ ಮೊದಲಾದವುಗಳಲ್ಲಿ ಉದ್ದೇಶಪೂರ್ವಕವಾಗಿ ಸೃಷ್ಟಿಸಿದ ಭ್ರಮಾಲೋಕ ಕಾಣಿಸುತ್ತದೆ. ಚಿತ್ರಗಳಲ್ಲಿ ಬೆಳಕು ಮತ್ತು ನೆರಳುಗಳಲ್ಲಿನ ಪರಿಭೇದಗಳು ತೀಕ್ಷ್ಣವಾಗಿ ಕಾಣಿಸುತ್ತವೆ. ದೃಶ್ಯಾಂತರಗಳನ್ನು ತೋರಿಸುವುದರಲ್ಲಿ ದೂರವನ್ನು ಕುಗ್ಗಿಸಿ ತೋರಿಸುತ್ತಾರೆ.[೧೮]

೧೨. ಬಾರೋಕ್ ಕಲೆಯಲ್ಲಿ ಒತ್ತು ಬೀಳುವುದು ಅದರ ಸಮರಸದ ಅಂಶದ ಮೇಲೆ. ವಿವಿಧ ಅಂಶಗಳು ಸಮ್ಮಿಳನಗೊಂಡು ಸಮಗ್ರ ಪರಿಣಾಮಕ್ಕೆ ಪೋಷಕವಾಗುವುದು ಬಾರೋಕ್ ಕಲೆಯ ಮುಖ್ಯ ಲಕ್ಷಣ[೧೯]ವಾಗಿದೆ.

---

೧೫. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೪೦೩

೧೬. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೪೦೩

೧೭. Baroque architecture aimed at dramtic effects and Boroque sculpture 'portrayed emotional intensity or immitated the starting effects of nature. (...Erwino christensen : The History of Western Art, Page-254)

೧೮. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೬

೧೯. ವಿಶ್ವಕೋಶ: ಸಂಪುಟ-೭, ಪುಟ-೩೮೫

೧೩. ಬಾರೋಕ್ ಕಲೆ ಸಾಧಿಸುವ ಪರಿಣಾಮ ನೋಡುವವನ ಭಾವನೆಗಳನ್ನು ಹೊಂದಿಕೊಂಡಿರುತ್ತದೆ. ನೋಡುವವನಿಗೆ ಕಲೆಯ ವಸ್ತು ವಾಸ್ತವತೆಯ ಭ್ರಮೆಯನ್ನು ಕಲ್ಪಿಸುವಂತಿರಬೇಕು. ನಿಜದ ತೋರ್ಕೆಯೇ ಅದರ ಜೀವಾಳ[೨೦]ವಾಗಿದೆ.

ಹೀಗೆ ಬಾರೋಕ್ ಕಲೆ ವಿಶಿಷ್ಟವಾದ ಅಂಶಗಳಿಂದ ತನ್ನದೇ ಆದ ಲಕ್ಷಣಗಳನ್ನು ಹೊಂದಿದೆ. ಸುಮಾರು ಎರಡು ಶತಮಾನ ಈ ಕಲೆ ತನ್ನ ಆಳಿಕೆಯನ್ನು ಮಾಡಿ ಕಲಾವಲಯದಲ್ಲಿ ಒಂದು ಹೊಸ ತಿರುವು ತಂದುಕೊಟ್ಟಿತು.

ಈ ಶೈಲಿಯ ವಾಸ್ತು, ಶಿಲ್ಪ ಚಿತ್ರಕಲೆಗಳಲ್ಲಿ ಗುರುತಿಸಬೇಕಾದ ಪ್ರಮುಖ ಅಂಶವೆಂದರೆ ಕೃತಿಗಳನ್ನು ನೋಡುತ್ತ ಹೋದಂತೆ ನಮ್ಮ ಕಣ್ಣನ್ನು ಕೂಡ ಭ್ರಮಾಲೋಕಕ್ಕೊಯ್ಯುವ ಪ್ರವೃತ್ತಿ ಇಲ್ಲಿ ಸಾಕಷ್ಟು ಕಾಣಿಸಿಕೊಂಡಿದೆ. ಒಮ್ಮೊಮ್ಮೆ ಈ ಅವಧಿಯ ಸೃಷ್ಟಿಗಳು ಕಲಾತಂತ್ರಗಳ ಮೇಲೆ ಕಲಾವಿದನಿಗಿರುವ ಸ್ವಾಮ್ಯದಿಂದಾಗಿ ಕಾಣಿಸಿಕೊಂಡ ದಿಟ್ಟತನ[೨೧] ಎಂದವರು ಇದ್ದಾರೆ.

ಹದಿನಾರನೆಯ ಶತಮಾನದ ಈ ಬಾರೋಕ್ ಶೈಲಿಯ ಕಲೆ, ಆ ಕಾಲದಲ್ಲಿಯ ಸಂಗೀತದ ಮೇಲೂ ಪ್ರಭಾವ ಬೀರಿತು. ಈ ಅವಧಿಯಲ್ಲಿ ನಿರ್ಮಾಣವಾದ ಸಂಗೀತವು ಬಾರೋಕ್ ಸಂಗೀತವೆಂದು ಹೆಸರಾಗಿದೆ. ಯೋಹಾನ ಸೆಬಾಸ್ಟಿಯನ್ ಬಾಕ್, ಜಾರ್ಜ ಫೆಡ್ರಿಕ್ ಹ್ಯಾಂಡಲ್ ಇವರ ಸಂಗೀತ ಕೃತಿಗಳು[೨೨] ಈ ಕಾಲದವುಗಳಾಗಿವೆ. ಧನಾಢ್ಯರ ಅರಮನೆ, ಕ್ರೈಸ್ತ ದೇವಾಲಯಗಳಿಂದ ಜನಸಾಮಾನ್ಯನ ಹತ್ತಿರಕ್ಕೆ ಈ ಶೈಲಿಯ ಕಲೆ ಬಂದಿದ್ದರೆ ಇನ್ನೂ ಇದರ ಪ್ರಖ್ಯಾತಿ ಹೆಚ್ಚುತ್ತಿತ್ತು. ಬಾರೋಕ್ ಕಲೆ ತನ್ನ ಪರಿಸರದ ಪರಿಮಿತಿಯಲ್ಲಿಯೇ ಪ್ರತಿಭಾವಂತ ಕಲಾವಿದರಿಂದ ಸೃಷ್ಟಿಯಾಗಿ, ಬಹುಬೇಗನೇ ಜನಪ್ರಿಯತೆಯನ್ನು ಪಡೆದ ಕಲೆಯಾಗಿದೆ.

ಸಾಮಾಜಿಕ ಧಾರ್ಮಿಕ ವೈಜ್ಞಾನಿಕ ಹಾಗೂ ತಾತ್ವಿಕ ವಿಚಾರಗಳು ಯುರೋಪಿನಲ್ಲಿ ಬದಲಾಗುತ್ತಿದ್ದ ಕಾಲದಲ್ಲಿ ಬಾರೋಕ್ ಶೈಲಿ ರೂಪುಗೊಂಡಿತು. ಹೀಗೆ ಬಾರೋಕ್ ಕಲೆ ಹೋಸದೊಂದು ಭಾವ ಸಂವೇದನೆಯ ಕಲಾತ್ಮಕ ಬಿಂಬವೆನಿಸಿತು[೨೩] ಎಂಬ ವಿಮರ್ಶಕರ ಮಾತುಗಳು ವಿಚಾರಿಸುವಂತಹವುಗಳಾಗಿವೆ.

ಒಟ್ಟಾರೆ ಬಾರೋಕ್ ಕಲೆ ಬಾರೋಕ್ ಯುಗವಾಗಿ ಕಂಗೊಳಿಸಿದೆ. ವಾಸ್ತುಶಿಲ್ಪ, ಚಿತ್ರಕಲೆ, (ಭಿತ್ತಿಚಿತ್ರ) ಇವು ಅದ್ದೂರಿಯಾಗಿ ರೂಪು ಪಡೆದು ಮೂರೂ ಒಂದಕ್ಕೊಂದು ಪೂರಕವಾಗಿ ಜೊತೆ ಜೊತೆಗೆ ಬೆರೆತುಕೊಂಡು ಒಂದು ಸಮೂಹದ ಮಾಧ್ಯಮವನ್ನಾಗಿ ಬಾರೋಕ್ ಕಲೆಯನ್ನು ಶ್ರೀಮಂತಗೊಳಿಸಿವೆ.

❑

---

೨೦. ವಿಶ್ವಕೋಶ: ಸಂಪುಟ-೭, ಪುಟ-೩೮೬
೨೧. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ, ಪುಟ-೨೮೬
೨೨. ಜ್ಞಾನಗಂಗೋತ್ರಿ : ಕಲೆ ಸಾಹಿತ್ಯ, ಸಂಪುಟ-೫, ಪುಟ ೪೦೩
೨೩. ಜ್ಞಾನಗಂಗೋತ್ರಿ : ಕಲೆ ಸಾಹಿತ್ಯ, ಸಂಪುಟ-೫ ಪುಟ ೪೦೩

ಅಧ್ಯಾಯ : ಎರಡು

ಬಾರೋಕ್ ವಾಸ್ತುಕಲೆ ಮತ್ತು ಶಿಲ್ಪಕಲೆ

'ಬಾರೋಕ್ ಕಲೆ' ಪಾಶ್ಚಿಮಾತ್ಯ ಕಲಾಸಂಪ್ರದಾಯದಲ್ಲಿ ಕಾಣಿಸಿಕೊಂಡ ಒಂದು ಕಲಾ ಪ್ರಕಾರ (ಕಲಾ ಶೈಲಿ). ಭಾರತೀಯರಲ್ಲಿ ವೇಸರ, ನಾಗರ, ದ್ರಾವಿಡ ಕಲಾಶೈಲಿಗಳಿಂತೆ ಪಾಶ್ಚಿಮಾತ್ಯರಲ್ಲಿ ಗೋತಿಕ್, ಬಾರೋಕ್, ರೋಕೋಕೋ ಎಂಬ ಕಲಾಶೈಲಿಗಳು ಬೇರೆ ಬೇರೆ ಕಾಲಮಾನಗಳಲ್ಲಿ ಬೆಳೆದುಬಂದಿವೆ. ಗೋತಿಕ್, ರೋಕೋಕೋ ಕಲಾಸಂಪ್ರದಾಯ ಗಳಿಗಿಂತ ಹೆಚ್ಚು ಜನಪ್ರಿಯತೆಯನ್ನು ಪಡೆದ ಕಲಾಸಂಪ್ರದಾಯ ಬಾರೋಕ್ ಕಲೆಯಾಗಿದೆ.

ಯುರೋಪಿನಲ್ಲಿ ಹದಿನಾರನೆಯ ಶತಮಾನದ ಉತ್ತರ ಭಾಗದಿಂದ ಹದಿನೆಂಟನೆಯ ಶತಮಾನದ ಪೂರ್ವಭಾಗದವರೆಗಿನ ಅವಧಿಯಲ್ಲಿ ಸೃಷ್ಟಿಗೊಂಡ ವಿಶಿಷ್ಟವಾದ ಅಂಶ ಗಳಿಂದೊಡಗೂಡಿದ ಕಲಾಮಾಧ್ಯಮದ ವಾಸ್ತುವಿನ್ಯಾಸ ಹಾಗೂ ಶಿಲ್ಪಕಲಾ ಕೃತಿಗಳನ್ನು ಬಾರೋಕ್ ವಾಸ್ತುಕಲೆ, ಬಾರೋಕ್ ಶಿಲ್ಪಕಲೆ ಎಂದು ಕರೆಯುತ್ತಾರೆ. ಇಟಲಿ, ಸ್ಪಾನಿಷ್, ಫ್ರೆಂಚ್, ಜರ್ಮನಿ ಮತ್ತು ಆಸ್ಟೇರಿಯಾ ಮುಂತಾದ ಕಡೆ ಈ ರೀತಿಯ ಕಲೆ ಪ್ರಸಾರ ಹೊಂದಿತು. ಪಾಶ್ಚಿಮಾತ್ಯ ಕಲಾ ಇತಿಹಾಸದಲ್ಲಿ ಈ ಸಂಪ್ರದಾಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ.

೧. ಬಾರೋಕ್ ವಾಸ್ತು ಕಲೆ : (Baroque Architecture)

ವಾಸ್ತುವಿನ್ಯಾಸದಲ್ಲಿ ಬಾರೋಕ್ ತನ್ನದೇ ಆದ ವೈವಿಧ್ಯತೆಯನ್ನು ಹೊಂದಿದೆ. ಭಾವಾವಿಷ್ಟಯುಗ[೧]ದ ಅವಧಿಯಲ್ಲಿ ಇಟಲಿಯಲ್ಲೆಲ್ಲಾ ಅನೇಕ ಚರ್ಚು, ಸಂನ್ಯಾಸಿ ಮಠ, ನಗರ ಚೌಕ ಹಾಗೂ ಇನ್ನಿತರ ವಾಸ್ತುಕೃತಿಗಳು ನಿರ್ಮಾಣಗೊಂಡವು. ಹೊರ ನೋಟಕ್ಕೆ ಈ ಕಾಲದ ವಾಸ್ತುಕಾರರು ಗೋತಿಕ್ ಯುಗದವರಂತೆ ಅಂಥ ವಾಸ್ತು ಕೃತಿಗಳ ಬಾಹ್ಯಾಲಂಕಾರ ವನ್ನು ಹೆಚ್ಚಿಸಲು ಅಲಂಕಾರಗಳಲ್ಲಿ ಸ್ತಂಭ ಮುಚ್ಚಿಗೆ, ಕುಂಬಕ ಮೊದಲಾದವುಗಳ

---

೧. ಬಾರೋಕ್ ಕಲೆಯ ಕಾಲವನ್ನು ಬಾರೋಕ್ ಯುಗವೆಂದೂ ಇನ್ನೂ ಕೆಲವು ಸಲ ಭಾವಾವಿಶಿಷ್ಟ ಯುಗವೆಂದೂ ಕರೆಯುವದು ರೂಢಿಯಲ್ಲಿದೆ.

ನಿರ್ವಹಣೆಯಲ್ಲಿ ಇನ್ನಿಲ್ಲದಷ್ಟು ಆಡಂಬರದ ಕೆಲಸ ತೋರಿಸಿದರು.[೨] ಹೀಗೆ ಆಡಂಬರದ ಉಡಿಗೆಯಲ್ಲಿಯೇ ಬಾರೋಕ್ ವಾಸ್ತು ವಿನ್ಯಾಸ ರೂಪು ತಳೆದದ್ದು.

ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಇಟಲಿಯ ಶ್ರೇಷ್ಠ ಕಲಾವಿದ ಮೈಕೆಲ್ ಎಂಜಿಲೋನನ್ನು ಬಾರೋಕ್ ವಾಸ್ತುಕಲೆಯ ಜನಕನೆಂದು ಪರಿಗಣಿಸುತ್ತಾರೆ. ಫ್ಲಾರನ್ಸ್‌ನಲ್ಲಿ ನಿರ್ಮಿಸಿದ ಮೆಡಿಸಿ ವಂಶದ ಗುಲಿಯಾನೋ ಎಂಬ ಅರಸನ ಸಮಾಧಿ ರಚನೆ ಮತ್ತು ಲೋರೆಂಟಿಯನ್ ಲೈಬ್ರರಿ ಕಟ್ಟಡದ ಪ್ರವೇಶಾಂಗಣಗಳ ರಚನೆಯಲ್ಲಿ ಬಾರೋಕ್ ಕಲೆಯ ಮೂಲತತ್ವಗಳನ್ನು ಸುಲಭವಾಗಿ ಗುರುತಿಸಬಹುದು. ಬೃಹತ್ ಪ್ರಮಾಣದ ಸಂತ ಪೀಟರನ ಇಗರ್ಜಿಯ ಗೋಪುರದ ಕಾರ್ಯ ಈತನ ವಾಸ್ತುಶಿಲ್ಪಶಾಸ್ತ್ರ ಪರಿಣತಿಗೆ ಸಾಕ್ಷಿಯಾಗಿವೆ.[೩] ಬಾರೋಕ್ ವಾಸ್ತುವಿನ್ಯಾಸ ರಚನೆಯ ಮೂಂಚೂಣಿಯಲ್ಲಿರುವ ಬರ್ನೀನಿ (೧೫೨೮-೧೯೮೦), ಬೊರೋಮಿನಿ (೧೫೯೯-೧೬೬೭), ಗುರ್ವಿನೊ ಗುರ್ವಿನಿ (೧೬೨೪-೧೬೮೩), ಪ್ರಸಿದ್ಧ ವಾಸ್ತುಕಾರರೆಂದು[೪] ಕರೆಯಿಸಿಕೊಳ್ಳುತ್ತಾರೆ.

ಇಟಲಿಯ ಫ್ಲಾರೆನ್ಸ್ ನಗರದ ಬರ್ನೀನಿ ಪ್ರಸಿದ್ಧ ವಾಸ್ತುಕಾರನಾಗಿ, ಶಿಲ್ಪಕಾರನಾಗಿ ಅದ್ವಿತೀಯ ಕಾರ್ಯಗೈದ ಮಹಾಕಲಾವಿದ. ಚಿತ್ರಕಲೆ, ಶಿಲ್ಪಕಲೆಗಳಲ್ಲಿ ಕಂಡುಬಂದ ಬಾರೋಕ್ ಶೈಲಿ ವಾಸ್ತುಶಿಲ್ಪಕ್ಕೂ ಅನ್ವಯವಾಯಿತು ಇದಕ್ಕೆ ಶ್ರೇಷ್ಠ ನಿದರ್ಶನ ೧೫೦೬ರಲ್ಲಿ ಆರಂಭವಾಗಿ ೬೦ ವರ್ಷಗಳ ಕಾಲ ನಿರ್ಮಾಣಕಾರ್ಯ ನಡೆದ ರೋಮ್‌ನಗರದ ಸಂತ ಪೀಟರನ ಇಗರ್ಜಿಗಾಗಿ ಸಂಪ್ರದಾಯ ಶೈಲಿಯಲ್ಲಿ ನಕಾಶೆ ತಯಾರಿಸಿದವನು ವಾಸ್ತುಶಿಲ್ಪಿ ಬರ್ಮಾಂಟೆ. ಆ ನಕಾಶೆಯನ್ನು ಬದಲಾಯಿಸುತ್ತ ಹೋದವರಲ್ಲಿ ಚಿತ್ರಕಾರ ರ್‍ಯಾಫೇಲನೂ ಒಬ್ಬ, ಮೈಕೆಲ್ ಎಂಜಲೋ ತನ್ನ ೭೦ನೆಯ ವಯಸ್ಸಿನಲ್ಲಿ ಈ ಇಗರ್ಜಿ ಕಟ್ಟಡಕ್ಕೆ, ೪೫೦ ಅಡಿಗಳ ಗುಮ್ಮಟ ರೂಪಿಸಿದ, ಇಪ್ಪತ್ತು ವರ್ಷಗಳ ಮೇಲೆ ಆತ ತೀರಿಕೊಂಡಾಗಲೂ ಆ ಗುಮ್ಮಟದ ಕಾರ್ಯ(ರಚನೆ) ಮುಗಿದಿರಲಿಲ್ಲ. ಮುಂದೆ ಆ ದೇಗುಲದ ಬಹಿರಂಗವನ್ನು ಮತ್ತು ವಿಶಾಲ ಸಭಾಂಗಣವನ್ನು ಉಚಿತ ರೀತಿಯಲ್ಲಿ ತುಂಬಿಸುವ ಹೊಣೆ ಬರ್ನೀನಿಯ ಪಾಲಿಗೆ ಬಂದಿತು. ಐವತ್ತು ವರ್ಷಗಳ ಕಾಲ ಆ ಕೆಲಸಕ್ಕಾಗಿ ಆತ ಶ್ರಮಿಸಿದನಂತೆ[೫] ಎಂಬುದಾಗಿ ಕಲಾಇತಿಹಾಸಕಾರರು ಬರೆಯುತ್ತಾರೆ.

ಇಟಲಿಯ ವಾಸ್ತುಕಾರ ಬೋರೋಮಿನಿ 'ಸನ್ ಕರ್ಲೋ ಅಲ್ಯೆಕ್ಯೂಟ್ರೊ ಫೌಂಟೇನ್'[೬]

---

೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೩

೩. 'ಜ್ಞಾನಗಂಗೋತ್ರಿ' : ಸಂಪುಟ-೫, ಪುಟ-೪೦೩

೪. ವಿವರಗಳಿಗೆ ನೋಡಿ 'Encyclopedia Britanica : (Educatioal) Vol-3, Page-186

೫. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೩೩

೬. San Carlo alle quttro tontane Rome, built by Francesco Borro mini (1599-1667). This oval shaped building is surmounted by an oval domc and its outer surface is not Starght but undulating. (-Edith Tomory : Introduction to the History of Fine Arts and the west, Page-158)

ಎಂಬ ಚರ್ಚಿನ ವಾಸ್ತುರಚನೆಯನ್ನು ಮಾಡಿದ್ದಾನೆ. ಇದು ೧೬೪೨-೧೬೫೦ರ ಅವಧಿಯಲ್ಲಿ ಮುಗಿಯಿತು. ಈ ಮಂದಿರವನ್ನು ಪ್ರವೇಶಿಸುವ ಅಂಗಣದ ಆಚೀಚೆ ಸರಳ ರೋಮನ್ ಕಮಾನುಳ್ಳ ಮೇಲಂತಸ್ತಿನಲ್ಲಿ ಎರಡು ನೀಳ ಪಡಸಾಲೆಗಳಿವೆ. ಅವೆರಡನ್ನು ಜೋಡಿಸುವ ಚರ್ಚಿನ ಮುಂಭಾಗಕ್ಕೆ ಚಾಪದ ಆಕೃತಿಯದ್ದಾಗಿದೆ. ಅಲ್ಲಿ ರೋಮನ್ ಕಮಾನುಗಳುಳ್ಳ ಬಾಗಿಲು ಕಿಟಕಿಗಳ ಸುಂದರ ಆವರ್ತನೆಯನ್ನು ಕಾಣುತ್ತೇವೆ. ಇದರ ಉನ್ನತ ಶಿಖರವುಳ್ಳ ಎರಡು ಅಂತಸ್ತಿನ ರಚನೆಯಿದೆ. ಅದರ ನಾಲ್ಕೂ ಸುತ್ತಣ ಗೋಡೆಗಳು ನಾಲ್ಕು ಅರ್ಧ ವೃತ್ತಾಕಾರದ ಕವುಳಿಗಳಂತೆ ನಿಲ್ಲಿಸಿದವುಗಳಾಗಿವೆ. ಅವುಗಳ ಮೇಲಕ್ಕೆ ಒಂದು ಸುಂದರ ಶಿಖರವೂ ಬರುತ್ತದೆ. ಇದರ ಆ ಬಾಹ್ಯ ಆಕಾರದಲ್ಲಿ ಸರಳತೆ ಇದೆ. ಲಾಲಿತ್ಯವಿದೆ, ಸಂಯಮವಿದೆ. ಇಂತಹ ಮಂದಿಗಳ ಆಂತರಿಕ ರಚನೆ ಮತ್ತು ಅಲಂಕಾರ ಭಾವಾವಿಷ್ಟ (ಬಾರೋಕ್) ಯುಗದಲ್ಲಿ ಪರಮಾವಧಿಯ ಅಲಂಕರಣೆಯನ್ನು ಪಡೆಯುತ್ತದೆ.[೭] ಇದು ಇಟಲಿ, ಜರ್ಮನಿ ಮೊದಲಾದ ಒಂದೊಂದು ಪ್ರಾಂತದಲ್ಲಿಯೂ ವಿಭಿನ್ನ ತೆರನಾದ ಸೊಬಗನ್ನು ಹೊಂದಿ ಕಂಗೊಳಿಸಿದೆ.

'ಬಾರೋಕ್ ಮಾದರಿಯ ಮತ್ತೊಂದು (ಮಾದರಿಯ) ಬಗೆಯ ಅಲಂಕಾರ ವೈವಿಧ್ಯವನ್ನು ತೋರಿಸತಕ್ಕ ನಿದರ್ಶನ ಇಟಲಿಯ ಟೂರಿನ್ ನಗರದ 'ಸಾಂಟಾ ಸಿರಡೋನ್' ಎಂಬ ವಾಸ್ತು. ಅದರ ಮೇಲೆ ಕಂಬಕವುಳ್ಳ ಒಂದು ಚೇಪಲ್ ಇದೆ. ಅದರ ಅಲಂಕಾರಿಕ ರಚನೆಯ ತುಂಬ ಜ್ಯಾಮಿತಿಕ ರೇಖಾವಿನ್ಯಾಸ ಲಕ್ಷಣಗಳುಳ್ಳ ಒಂದು ಬೆಡಗಿನ ನಿರ್ಮಾಣವಿದೆ. ಇದನ್ನು ರಚಿಸಿದ ವಾಸ್ತುಕಾರ ಗುವಾರಿನೋ ಗುವಾರಿನಿ[೮] ಹೀಗೆ ಅದ್ಭುತವಾದ ಕಾರ್ಯಗೈದವರಲ್ಲಿ ಪೆಟ್ರೋಡಿಕೊರ್ಟನಾ ವಾಸ್ತುಕಾರನ ಕೌಶಲ್ಯವನ್ನು ಮರೆಯುವಂತಿಲ್ಲ. ಇದರ ಹಿಂದೆ ಅನೇಕ ಕಲಾವಿದರು ಈ ಪರಂಪರೆಯನ್ನು ಬೆಳೆಯಿಸಿಕೊಂಡು ಬಂದಿದ್ದಾರೆ.

೨. ಬಾರೋಕ್ ವಾಸ್ತುಶೈಲಿ :

ಬಾರೋಕ್ ವಾಸ್ತುವೈಶಿಷ್ಟ್ಯತೆಯ ನಿದರ್ಶನಗಳಿಗೆ, ಚಲನಶೀಲವಾದ ವಾಸ್ತುವಿನ್ಯಾಸಕ್ಕೆ ಮೈಕೆಲ್ ಎಂಜಿಲೋನ ಸರ್ಪೈಂಟಾ, ವ್ಹಿಜ್ನೋಲಾನ ಗೇಜು, ಯಥಾದರ್ಶನದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ರೋಮ್‌ನ ಸೇಂಟ್ ಪೀಟರ್ ಮತ್ತು ಪೇಜಾನವೋನಾನ್ ಸೇಂಟ್ ಅಗ್ನೈನೈಜ್, ಬಹುಮಹಡಿ ಕಟ್ಟಡಗಳ ವಿನ್ಯಾಸಕ್ಕೆ ರೋಮ್‌ನ ಎಸ್. ಕರ್ಲೊಅಲೈಕ್ಯೂಟ್ರೊ ಫೌಂಟೀನ, ಅಲ್ಲದೆ ಸೇಂಟ್ ಪೀಟರ್ ಸ್ಕೊಯರ್, ಫೆಯಿಜಾಡೆಲ್ ಪೊಪೆಲೋ, ಪ್ಯಾರೀಸ್‌ನ ಟುಲ್ಲೇರೀಜ್‌ಬಾತ್ ಕ್ರೇಜಂಟ್ ಮುಂತಾದ ವಾಸ್ತುಕೃತಿಗಳು ಬಾರೋಕ್ ಶೈಲಿಗ ನಿದರ್ಶನ ಗಳಾಗಿವೆ.

'The Boroque style in architecture Originated in Rome Stimulated by Michelangelo's three, dimenissonal plastic treatment of architecture

---

೭. ಡಾ. ಶಿವರಾಮ ಕಾರಂತ: ಕಲಾಪ್ರಪಂಚ, ಪುಟ-೨೯೩

೮. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೪

to be seen in the Choir and The cupola of sttpetre's Goleazzo Alessis (1512-1578) Bolognese palaces and Andrea Palladio's (1508-1580) building activity in vicenza and venice also contribute toward the Maturing of Boroque Architecture,[೯] ಬಾರೋಕ್ ವಾಸ್ತುಕಲೆ ಕಟ್ಟಡಗಳ ಭಾವಣಿ, ಗೋಡೆಗಳಲ್ಲಿಯ ಶ್ರೀಮಂತವಾದ ಅಲಂಕಾರಗಳಿಂದ ವಿವಿಧ ವಿನ್ಯಾಸಗಳಿಂದ ಸುಳುವು ನಕ್ಷೆಗಳಿಂದ ಬೆಳವಣಿಗೆಯಾದದ್ದನ್ನು ಗುರುತಿಸಬಹುದು.[೧೦] ಬಾರೋಕ್ ವಾಸ್ತು ವಿನ್ಯಾಸ ಹೆಚ್ಚಾಗಿ ಚರ್ಚುಗಳ ನಿರ್ಮಾಣ, ಇಗರ್ಜಿಗಳ ಕಟ್ಟಡ, ಕೆಲವು ಗ್ರಂಥಾಲಯಗಳ ವಿನ್ಯಾಸ, ಸಾರ್ವಜನಿಕ ಉದ್ಯಾನಗಳಲ್ಲಿಯ ವೈವಿಧ್ಯಮಯವಾದ ವಾಸ್ತುರಚನಾ ವಿನ್ಯಾಸದ ಸ್ನಾನಗೃಹಗಳು (ಈಜು ಕೊಳಗಳು) ಪ್ರಮುಖ ಬೀದಿಗಳಲ್ಲಿಯ ಕೆಲವು ವೃತ್ತಗಳು, ಉದ್ಯಾನಗಳಲ್ಲಿಯ ಪ್ರಾಣಿ ಮಾನವಾಕೃತಿಯ ಕಾರಂಜಿಗಳು, ಅರಮನೆ ಹಾಗೂ ಭವ್ಯವಾದ ಕಟ್ಟಡಗಳಲ್ಲಿ, ತನ್ನ ವೈಶಿಷ್ಟತೆಯನ್ನು ಭವ್ಯತೆಗೇರಿಸಿ ಬೆಳವಣಿಗೆಯಾದ ಕಲಾಪ್ರಕಾರವಿದಾಗಿದೆ.

೩. ಬಾರೋಕ್ ಶಿಲ್ಪಕಲೆ : (Baroque Sculpture)

ಶಿಲ್ಪಿಯಾದವನ ಕಣ್ಣಿಗೆ ವಸ್ತುಗಳ ಬಣ್ಣ ಮುಖ್ಯವಲ್ಲ, ಆಕೃತಿ ಮುಖ್ಯ. ಆತ ಯಾವುದನ್ನೇ ಮಾಡುವದಿದ್ದರೂ ಚಿತ್ರಕಾರನಂತೆ ಬರೀ ಉದ್ದಗಲವುಳ್ಳ ಕಾಗದದ ಮೇಲೆ ಅಥವಾ ಯಾವುದೇ ಹಾಳೆಯ ಮೇಲೆ ಕೆಲಸ ಮಾಡದೆ ಉದ್ದಗಲಗಳ ಜೊತೆಗೆ ದಪ್ಪವನ್ನು ಇರಿಸಿಕೊಂಡು ತಾನು ಮಾಡುವ ಆಕೃತಿಯಲ್ಲಿ ತಾನು ಕಂಡು ಪ್ರೇರಣೆಗೊಂಡ ವಸ್ತುಗಳ ಆಕೃತಿಯ ಎತ್ತರ, ದಪ್ಪ, ಉದ್ದ, ಅಗಲ ಎಲ್ಲವನ್ನೂ ತೋರಿಸಬಲ್ಲ.[೧೧] ಬಾರೋಕ್ ಶಿಲ್ಪಕಲಾ ಕೃತಿಗಳಲ್ಲಿ ಮುಖ್ಯವಾಗಿ ಆಕೃತಿ ಕಣ್ಮನಗಳನ್ನು ರಂಜಿಸಬೇಕು. ಅವುಗಳಲ್ಲಿ ಚೈತನ್ಯ ತುಂಬಿ ತುಳುಕಬೇಕು. ಅವನ್ನು ಕಂಡೊಡನೆಯೇ ಅವು ನಮ್ಮನ್ನು ಮುಗ್ಧಗೊಳಿಸಬೇಕು ಎಂಬ ಪ್ರೇರಣೆಯಿಂದ ಈ ಅವಧಿಯ ಸೃಷ್ಟಿಗಳು ಉಂಟಾದವು.[೧೨] ಬಾರೋಕ್ ಶಿಲ್ಪದಲ್ಲಿ ಮುಖ್ಯವಾಗಿ ಕಲಾಕೃತಿ ನೋಡುಗನನ್ನು ಆಕರ್ಷಿಸಬೇಕು ಎನ್ನುವ ಅಭೀಪ್ಸೆಯೆ ಈ ರೀತಿಯ ಕಲಾ ನಿರ್ಮಾಣಕ್ಕೆ ಕಾರಣವಾಗಿವೆ.

ಶಿಲ್ಪ ಕಲಾಕೃತಿಗಳು :

ಬಾರೋಕ್ ಶಿಲ್ಪಿಗಳು ಅನೇಕ ಕಲಾಕೃತಿಗಳನ್ನು ನಿರ್ಮಿಸಿದ್ದಾರೆ. ಇಲ್ಲಿ ಪ್ರಮುಖವಾದ ಕೆಲವನ್ನು ಮಾತ್ರ ಉದಾಹರಣೆಯಾಗಿ ನೋಡಬಹುದು.

---

೯. Dagobertd, Runes & Harry G. Schrickel (Ed) : Encyclopedia of the Art, Page-96

೧೦. Edith Ithtmory : In Introduction to the History of fine Art, India and west, Page-158.

೧೧. ಡಾ. ಶಿವರಾಮ ಕಾರಂತ : ಚಿತ್ರಶಿಲ್ಪ ವಾಸ್ತುಕಲೆಗಳು, ಪುಟ-೧೭

೧೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೬

೧. ಬರ್ನಿೀನಿಯಿಂದ ರಚನೆಗೊಂಡ ಶಿಲ್ಪಕಲಾಕೃತಿಗಳು :

i. ವರ್ಜಿಲ್ ಕಾವ್ಯದ ಕಥಾನಾಯಕ ಎನಿಡ್‌ನ ಶಿಲ್ಪ (ಇದನ್ನು ಬೆಂಕಿ ಹತ್ತಿದ ಟ್ರಾಯ ನಗರದಿಂದ ನಾಯಕ ತನ್ನ ತಂದೆಯನ್ನು ಹೊತ್ತು ಸಾಗಿಸುವ ಶಿಲ್ಪವಿದಾಗಿದೆ.)

ii. ಗ್ರೀಕ್ ಕಥಾನಾಯಕದ ಪ್ಲೇಟೋ ಪ್ರಣಯೋನ್ಮತ್ ದೇವತೆ ಪರ್ಷಿ ಪೋನಳನ್ನು ಕದ್ದೊಯ್ಯುವ ಶಿಲ್ಪವಿದಾಗಿದೆ

iii. ಸೇಂಟ ಥೇರಿಸಾಳ ಶಿಲ್ಪ (ಆನಂದದಿಂದ ಕೂಡಿದ ಹರ್ಷಾತಿರೇಕದ ಶಿಲ್ಪ)ವಿದಾಗಿದೆ.

೨. ಮೈಕೆಲ್ ಎಂಜಿಲೋನ ಕೆಲವು ಶಿಲ್ಪಕಲಾಕೃತಿಗಳು[೧೩];

i. ಯೇಸುವಿನ ತಾಯಿಯ ಶಿಲ್ಪ (ಮಗುವಿನ ಮೃತದೇಹವನ್ನು ಹೊತ್ತುಕೊಂಡು ದುಃಖಿಸುತ್ತಿರುವ ಶಿಲ್ಪವಾಗಿವೆ.)

ii. ಲಾರೆನ್ಜೋದ ಮೆಡಿಸಿ ಅರಸನ ಶಿಲ್ಪ.

iii. ನಿದ್ರಿಸುತ್ತಿರುವ ನಾರಿಯ ಶಿಲ್ಪ.

iv. ಡೆವಿಡ್‌ನ ಶಿಲ್ಪ (ಇದು ಸಂಗಮವರಿ ಕಲ್ಲಿನಲ್ಲಿ ಕೆತ್ತಿದ ಮಹಾನ್ ಕಲಾಕೃತಿ)

೩. ಅಂಟೋನೆ ಕೊವೆಕ್ಸನ 'ಲೂಯಿಸ್ ಡಿ ಬೊರ್ಡನ್' ಪ್ರಿನ್ಸ ಆಫ್ ಕೊನ್‌ಡೆ.

೪. ಜಾನ್ ಅಂಟೋನೆ ರಚಿಸಿದ 'ಲೂಯಿಸ್' ಬ್ರಾಂಜಿನಲ್ಲಿ ರಚಿಸಿದ ಶಿಲ್ಪ.

೫. ರೊಪಿನ್‌ನ 'ಮಾರ್ನಿಂಗಶಿಲ್ಪ' (ಅಂಬೆಗಾಲೂರಿ ನಿಂತು ತಲೆಗೂದಲನ್ನು ಬಾಚಿಕೊಳ್ಳುತ್ತಿರುವ ಯುವತಿಯ ನಗ್ನ ಶಿಲ್ಪವಿದಾಗಿದೆ)

೪. ಬಾರೋಕ್ ಶಿಲ್ಪ ಶೈಲಿ :

"Baroque sculpture, created in the period between 1600 and 1750 is characterized by dynamic motion of body and garnment, by an opening and splitting of contoure, by a richly concave and convex treatment of surtace which admits light and shadow as an active facture in total effect"[೧೪] ಬಾರೋಕ್ ಶಿಲ್ಪದ ಶಾರೀರಿಕ ವಿನ್ಯಾಸ. ಹಾವಭಾವ, ಸಹೃದಯನ ಮೇಲೆ ಬೀರುವ ಪರಿಣಾಮ ಒಟ್ಟು ಭವ್ಯತೆಯಿಂದ ಕೂಡಿ ನೋಡುಗನನ್ನು ಯಾವುದೋ ಒಂದು ಭ್ರಮಾಲೋಕದಲ್ಲಿ ವಿಹರಿಸುವಂತೆ ಮಾಡುತ್ತವೆ. ಕೆಲವು ಶಿಲ್ಪಗಳಲ್ಲಿ ನಾಟಕೀಯತೆಯ ಭಾವನೆಯೇ ಹೆಚ್ಚಾಗಿ ಕೃತ್ರಿಮತೆಯಿಂದ ಶಿಲ್ಪಗಳು ಸಹೃದಯನಿಂದ ದೂರಾಗುವ ಸಾಧ್ಯತೆಯೂ ಇದೆ. ಶಾರೀರಿಕ ಅಂಗರಚನಾ ವಿನ್ಯಾಸ (ಅನಾಟಮಿ) ಉಡುಗೆ ತೊಡುಗೆ ಹಿತಮಿತವಾದ ಆಭರಣಗಳು ಪ್ರಮಾಣಬದ್ಧವಾದ

---

೧೩. ಬರ್ನಿೀನಿ ಮತ್ತು ಮೈಕೆಲ್ ಎಂಜಿಲೋ, ಇವರ ಕಲಾಕೃತಿಗಳ ವಿವರಣೆಗಾಗಿ ಅಧ್ಯಾಯ ನಾಲ್ಕನ್ನು ನೋಡಿರಿ.

೧೪. Dagobertd Runes & Harry G. Schrickel (Ed) : Encyclopedia of Arts, Page-97

ಶಿಲ್ಪಗಳ ಒಟ್ಟು ವಿನ್ಯಾಸಗಳಿಂದ ಬಾರೋಕ್ ಶಿಲ್ಪಕಲಾ ಕೃತಿಗಳು ಆಕರ್ಷಣೀಯವಾಗಿ ಕಂಗೊಳಿಸುತ್ತವೆ.

ಬಾರೋಕ್ ಶೈಲಿಯ ಶಿಲ್ಪಗಳಲ್ಲಿ ಪುರುಷರು, ಚಿಕ್ಕಮಕ್ಕಳು, ನಗ್ನಸ್ತ್ರೀಯರು, ದೇವತೆಗಳು, ಪೌರಾಣಿಕ ಶಿಲ್ಪಗಳು, ರಾಜ ಮಹಾರಾಜರ ಶಿಲ್ಪಗಳು, ಸಾಮಾನ್ಯರ ಶಿಲ್ಪಗಳು, ಈ ಎಲ್ಲ ವಿಧದ ಶಿಲ್ಪಕಲಾಕೃತಿಗಳು ತಮ್ಮ ಇತಿಮಿತಿಯಲ್ಲಿಯೇ ಅವುಗಳ ಗುಣಧರ್ಮವನ್ನು ಪ್ರಕಟಪಟಿಸುತ್ತವೆ. ಬಾರೋಕ್ ಶೈಲಿಯಲ್ಲಿ ಇದು ಪ್ರಮುಖ ವೈಶಿಷ್ಟ್ಯವಾಗಿದೆ ಎಂದರೆ ತಪ್ಪಾಗಲಾರದು. ಮೈಕೆಲ್ ಎಂಜಿಲೋ ಬರ್ನೀಯಂತಹ ಮೇಜರ (ಪ್ರಮುಖ) ಕಲಾವಿದರಿಂದ ಬಾರೋಕ್ ಶಿಲ್ಪ ತನ್ನ ಸೊಗಸು ಸೊಬಗನ್ನು ಹೆಚ್ಚಿಸಿಕೊಂಡಿದೆ ಎಂದು ಹೇಳಬಹುದಾಗಿದೆ.

೫. ವಿವಿಧ ದೇಶಗಳಲ್ಲಿ ಬಾರೋಕ್ ವಾಸ್ತುಶಿಲ್ಪ ಹಾಗೂ ಶಿಲ್ಪಕಲೆಯ ಕಲಾವಿದರು[೧೫] :

ಇಟಲಿಯ ಕಲಾವಿದರು

೧ ಸಿಲ್ಲನಿ (೧೫೦೦-೧೫೭೧)
೨ ಅಮನತಿ (೧೫೧೧-೧೫೯೨)
೩ ಗಿವೋವಾನಿ ಡಾ ಬಲೋಗಾನಾ (೧೫೨೮-೧೬೦೮)
೪ ರೆಲ್ಲಿ ಜಾನ್ ಬಲೋಗಾನಾ (೧೫೨೮-೧೬೦೮)
೫ ಬರ್ನೀನಿ (೧೫೯೮-೧೬೮೦)

ಸ್ಪಾನೀಶ್‌ನ ಕಲಾವಿದರು

೧ ಫಾನ್ಸಿಸ್‌ಕೋ ಪಿಕ್ಯಾಸೊ (೧೫೭೧-೧೬೫೪)
೨ ಬಾರ್ಜಯೋ ಹರ್ನಾಂಡೀಜಿ (೧೫೭೬-೧೬೩೬)
೩ ಅಲ್ಸನೋ (೧೬೬೮)
೪ ಪೆಡ್ರೊಡಿ ಮಾನೆ (೧೮೨೮-೧೬೮೮)
೫ ಎಲ್‌ಗ್ರೇಕೋ

ಫ್ರೆಂಚ್ ದೇಶದ ಕಲಾಕಾರರು

೧ ಪ್ರಾನ್ಸಿಸ್ ಗಿರೋರ್ಡನ್ (೧೬೨೮-೧೭೧೫)
೨ ಪಿರರ್ ಲೆಗ್ರೋಸ್ (೧೬೬೬-೧೭೨೦)
೩ ಕೊಸವೆಕ್ಸ (೧೬೪೦-೧೭೪೦)
೪ ಕೊಸ್ಟೋ (೧೬೫೮-೧೭೩೩)
೫ ಪ್ಯೂರರ್ ಪುಗೆಟ್ (೧೬೨೨-೧೬೯೪)

---

೧೫. ವಿವರಗಳಿಗೆ ನೋಡಿ Dagoberted Runes & Harry G. Schrickel (Ed) : Encyclopedia of Arts Page-97

೬ ಬುಚರಡನ್ (೧೬೯೮-೧೭೬೨)
೭ ಪಾಲ್‌ಕೊನೆಟ್ (೧೭೧೬-೧೭೯೧)

ಜರ್ಮನಿ ಮತ್ತು ಆಸ್ಟ್ರೇರಿಯಾ

ದಕ್ಷಿಣ ಜರ್ಮನಿಯಲ್ಲಿ ಗಿಯೋವಾನಿ ಬಲೋಗಾನ್‌ನ ಶೈಲಿಯ ಪರಂಪರೆಯ ಕಲಾಕೃತಿಗಳು ರಚನೆಗೊಂಡಿವೆ. ಫ್ಲ್ಯಾಮಿಸ್ ಮತ್ತು ಡಚ್‌ನಲ್ಲಿ ಗಿವೋವಾನಿಯ ವಿದ್ಯಾರ್ಥಿಗಳು (ಹರ್ಬರ್ಟಗಹಾರ್ಡ, ಆಡಿನ್‌ಡಿವ್ರರಿಸ್, ಪಿಟರ್ ಡಿ ವ್ಹಾಯಿಟ್, ಕಾಲ್ಯಾಡ್, ಕ್ಯಾಂಡಿಡೊ) ಹುಂಬರ್ಗಾದ ಅ್ಯರೀಂಜಸಲ್ವರ (೧೬೬೪-೧೭೧೪) ಬಲೋಥೊನಾರ್, ಪ್ರೇಮಸರ (೧೬೬೧-೧೭೩೩), ಇವರೆಲ್ಲರು ಬರ್ನಿಯ ಪರಂಪರೆಯ ಶೈಲಿಯಲ್ಲಿ ಕಲಾಕೃತಿ ನಿರ್ಮಾಣ ಮಾಡಿದ್ದಾರೆ.


ಒಟ್ಟಾರೆ 'ವಾಸ್ತುಶಿಲ್ಪ' ಮತ್ತು 'ಶಿಲ್ಪಕಲೆ'ಗಳು ಬೇರೆ ಬೇರೆ ಕಲಾಪ್ರಕಾರಗಳಾದರೂ ಬಾರೋಕ್ ಕಲೆಯಲ್ಲಿ ಮಾತ್ರ ಇವು ಒಂದಕ್ಕೊಂದು ಬೆರೆತುಕೊಂಡು ಸಮರಸದಿಂದ ಒಂದೇ ನಾಣ್ಯದ ಎರಡು ಮುಖಗಳ ಹಾಗೆ ಇಡಿಯಾಗಿ ಬೆಳೆದು ಬಂದಿವೆ.

❑

ಬಾರೋಕ್ ವಾಸ್ತು ಶಿಲ್ಪಕಲಾಕೃತಿಗಳು



ರೋಮಿನ
ಎಸ್. ಆೃಗೆನ್ಯೆಜ ಚರ್ಚು



ರೋಮಿನ ಎಸ್. ಕರ್ಲೋ ಅಲ್ಲೆ,
ಕೂಟ್ರೋಪೌಂಟೇನ

ಬಾರೋಕ್ ವಾಸ್ತು ಶಿಲ್ಪಕಲಾಕೃತಿಗಳು

೧


೨


೩


೪



೫


೬

೧) **Carognano Palace, Turin** ಗುರ್ವಿನೋ ಗುರ್ವಾನಿ. ೨) **S. Calro alle Quttro Fontane Rome,** ಪ್ರಾನ್ಸಿಸ್ಕೊ ಬೋರೋಮಿನಿ. ೩) **S. Andrea al quirinal, Rome** ಬರ್ನೀನಿ ೪) ಸೇಂಟ ಮರಿಯ ಡೆಲಾ ಸಲುಟ ವ್ಹೆನಿಸ್ ಲೊಂಗೇನಾ ೫) **Sta. maria dell Race, Rome** ಪೇಟ್ರೊ ಡಿ ಕಾಟ್ರೋನಾ ೬) ಸೇಂಟ್ ಪೀಟರ್ಸ್ ರೋಮ್, ಬರ್ನೀನಿ

ಅಧ್ಯಾಯ : ಮೂರು

ಬಾರೋಕ್ ಚಿತ್ರಕಲೆ

ಕಲೆಯ ಲೋಕದಲ್ಲಿ ದೀರ್ಘಕಾಲ ತನ್ನ ಹಿರಿಮೆ ತೋರಿ ಮೆರೆದ ಕೀರ್ತಿ ಇಟಲಿಯದು. ಶಿಲ್ಪ, ವಾಸ್ತು ಶಿಲ್ಪ, ಚಿತ್ರಕಲೆಗಳಲ್ಲಿ ಯುರೋಪಿನ ಇತರ ರಾಷ್ಟ್ರಗಳು ಇಟಲಿಯನ್ನು ಅನುಸರಿಸುವಷ್ಟರ ಮಟ್ಟಿಗೆ ಅದರ ಪ್ರಖ್ಯಾತಿ ಇದೆ.

ಹದಿನಾರನೆಯ ಶತಮಾನದ ಇಟಲಿಯ ಕಲಾ ಚರಿತ್ರೆಯಲ್ಲಿ ಹೊಸ ಹೊಸ ಅಭಿವ್ಯಕ್ತಿಗಳು ಮೂಡಿಬಂದವು. ಪರಂಪರಾಗತವಾಗಿ ರಚನೆಗೊಳ್ಳುತ್ತಿದ್ದ ಪ್ರಕೃತಿಯ ನೈಸರ್ಗಿಕ ದೃಶ್ಯಗಳಲ್ಲಿ ಕಲಾವಿದರ ಅಭಿರುಚಿ ಕಡಿಮೆಯಾಯಿತು. ಆಗ "ಮೂರ್ತಿಗಳಿಗೆ ಮೊದಲಿನ ಸ್ಥೂಲಗಾತ್ರ ತಪ್ಪಿತು ಸಮತಳದ ಮೇಲೆ ಬಣ್ಣ ಹಾಕಿ ಪ್ರಕಾಶಿತ ಭಾಗಗಳನ್ನು ಉಂಟುಮಾಡಿ ಚಿತ್ರದಲ್ಲಿ ಅಲೌಕಿಕಭಾವ ಮೂಡುವಂತೆ ಮಾಡಲಾಯಿತು. ಈ ಕಾಲದಲ್ಲಿ ಕೆಲವು ಉಜ್ವಲ ಚಿತ್ತಾರಗಳು ಕ್ರೈಸ್ತ ಮಂದಿರಗಳನ್ನು ಅಲಂಕರಿಸಿದವು".[೧] ಹೀಗೆ ಚಿತ್ರಕಲೆಯಲ್ಲಿ ನೂತನವಾದ ಒಂದು ಅಭಿವ್ಯಕ್ತಿಗೋಸ್ಕರ ಚಡಪಡಿಸಿದ ಇಟಲಿಯ ಕಲಾವಿದರ ಕಲಾಚಳವಳಿಯ ಕೊಡುಗೆಯಾಗಿ 'ಬಾರೋಕ್ ಚಿತ್ರಕಲೆ' ಎಂಬ ವಿಭಿನ್ನ ರೀತ್ಯ ಹೆಸರಿನ ಕಲೆ ಅವತರಿಸಿತು.

ಬಾರೋಕ್ ಕಲೆಯಲ್ಲಿ "Architecture sculpture and painting Were no longer separated, but all most without distinction these visual arts were used in order to create one total effect of plastic forms and colours and stirirup a great variety of sensations in the spectoter[೨] ನೋಡುಗರಿಗೆ ವೈವಿಧ್ಯಮಯವಾದ ವಿನ್ಯಾಸದಲ್ಲಿ ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆ ಇವು ಒಂದಕ್ಕೊಂದು ಪೂರಕವಾಗಿ ಭವ್ಯವಾದ ಒಟ್ಟು ವಿನ್ಯಾಸ ಏಕರೂಪತೆಯಿಂದ ಕೂಡಿರುವದು ಬಾರೋಕ್ ಕಲೆಯಲ್ಲಿ ಕಾಣುವ ಪ್ರಮುಖ ಗುಣವಾಗಿದೆ.[೩]

---

೧. ಜ್ಞಾನಗಂಗೋತ್ರಿ : ಸಂಪುಟ–೫, ಪುಟ–೧೧೦

೨. Edith Tomory : Introduction to the History of fine Arts in India and the West, Page-158.

೩. ವಿವರಗಳಿಗೆ ಈ ಪುಸ್ತಕದ ಮೊದಲ ಅಧ್ಯಾಯದ ಬಾರೋಕ್ ಕಲೆಯ ಲಕ್ಷಣಗಳನ್ನು ನೋಡಿರಿ.

ಬಾರೋಕ್ ಚಿತ್ರಕಲೆಯನ್ನು ಬಾರೋಕ್ ಶಿಲ್ಪದಿಂದ ಭಿನ್ನವಾಗಿಸುವುದು ಅಸಾಧ್ಯವೇನೋ ಎನ್ನುವಷ್ಟರ ಮಟ್ಟಿಗೆ ಅವು ಒಂದಕ್ಕೊಂದು ಪೂರಕವಾಗಿ ಬೆರತುಕೊಂಡು ಬಂದಿವೆ. ಮೇಲಾಗಿ ಬಾರೋಕ್ ಯುಗದ ಅನೇಕ ವಾಸ್ತುಕಾರರು ಶಿಲ್ಪಕಾರರಾಗಿ ಮತ್ತು ಕೆಲವರು ಚಿತ್ರಕಾರರೂ ಆಗಿ ತಮ್ಮ ಬಹುಮುಖ ವ್ಯಕ್ತಿತ್ವವನ್ನು ಪ್ರಕಟಪಡಿಸಿದ್ದಾರೆ. ಬಾರೋಕ್ ಚಿತ್ರಕಲೆಯನ್ನು ಮೂರು[೪] ರೀತಿಯಲ್ಲಿ ಗುರುತಿಸಿದ್ದಾರೆ. ಬಾರೋಕ್ ಚಿತ್ರಕಲೆಯ ಹುಟ್ಟಿನ ಬಗ್ಗೆ ವಿದ್ವಾಂಸರಲ್ಲಿ ಇನ್ನು ವಾದವಿವಾದಗಳಿವೆ.

ಟೊಮೊರ್ರೈ[೫]ರವರು ಬಾರೋಕ್ ಚಿತ್ರಕಲೆಯನ್ನು ಎರಡು ಪ್ರಭಾವಿ ವಲಯಗಳಾಗಿ ಬೆಳವಣಿಗೆಯಾಗಿರುವುದನ್ನು ಗುರುತಿಸುತ್ತಾರೆ. ಇದೇ ಆಧಾರದ ಹಿನ್ನೆಲೆಯಲ್ಲಿ ಇಲ್ಲಿ ಬಾರೋಕ್ ಚಿತ್ರಕಲಾ ಸಂಪ್ರದಾಯವನ್ನು ಎರಡು ರೀತಿಯಲ್ಲಿ ಈ ಕೆಳಗಿನಂತೆ ವಿಂಗಡಿಸಿಕೊಂಡು ವಿವೇಚಿಸಲಾಗಿದೆ.

೧. ಮಾರ್ಗಶೈಲಿ ಸಂಪ್ರದಾಯ
೨. ವಾಸ್ತವಿಕಶೈಲಿ ಸಂಪ್ರದಾಯ

ಈ ಎರಡು ಸಂಪ್ರದಾಯಗಳು ಪಾಶ್ಚಿಮಾತ್ಯರಲ್ಲಿ ಅಷ್ಟೇ ಅಲ್ಲ ಭಾರತೀಯ ಸಾಹಿತ್ಯ ಕಲೆಗಳಲ್ಲಿಯೂ ಬೆಳೆದು ಬಂದಿರುವದನ್ನು ಕಾಣಬಹುದು ನಮ್ಮಲ್ಲಿನ ಇತ್ತೀಚಿನ ಸಾಹಿತ್ಯದ ಚಟುವಟಿಕೆಗಳ ಕಡೆಗೆ ದೃಷ್ಟಿ ಹರಿಸಿದಾಗ ಕಂಡುಬರುವ 'ನವೋದಯ' ಮತ್ತು 'ನವ್ಯ' ಪರಂಪರೆಯ ಎರಡು ಬಗೆಗಳು ಬಾರೋಕ್ ಚಿತ್ರಪರಂಪರೆಯ 'ಮಾರ್ಗ' ಮತ್ತು 'ವಾಸ್ತವ' ಈ ಸಂಪ್ರದಾಯಗಳಿಗೆ ಹೋಲಿಸಿದಾಗ ಎರಡರ ಮೂಲ ಆಶಯ ಒಂದೇ ರೀತಿಯಲ್ಲಿರುವದು ಕಂಡುಬರುತ್ತದೆ.

ಸಾಹಿತ್ಯದಂತಹ ಚಟುವಟಿಕೆಗಳು ಮನುಷ್ಯ ಜೀವನಕ್ಕೆ ಎಷ್ಟು ಅವಶ್ಯಕವೋ ಚಿತ್ರಕಲೆಯೂ ಕೂಡ ಅಷ್ಟೇ ಅವಶ್ಯಕ. ತಿಳುವಳಿಕೆ ಹೆಚ್ಚಾದಂತೆ ಪರಂಪರೆಯ ಅಂಧಾನುಕರಣೆಗೆ ಪೆಟ್ಟು ಕೊಡುತ್ತ ಬದಲಾವಣೆಯಾಗುವ ಅನೇಕ ಹಂತಗಳು ಸಾಹಿತ್ಯದಲ್ಲಿ, ಕಲೆಗಳಲ್ಲಿ ಉಂಟಾದವು. ಹಾಗೆಯೇ ಯಾವುದೋ ಕಾಲದಲ್ಲಿ ಅತ್ಯಂತ ನಿಖರವಾದ, ಪ್ರಮಾಣಬದ್ಧವಾದ ಒಂದು ಚೌಕಟ್ಟು ಚಿತ್ರಕಲೆಗೆ ಬಿದ್ದಿತ್ತು. ಆ ಚೌಕಟ್ಟನ್ನು ಮೀರಲಾರದೆ ಅದೇ ಹಾದಿಯಲ್ಲಿಯೇ

---

೪. Out of three main components Boroque painting developed The Chiaroscuro style of Leonardo, The coloristic sensualism of Titon, The plastic dunamism of Michelangelo, (-Dagobert. D. Runes & Harry G. Scrickel :Encyclopedia of the Arts, Page-96)

೫. The development of Baroque painting was much more complicated than of architecture and Sculpture, Art scholors are not yet agreed as to its origins two friends are clearly distingiushable. The more tradational one followed by anibalicarracei and his Bologna Academy; The more revolutionary on the carvoggio, (—Edith Tomory, Introduction to the History of fine Art in India and the West, Page-159.)

ಮುಂದಿನ ಕಲಾಕಾರರೂ ನಡೆದು ಬಂದರು. ಅಷ್ಟಾದಶ ವರ್ಣನೆಗಳು, ಮಹಾಕಾವ್ಯಗಳು, ರೌದ್ರ ರಸಪ್ರಧಾನ ನಾಟಕಗಳು, ಸಾಹಿತಿ ಕಲಾವಿದರಿಗೆ ಸಾವಿರಾರು ವರ್ಷದ ತನಕ ಅವು ತಮ್ಮ ರಚನೆಗಳಲ್ಲಿ ದಟ್ಟ ಪ್ರಭಾವವನ್ನು ಹೇಗೆ ಬೀರಿಕೊಂಡು ಬಂದಿವೆಯೋ ಇಂತಹದೇ ಪರಿಣಾಮ ಈ ಬಾರೋಕ್ ಚಿತ್ರ ಕಲಾವಿದರ ಮೇಲೂ ಆಗಿರಲಿಕ್ಕೆ ಸಾಕು, ಉದಾ, ಹಿಂದಿನಿಂದ ರಚನೆಗೊಂಡು ಬಂದಿರುವ ಕ್ರಿಸ್ತನ ಬೇರೆ ಬೇರೆ ಚಿತ್ರಗಳು ಬಾರೋಕ್ ಕಲೆಯ ಅವತಾರದವರೆಗೂ ಕಲಾವಿದರಿಂದ ರಚನೆಗೊಂಡು ಬಂದಿದೆ. ಕ್ರಿಸ್ತನ ಮಹಾನ್ ವ್ಯಕ್ತಿತ್ವದ ವಿವಿಧ ನಮೂನೆಗಳನ್ನು ಈ ಮಾರ್ಗೀ ಕಲೆಯಲ್ಲಿ ನಾವು ನೋಡುತ್ತೇವೆ. ವೈಭವೋಪೇತವಾದ, ಪಾವಿತ್ರ್ಯತೆಯನ್ನು ಕಾಯ್ದುಕೊಂಡು ಬರುವದರ ಜೊತೆಗೆ ವಾಸ್ತವಿಕತೆಯಿಂದ ದೂರಾಗಿರುವಂತಹ ಅಂಶಗಳನ್ನು ನಾವಿಲ್ಲಿ ಕಾಣುತ್ತೇವೆ. ಈ ಪರಂಪರೆಯನ್ನು 'ಪಾರಂಪರಿಕ' ಅಥವಾ 'ಮಾರ್ಗಶೈಲಿ' ಎಂದು ಹೇಳಬಹುದು. ಈ ಸಂಪ್ರದಾಯಕ ಪರಂಪರೆಗೆ ಸವಾಲಾಗುವ ರೀತಿಯಲ್ಲಿ ನೈಜಬದುಕಿನ ವಾಸ್ತವತೆಯು ಈ ಅಭಿವ್ಯಕ್ತಿ ಮಾಧ್ಯಮದಲ್ಲಿ ಕಾಣಿಸಿಕೊಂಡಿತು. ಹೀಗೆ ಬಾರೋಕ್ ಚಿತ್ರಕಲಾ ಸಂಪ್ರದಾಯದ ಮೂಲ ಆಶಯ ಭಂಡಾಯ ಪ್ರವೃತ್ತಿಯದು. ಬದುಕಿನ ಸುಖ ದುಃಖ ಬಡತನ, ನೋವು ನಲಿವುಗಳನ್ನೇ ಯಥಾವತ್ತಾದ ರೀತಿಯಲ್ಲಿ ವಸ್ತು ನಿಷ್ಠವಾಗಿ ಪ್ರತಿಬಿಂಬಿಸುವದಾಗಿದೆ. 'ಮಾರ್ಗ' ಪರಂಪರೆಯಲ್ಲಿ ದೇವತ್ವಕ್ಕೇರಿದ ಕ್ರಿಸ್ತ ವಾಸ್ತವಿಕ ಪರಂಪರೆಯಲ್ಲಿ ಒಬ್ಬ ಸಾಮಾನ್ಯ ಮನುಷ್ಯನ ವೇಷ ಭೂಷಣಗಳಲ್ಲಿ ಚಿತ್ರಿಸಲ್ಪಟ್ಟಿದ್ದಾನೆ. ಇದು ವಾಸ್ತವಿಕ ಶೈಲಿಯಲ್ಲಿ ಕಂಡು ಬರುವ ಗಮನಾರ್ಹ ಅಂಶವಾಗಿದೆ. ಹೀಗೆ ಚಲನಶೀಲ ವಾದ ಈ ಧೋರಣೆಯನ್ನು 'ವಾಸ್ತವ' ಪರಂಪರೆಯ ಶೈಲಿಯೆಂದು ಕರೆಯಬಹುದು.

'ಮಾರ್ಗಶೈಲಿ' ಸಂಪ್ರದಾಯ ಮುಖಂಡತ್ವವನ್ನು ವಹಿಸಿದವನು ಅನಿಬಲಿ ಕಹ್ರಾಚಿ ಮತ್ತು ಸಂಗಡಿಗರು. 'ವಾಸ್ತವಿಕ' ಸಂಪ್ರದಾಯದ ಪ್ರವರ್ತಕನಾಗಿ ಕೆಹ್ರವಾಜೋ ಹಾಗೂ ಅವನ ಅನುಯಾಯಿಗಳು ಕೃತಿರಚನೆಗೈದಿದ್ದಾರೆ.

೧. ಮಾರ್ಗಶೈಲಿ ಸಂಪ್ರದಾಯ:

ಈ ಸಂಪ್ರದಾಯದ ಬಾರೋಕ್ ಚಿತ್ರಕಲೆಯಲ್ಲಿ ಅನಿಬಲಿ ಕಹ್ರಾಚಿ ಸಹೋದರರಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಮೂರು ಜನ ಕಹ್ರಾಚಿ ಕಲಾವಿದರು ಕಲಾತಂಡವೊಂದನ್ನು ನಿರ್ಮಿಸಿಕೊಂಡು ಸಂಪ್ರದಾಯಕವಾದ ಮಾರ್ಗದಲ್ಲಿ ಕಲಾಕೃತಿಗಳನ್ನು ನಿರ್ಮಿಸಿ ತಮ್ಮದೇ ಆದ ಒಂದು ಪರಂಪರೆಯನ್ನು ಹಾಕಿದ್ದಾರೆ. ಇವರ ಸಂಕ್ಷಿಪ್ತವಾದ ವಿವರಣೆಯನ್ನು ಇಲ್ಲಿ ನೋಡಬಹುದು.

i. **ಲೂಡಿವಿಸಿಯೋ ಕಹ್ರಾಚಿ :** (೧೫೫೫-೧೬೧೯) ಇಟಲಿಯ 'ಬೊಲೋಗಾನ್' ಎಂಬಲ್ಲಿ ಜನಿಸಿದ ಲೂಡಿವಿಸಿಯೋ ತನ್ನ ಸಹೋದರರೊಂದಿಗೆ ೧೫೭೭ರಲ್ಲಿ ಚಿತ್ರಕಲೆಯನ್ನು ಕಲಿಯಲು 'ಬಲೋಗಾನ್‌ಗಿಲ್ಡ್'ಗೆ ಸೇರಿದ ಶಾಸ್ತ್ರೀಯವಾದ ತರಬೇತಿಯನ್ನು ಪಡೆದ ಲೂಡಿವಿಸಿಯೋ ಮಾರ್ಗಶೈಲಿಯ ಕೃತಿರಚನೆ ಮಾಡುತ್ತಲೇ ಈ ಪರಂಪರೆಯನ್ನು ಉಳಿಸಿಕೊಂಡು ಬರುವ ಉದ್ದೇಶದಿಂದ ೧೫೭೫ರಲ್ಲಿ

ಚಿತ್ರಕಲಾ ತರಬೇತಿಯ ಅಕ್ಯಾಡೆಮಿಯೊಂದನ್ನು ಪ್ರಾರಂಭಿಸುತ್ತಾನೆ[೬] ಈ ಅಕಡೆಮಿಯೂ ಸರ್ವಾಂಗೀಣವಾಗಿ ಬೆಳೆಯಲು ಅಗಸ್ಟಿನೋ, ಮತ್ತು ಅನಿಬಲಿ, ಕಹ್ರಾಚಿಯರು ತುಂಬಾ ಶ್ರಮವಹಿಸಿ ಅದೊಂದು ಚರಿತ್ರಾರ್ಹವಾದ ಸಂಸ್ಥೆಯನ್ನಾಗಿ ಅಭಿವೃದ್ಧಿ ಮಾಡಿದರು. ಇದರಿಂದ ಹಿಂದಿನ ಕಲಾಕೃತಿಗಳನ್ನು ರಕ್ಷಿಸಿಕೊಂಡು ಬರುವದರೊಂದಿಗೆ ಅವುಗಳ ವೈಶಿಷ್ಟ್ಯವನ್ನು ಉಳಿಸಿಕೊಂಡು ಬರುವಂತಾಯಿತು. ಅಲ್ಲದೆ ಅನೇಕ ಕಲಾವಿದರು (ಉದಾ, ಡೊಮಿನಿಸಿನೋ, ಗುಡಿರೆನಿ, ಗುರ್ನಿಸಿನೋ,) ಹೊರಬಂದರು.

ii. **ಅಗಸ್ಟಿನೋ ಕಹ್ರಾಚಿ :** (೧೫೫೭-೧೬೦೨) ಇಟಲಿಯ 'ಬೋಲೋಗಾನ್' ಕಲಾ ತಂಡದ ಇನ್ನೊಬ್ಬ ಸೃಜನಶೀಲ ಕಲಾವಿದ. ಇವನು ಅನುಭವದ ಪಕ್ವತೆಗಾಗಿ ಅನೇಕ ದಿವಸಗಳವರೆಗೆ ಪ್ರವಾಸಗೈದು ಪ್ರಖ್ಯಾತ ಕಲಾವಿದರನ್ನು ಕಂಡು ಆವರೊಂದಿಗೆ ಕಲೆಯ ವಿಧಿವಿಧಾನಗಳನ್ನು ಅಭ್ಯಸಿಸಿದ, ಬಹುಕಾಲ ಪ್ರವಾಸದಲ್ಲಿಯೇ ಕಳೆದ ಅಗಸ್ಟಿನೋ ೧೫೮೦-೮೧ರಲ್ಲಿ ವೆನಿಸ್ ಮತ್ತು ಉತ್ತರದ ಇಟಲಿಗೆ ಭೆಟ್ಟಿಕೊಟ್ಟು ಬಂದ ಮೇಲೆ ೧೫೮೫ರಲ್ಲಿ ಚಿತ್ರರಚನೆಯ ಕಾರ್ಯದಲ್ಲಿ ತಲ್ಲೀನನಾಗುತ್ತಾನೆ. ಇವನ ಕಲಾಕೃತಿಗಳಲ್ಲಿ ಹೊಸತನದ ಒಂದು ಗಾಳಿಯೇ ಸುರುವಾಯಿತು. ಹಳೆಯ ಮತ್ತು ಹೊಸ ಸಂಪ್ರದಾಯಗಳನ್ನು ರೂಢಿಸಿಕೊಂಡರೂ ಸನಾತನದ ಮಾರ್ಗಶೈಲಿಯ ಕಡೆಗೆ ಹೆಚ್ಚು ಒಲವು ತೋರಿಸಿದ. ಬಾರೋಕ್ ಚಿತ್ರಶೈಲಿಯಲ್ಲಿ ಅಗಸ್ಟಿನೋ ಕಹ್ರಾಚಿಯ ಕಲಾಕೃತಿಗಳು ಸಹೋದರ ಅನಿಬಲಿಯ ಪ್ರೇರಣೆಯಿಂದ ವಿಶಿಷ್ಟವಾಗಿ ಕಂಗೊಳಿಸಿದವು. ಅನಿಬಲಿಯೊಂದಿಗೆ ಕೂಡಿ ರಚಿಸಿದ ಅನೇಕ ಭಿತ್ತಿಚಿತ್ರಗಳು ಇವನ ಜನಪ್ರಿಯತೆಯನ್ನು ಇನ್ನಿಷ್ಟು ಹೆಚ್ಚಿಸಲು ಕಾರಣವಾದವು.

iii **ಅನಿಬಲಿ ಕಹ್ರಾಚಿ :** (೧೫೬೦-೧೯೦೯) ಕಹ್ರಾಚಿ ಸಹೋದರರಲ್ಲಿಯೇ ಅತ್ಯಂತ ಪ್ರಸಿದ್ಧಿಯನ್ನು ಪಡೆದವನು ಅನಿಬಲಿ ಕಹ್ರಾಚಿ. ತನ್ನ ವಿನೂತನ ಶೈಲಿಯಿಂದ ಹಿರಿಯ ಸಹೋದರರನ್ನು ತನ್ನೆಡಗೆ ಆಕರ್ಷಿಸಿದ. ಅಗಸ್ಟಿನೋ ಕಹ್ರಾಚಿಯಂತೆ ಇವನೂ ಅನೇಕ ಕಡೆ ಪ್ರವಾಸ ಮಾಡಿದ. ೧೫೮೫ರಲ್ಲಿ ವೆನಿಸ್‌ಗೆ ಅಗಸ್ಟಿನೋನನ್ನು ಕರೆದುಕೊಂಡು ಹೋಗಿ ಕಲಾಭ್ಯಾಸಗೈದು ನಂತರ ಸಹೋದರನೊಂದಿಗೆ 'ಬೊಲೋಗಾನ್' ಅಕ್ಯಾಡೆಮಿಯನ್ನು ಶ್ರೀಮಂತಗೊಳಿಸುವಲ್ಲಿ ಸಹಕಾರಿಯಾಗುತ್ತಾನೆ. ಮೂರು ಜನ ಸಹೋದರರು ಒಟ್ಟಾಗಿ ಪೇವಾದಲ್ಲಿ (೧೫೮೪ರಲ್ಲಿ) ಚರ್ಚು ವೊಂದರಲ್ಲಿ ಅಲಂಕಾರದ ಕಾರ್ಯವನ್ನು ಅದ್ಭುತವಾದ ರೀತಿಯಲ್ಲಿ ಮಾಡಿದ್ದುದು ಕಹ್ರಾಚಿ ಸಹೋದರರಿಗೆ ಒಂದು ವಿಶೇಷ ಗೌರವ ತಂದಿದೆ. ಸ್ವತಂತ್ರವಾಗಿ ಅನಿಬಲಿ ೧೫೯೨ರಲ್ಲಿ ಬೊಲೋಗಾನ ಅರಮನೆಯಲ್ಲಿ ಭಿತ್ತಿಚಿತ್ರ ನಿರ್ಮಾಣಕಾರ್ಯ ಕೈಕೊಂಡು ಯಶಸ್ವಿಯಾಗಿ ಮುಗಿಸಿದ್ದಾನೆ. ಮುಂದೆ ೧೫೯೫ರಲ್ಲಿ ರೋಮ್‌ಗೆ

೬. Peter and Linda Murrry : A Dictionary of art and Artists page-48

ಬಂದು ಫರ್ನೀಸಿ ಅರಮನೆಯಲ್ಲಿ ತೈಲವರ್ಣದ ಭಿತ್ತಿಚಿತ್ರಗಳನ್ನು ರಚಿಸಿ ಅಲಂಕಾರಗೊಳಿಸಿದ್ದಾನೆ.

ತನ್ನ ಸಹೋದರರಿಗಿಂತ ಚಿಕ್ಕನಿವನಾದ ಅನಿಬಲಿ ಬಾರೋಕ್ ಮಾರ್ಗಶೈಲಿ ಸಂಪ್ರದಾಯದ ನಾಯಕನಾಗಿ ಹೆಸರು ಗಳಿಸಿದ್ದಾನೆ. "ತುಂಬ ಸಂಯಮದಿಂದ ಮಾರ್ಗಶೈಲಿಯನ್ನೇ ಅತಿಶಯಿಸಿ ಚಿತ್ರವಸ್ತುವನ್ನು ಶಿಲ್ಪವಸ್ತುವಿನಂತೆ ರೂಪಿಸಿದವನಾಗಿದ್ದಾನೆ[೭]. ಮೈಕೆಲ್ ಎಂಜಿಲೋ ಇವನಿಗೆ ಆದರ್ಶನಾಗಿದ್ದನಂತೆ, ಅನೇಕ ಹಿರಿಯ ಸಮಕಾಲಿನ ಕಲಾವಿದರ ಪ್ರಭಾವ ಅನಿಬಲಿಯ ಮೇಲೆ ಆಗಿದ್ದರೂ ಸ್ವಂತಿಕೆಯ ಲಕ್ಷಣಗಳು ಅವನ ಕಲಾಕೃತಿಗಳಲ್ಲೆಲ್ಲಾ ಕಂಡುಬರುತ್ತವೆ.

ಅನಿಬಲಿ ಕಹ್ರಾಚಿ ಕಲಾಕೃತಿಗಳ ಸಂಗ್ರಹ : ಅನಿಬಲಿ ಕಹ್ರಾಚಿಯ ಕಲಾಕೃತಿಗಳು ದೇಶದ ವಿವಿಧ ಮೂಲೆಗಳಲ್ಲಿ ಪ್ರಖ್ಯಾತ ಕಲಾವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಿಸಿಡಲಾಗಿದೆ.[೮] ರಾಯಲ್, ಅಮಸ್ಟರಡಮ್, ಬೆರೆಲಿನ್ ಬಲೋಗಾನ್, ಬೋಸ್ಟನ್, ಬ್ರಸೆಲ್ಸ, ನೇಪಲ್ಸ, ಆಕ್ಸಪರ್ಡ, ಪ್ಯಾರಿಸ್, ಫರ್ಮಾ, ರೋಮ, ವೆಟೆನ್ನಾ ಮುಂತಾದ ಕಡೆ ರಕ್ಷಿಸಲ್ಪಟ್ಟಿದೆ. ಅನಿಬಲಿಯು ಚರ್ಚುಗಳಲ್ಲಿ, ಪೌರಾಣಿಕ ಮತ್ತು ನಿಸರ್ಗದೃಶ್ಯಗಳನ್ನು ರಚನೆಗೈದಿದ್ದಾನೆ. ರಮ್ಯವಾದ ಕಲ್ಪನಾತ್ಮಕತೆಯಿಂದ ಕಲಾಕೃತಿಗಳು ವಾಸ್ತವತೆಯಿಂದ ದೂರಾಗಿವೆ ಎಂಬುದಕ್ಕೆ ಅವನು ಕಟ್ಟುಬಿದ್ದ ಮಾರ್ಗಶೈಲಿಯೇ ಕಾರಣವೆಂದರೆ ತಪ್ಪಾಗಲಾರದು.

೨. ವಾಸ್ತವಿಕ ಶೈಲಿ ಸಂಪ್ರದಾಯ :

'ವಾಸ್ತವಿಕ' ಎಂಬ ಶಬ್ದವನ್ನು ಬಳಸುವಾಗಲೆಲ್ಲ ಅದನ್ನು ಇನ್ನಷ್ಟು ಸ್ಪಷ್ಟಗೊಳಿಸಲು 'ಸಹಜತೆ' (naturalism) ಎಂಬ ಪದವನ್ನು ಬಳಸಿದ್ದಾರೆ.[೯] ಕಹ್ರವಾಜೋ ವಾಸ್ತವಿಕತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ಯಾವುದೇ ಸಾಂಪ್ರದಾಯಕವಾದ ವಿಷಯಗಳಿರಲಿ ಅವುಗಳನ್ನು ಪ್ರಚಲಿತವಾದ ದೈನಂದಿನ ಬದುಕಿಗೆ ಅನ್ವಯಿಸಿ ತಮ್ಮ ಸಮಕಾಲೀನ ಪರಿಸರದ ಜನತೆಗೆ ಹಿಡಿಸುವಂತೆ ಕೃತಿರಚನೆಗೈದುದು ವಾಸ್ತವಿಕ ಸಂಪ್ರದಾಯದ ಮುಖ್ಯ ಲಕ್ಷಣವಾಗಿದೆ ಎನ್ನಬಹುದು.

ಕಹ್ರವಾಜೊ : (೧೫೭೩-೧೬೧೦) ಸಣ್ಣ ಪಟ್ಟಣವಾದ 'ಮಿಲಾನ್' ಎಂಬಲ್ಲಿ ಕಹ್ರವಾಜೊ ಜನಿಸಿದ, ಇವನ ಪೂರ್ಣ ಹೆಸರು ಮೈಕೆಲ್ ಎಂಜಿಲೋ ಕೆಹ್ರವಾಜೋ ಮೆರಿಸಿ ಎಂದಿದ್ದರೂ ಕಹ್ರವಾಜೋ ಎಂದೇ ಹೆಸರನ್ನು ಗಳಿಸಿದ್ದಾನೆ. ಇವನು ಚಿಕ್ಕಂದಿನಲ್ಲಿ ಭಿತ್ತಿಚಿತ್ರ ಕಲಾವಿದರ

---

೭. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೩

೮. There are works by one or more of the carracci in the Royal (collections) (Rjjksm), Berlin, Bologna (Mus, and charches). Bostan (Mus.) Brussels, Munich (Naples, Oxford (christ, charch), Paris (Louyre). Rome (Borgness captioline) Vitenna elsewhere. (- Petre and Linda Murray : A Dictionary of Art and Artists, Page-50)

೯. ಡಾ. ಶಿವರಾಮ ಕಾರಂತ; ಕಲಾಪ್ರಪಂಚ, ಪುಟ-೨೮೭.

ಕೈಯಲ್ಲಿ ಕೆಲಸಗಾರನಾಗಿ ಸೇವೆ ಮಾಡುತ್ತಲೆ ಚಿತ್ರಕಲೆಯಲ್ಲಿ ತರಬೇತಿಯನ್ನು ಹೊಂದಿದ. ಅನೇಕ ವರ್ಷಗಳವರೆಗೆ ಪೋರ್ಟರೇಟಗಳನ್ನು ಜನರಿಗೆ ಮಾಡಿಕೊಡುವದರಲ್ಲಿಯೇ ವೇಳೆ ಕಳೆದಿರುವನಾಗಿ ಇವನ ಚರಿತ್ರೆಯಿಂದ ಗೋಚರವಾಗುತ್ತದೆ. ಪ್ರಸಿದ್ಧ ಕಲಾವಿದರನ್ನು ಕಂಡು ಅವರ ಕಲಾಕೃತಿಗಳನ್ನು ಅಭ್ಯಸಿಸಿ ತನ್ನದೇ ಆದ ವಿಶಿಷ್ಟತೆಯಿಂದ ಒಂದು ಸಂಪ್ರದಾಯದ ಪ್ರಮುಖ ವ್ಯಕ್ತಿಯೆನಿಸಿಕೊಂಡಿದ್ದಾನೆ. ೧೫೮೪ರಲ್ಲಿ ನಾಲ್ಕು ವರ್ಷ ಸೈಮೋನೇ ಪೀಟರ್‌ಜೋನ್‌ನ ಹತ್ತಿರ ಕೆಲಸ ಮಾಡುತ್ತಾನೆ. ಈ ಹಂತದಲ್ಲಿ ಕಹ್ರವಾಜೋನ ಪ್ರಾರಂಭಿಕ ಕೃತಿಗಳ ಸ್ಟಿಲ್‌ಲಾಯಿಪ್ ಸೆಲ್ಪ ಪೋರ್ಟರೇಟ ಮುಂತಾದವುಗಳನ್ನು ಹೆಚ್ಚಾಗಿ ರಚಿಸುತ್ತಾನೆ.

೧೫೯೪ರಲ್ಲಿ ಕಾರ್ಡಿನಲ್ ಡೆಲ್ ಮೊನಾಟನ್‌ನ ಕೃತಿ ರಚಿಸುತ್ತಾನೆ. ಮುಂದೆ ಕಹ್ರವಾಜೋ, ೧೫೯೭ರಲ್ಲಿ ಎಸ್.ಡಿ.ಫರ್ನಿಸಿ ಚರ್ಚ್‌ನಲ್ಲಿ ಮೂರು ವರ್ಷ ಕಲಾವಿದನಾಗಿ ಕೆಲಸ ಮಾಡುತ್ತಾನೆ. ಎಸ್. ಮ್ಯಾಥ್ಯೂವಿನ ಪೂರ್ಣಗಾತ್ರದ ಚಿತ್ರವನ್ನು ಈ ವೇಳೆಯಲ್ಲಿ ರಚಿಸುತ್ತಾನೆ. ಕಹ್ರವಾಜೋ ೧೬೦೧ರ ತನಕ ಅಲ್ಲಿ ಗೋಡೆಗಳ ಮೇಲೆ ಸಾಕಷ್ಟು ಕಲಾಕೃತಿ ಹಾಗೂ ನಕ್ಷೆಗಳ ವಿನ್ಯಾಸವನ್ನು ರಚನೆಗೈಯುತ್ತಾನೆ.

೧೬೦೭ರಲ್ಲಿ ಮೆಲ್ವಾಕೆ ಮರಳಿ ಬಂದು ಅನೇಕ ಕಲಾಕೃತಿ ನಿರ್ಮಾಣ ಮಾಡುತ್ತಾನೆ. ಇವನು ೧೬೮೯ರಲ್ಲಿ ನೇಪಲ್ಸ್‌ಗೆ ಬರುತ್ತಾನೆ. ಅಲ್ಲಿ ಸಾಕಷ್ಟು ರೀತಿಯ ಚಿತ್ರ ರಚನೆಗೈದು ಕಣ್ಮರೆಯಾಗುತ್ತಾನೆ. ಹೋರಾಟ ಜೀವಿಯಾದ ಈತನು ಮುಂದೆ ಸಮಕಾಲೀನ ಚಿತ್ರಕಾರರು ಆದರ್ಶರೂಪಗಳನ್ನು ಸೃಷ್ಟಿಸುತ್ತಿದ್ದ ಬಗ್ಗೆ ಅವನಿಗೆ ಗೌರವವಿರಲಿಲ್ಲ ಪೌರಾಣಿಕ ಚಿತ್ರಗಳನ್ನು ಚಿತ್ರಿಸುವಾಗಲೂ ಅವನ ದೃಷ್ಟಿ ವಾಸ್ತವಿಕವಾಗಿತ್ತು[೧೦]. ದೇವಾಂಶ ಸಂಭೂತರಾದ ವ್ಯಕ್ತಿಗಳು ಇವನಿಗೆ ಸಾಮಾನ್ಯರಂತೆ ಕಂಡರು, ಪೌರಾಣಿಕ ವ್ಯಕ್ತಿಗಳು ಜನಸಾಮಾನ್ಯರ ವೇಷಭೂಷಣಗಳಲ್ಲಿ ಚಿತ್ರಿಸಲ್ಪಟ್ಟರು. ಅವನ ಪ್ರಕಾರ ಪ್ರಕೃತಿಯಲ್ಲಿ ಕಾಣುವ ವಾಸ್ತವ ಸಂಗತಿಗಳು ಕಲೆಗೆ ಆಧಾರವಾಗಬೇಕೇ ಹೊರತು ನಾವು ಕಲ್ಪಿಸಿಕೊಳ್ಳುವ ಆದರ್ಶದ ಭಾವನೆಗಳಲ್ಲ[೧೧]. ಎಂಬ ಮನೊಧರ್ಮವುಳ್ಳವನು. ಕಹ್ರವಾಜೋನ ಚಿತ್ರಗಳಲ್ಲಿಯ ವ್ಯಕ್ತಿಗಳ ವೇಷ ಭೂಷಣಗಳು ತೀರ ಸಾಮಾನ್ಯ ಜನಗಳದ್ದು, ಚಿತ್ರಗಳಿಗೆ ಬಳಸಿದ ವಾತಾವರಣ ಕೂಡ ಸಾಮಾನ್ಯತರವಾದ ಸನ್ನಿವೇಶಗಳೇ ಆಗಿವೆ. ಆದರೂ ಅವನು ಚಿತ್ರಿಸಿದ ವ್ಯಕ್ತಿಗಳು ಸಾಮಾನ್ಯನಕ್ಕಿಂತ ವಿಶಿಷ್ಟವಾದ ವ್ಯಕ್ತಿಗಳು ಎಂಬ ಭಾವನೆ ಪ್ರತಿಯೊಬ್ಬರಲ್ಲಿಯೂ ಬರುತ್ತದೆ, ಕಹ್ರವಾಜೋನ ಕಲೆಯ ಮರ್ಮವೇ ಇದಾಗಿದೆ.

ಕಹ್ರವಾಜೋನ ಪ್ರಮುಖ ಕಲಾಕೃತಿಗಳು:

೧. ಸೈಂಟ್ ಮ್ಯಾಥ್ಯೂವಿನ ವೃತ್ತಿ
೨. ಸೈಂಟ್ ಪಾಲನನ್ನು ಶಿಲುಬೆಗೇರಿಸುವ ದೃಶ್ಯದ ಕೃತಿ
೩. ಸೈಂಟ್ ಮ್ಯಾಥ್ಯೂವಿನ ಬಲಿದಾನದ ಚಿತ್ರ

---

೧೦. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೪೯

೧೧. ಕನ್ನಡ ವಿಶ್ವಕೋಶ : ಸಂಪುಟ-೭, ಪುಟ-೩೮೬

೪. ದಿ ಬಾಯ್ ಬಿಟನ್ ಎ ಲಿಜರ್ಡ
೫. ಜೋಸೆಫ್‌ನ ಪ್ರಯಾಣದ ಚಿತ್ರ
೬. ದಿ ಡೆತ್ ಆಫ್ ದಿ ವರ್ಜಿನ್
೭. ಕ್ಯೂಪಿಡ್ ಕಲಾಕೃತಿ

೧. **ಸೈಂಟ್ ಮ್ಯಾಥ್ಯುವಿನ ವೃತ್ತಿ :** ಈ ಕೃತಿ ಕ್ರಿ.ಶ. ೧೫೯೮ರಲ್ಲಿ ರಚನೆಗೊಂಡಿದೆ. ಇದು ಕೆಂಟೆರೆಲ್ಲ್ ಚಪೆಲ್‌ನಲ್ಲಿ ಸದ್ಯ ಸಂಗ್ರಹಗೊಂಡಿದೆ. ಕಹ್ರವಾಜೋನ ಕ್ರಾಂತಿಕಾರಿ ಚಿತ್ರಗಳಲ್ಲಿ ಈ ಕೃತಿಗೆ ಒಂದು ವಿಶಿಷ್ಟ ಸ್ಥಾನವಿದೆ.

ಮ್ಯಾಥ್ಯುವಿನ ವೃತ್ತಿಯೆಂದರೆ ಊರ ಜನರಿಂದ ತೆರಿಗೆ ವಸೂಲಿ ಮಾಡುವುದು. ಆತನನ್ನು ರೋಮನ್ ಕಾಲದ ಒಂದು ಹೆಂಡದ ಅಂಗಡಿಯಲ್ಲಿ ನಾಲ್ವರು ಸಾಮಾನ್ಯ ಜನರೊಡನೆ ಸೇರಿ ಕುಳಿತಂತೆ ಕಹ್ರವಾಜೋ ಚಿತ್ರಿಸಿದ್ದಾನೆ. ಈ ಚಿತ್ರದ ಬೆಳಕಿನ ಯೋಜನೆ ತುಂಬ ಮಿದುವಾದದ್ದು, ಕಹ್ರವಾಜೋನ ಅನ್ಯ ಚಿತ್ರಗಳಲ್ಲಿ ಕಂಡುಬರುವ ನಾಟಕೀಯತೆ ಇಲ್ಲಿಲ್ಲ. ಇಲ್ಲಿನ ದೃಶ್ಯ ಒಂದು ಹೆಂಡದ ಮನೆ, ಅಲ್ಲಿಗೆ ಕರವನ್ನೆತ್ತುವ ಲೇವಿ ಬರುತ್ತಾನೆ. ಕ್ರಿಸ್ತ ಅವನೆದುರಿಗೆ ಕುಳಿತುಕೊಂಡಿದ್ದಾನೆ. ನನ್ನನ್ನೂ ಕೇಳುತ್ತೀಯಾ? ಎನ್ನುವ ಅವನ ದೃಶ್ಯ ಅನುಪಮವಾಗಿ ಬಂದಿದೆ. ಕ್ರಿಸ್ತನನ್ನು ಕಂಡು ಬೆರಗಾಗುವ ಲೇವಿಯ ಚಿತ್ರವು ಇದೆ. ಇಲ್ಲಿ ಕೊಠಡಿಯ ಕಿಟಕಿಯ ಮೂಲಕ ಬರುವ ಮಿದು ಬೆಳಕು ಕುಳಿತ ವ್ಯಕ್ತಿಗಳ ಮೇಲೆ ಅವರವರ ಹಿರಿಮೆಗೆ ಸಮನಾಗಿ ಬೀಳುವ ರೀತಿ ಅತಿ ಮೋಹಕವಾಗಿದೆ. ಅಂಥ ಬೆಳಕಿನ ಯೋಜನೆಯಿಂದಲೇ ಕಹ್ರವಾಜೋ ಉದ್ದಾಮ ಕಲಾವಿದನೆನಿಸಿ ಕೊಂಡಿದ್ದಾನೆ.[೧೨] ದೈವಿಪುರುಷ ಕ್ರಿಸ್ತನನ್ನು ಸಾಮಾನ್ಯನ ವೇಷ ಭೂಷಣಗಳಲ್ಲಿ ಹೆಂಡದ ಅಂಗಡಿಯಲ್ಲಿ ಚಿತ್ರಿಸಿದ ಕಹ್ರವಾಜೋ ತನ್ನ ಸಮಕಾಲೀನ ನೈಜತೆಯ್ಯ ಸನ್ನಿವೇಶವನ್ನು ಪೌರಾಣಿಕ ವ್ಯಕ್ತಿಗಳಲ್ಲಿ ತರಲು ಪ್ರಯತ್ನಿಸಿದ್ದು ಇಲ್ಲಿ ಕಂಡುಬರುತ್ತದೆ.

೨. **ಸೈಂಟ್ ಪಾಲ್‌ನನ್ನು ಸಿಲುಬೆಗೇರಿಸುವ ಕೃತಿ :** ಕ್ರಿ.ಶ. ೧೬೦೦ರಲ್ಲಿ ಕಹ್ರವಾಜೋನಿಂದ ನಿರ್ಮಾಣಗೊಂಡು ಹೃದಯ ಸ್ಪರ್ಶೀಯ ಭಾವನೆಗಳನ್ನು ಸಹೃದಯನಲ್ಲಿ ಉಂಟುಮಾಡುತ್ತದೆ. ಕತ್ತಲಲ್ಲಿ ನಾಲ್ಕು ಜನರಿಂದ ಕೂಡಿದ ಈ ವರ್ಣಚಿತ್ರದಲ್ಲಿ ಒಬ್ಬ ಅಂಬೆಗಾಲೂರಿ ನೆಲಕ್ಕೆ ಮುಖ ಹಚ್ಚಿ ಕೈಗಳನ್ನು ಊರಿ ಬಗ್ಗಿ ಕುಳಿತಿದ್ದಾನೆ. ಅವನ ಮೇಲ್ಗಡೆ ಶಿಲುಬೆಯಿದೆ. ಮೇಲಿನ ಭಾಗಕ್ಕೆ ಸೈಂಟ್‌ಪಾಲೀನ ಕಾಲುಗಳನ್ನು ಶಿಲುಬೆಗೆ ಕಟ್ಟುತ್ತಿರುವ ಸನ್ನಿವೇಶವಿದೆ. ಸೈಂಟ್‌ಪಾಲ್‌ನ ಕಾಲನ್ನು ತಬ್ಬಿ ಹಿಡಿದುಕೊಂಡು ಕುಳಿತ ವ್ಯಕ್ತಿ, ಸೈಂಟ್‌ಪಾಲ್‌ನ ಸಾವಿನ ಧಾರುಣಸ್ಥಿತಿಯನ್ನು ಭಾವಾಕ್ರಾಂತನಾಗಿ ನೋಡುತ್ತಿದ್ದಾನೆ. ಶಿಲುಬೆಗೇರಿಸಿದ ಇವರನ್ನು ಹಗ್ಗದಿಂದ ಎಳೆದೊಯ್ಯುತ್ತಿರುವ ಇನ್ನೊಬ್ಬ ವ್ಯಕ್ತಿ, ಹೀಗೆ ನಾಲ್ಕು ಜನರ ಈ ಸಂಯೋಜನ ಕೃತಿ ತುಂಬ ಗಂಭೀರವಾಗಿ ಚಿತ್ರಿಸಲ್ಪಟ್ಟಿದೆ. ತಲೆ ಕೆಳಗೆ ಮಾಡಿ ದಿಟ್ಟತನದಿಂದ ಸಾವನ್ನೆದುರಿಸುವ ಸೈಂಟ್‌ಪಾಲ್‌ನ ಮುಖಮುದ್ರೆ,

೧೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ – ೨೬೭

ನಗ್ನವಾಗಿರುವ ಅವನ ಶರೀರದ ಅಂಗಾಂಗಗಳ ಮಾಂಸ ಖಂಡಗಳು, ನಯನಾಜೂಕಿನಿಂದ ಮೂಡಿ ಬಂದಿವೆ. ಈ ಕೃತಿ ಕಹ್ರವಾಜೋನನ್ನು ಅವನೊಬ್ಬ ಸಮರ್ಥ. ಕಲಾವಿದನೆಂಬುದನ್ನು ಋಜುವಾತು ಮಾಡಿದೆ.

ಕಹ್ರವಾಜೋ ಯಾವುದೇ ಚಿತ್ರ ಬಿಡಿಸಲಿ ಅದು ಅವಾಸ್ತವವಾಗಿರುವದಿಲ್ಲ, ತನ್ನ ಬದುಕಿನ ದೈನಂದಿನ ಪ್ರಚಲಿತ ಸನ್ನಿವೇಶಗಳನ್ನು ಧಾರ್ಮಿಕ ಇನ್ನಿತರ ವಿಷಯಗಳ ಮೂಲಕ ಅಭಿವ್ಯಕ್ತಿಸುವ ಪ್ರಯತ್ನ ಅವನ ಕೃತಿಗಳಲ್ಲಿ ಎದ್ದು ಕಾಣಿಸುತ್ತದೆ. ನೈಜ ಘಟನೆಗಳ ಆವರಣದ ಚಿತ್ರಗಳು ಇದರಿಂದ ಕೃತ್ರಿಮವಾಗಿ ಕಾಣದೆ ಅವು ಅಂದಿನ ಜನತೆಯ ಸಹಜ ಸನ್ನಿವೇಶಗಳಾಗಿ ಯಥಾರ್ಥ ಭಾವನೆಯನ್ನು ಒಡಮೂಡಿಸುತ್ತವೆ. ಕಹ್ರವಾಜೋನ ಚಿತ್ರದ ಪಾತ್ರಗಳು ಒಂದು ರೀತಿಯಲ್ಲಿ ಅನುಕಂಪೆಯ ಜೊತೆಗೆ ಕ್ರಾಂತಿಕಾರಕ ಸಂದೇಶಗಳನ್ನು ಅಪ್ರತ್ಯಕ್ಷವಾಗಿ ಪ್ರತಿಪಾದಿಸುತ್ತವೆ.

೩. **ಸೈಂಟ್ ಮ್ಯಾಥ್ಯುವಿನ ಬಲಿದಾನದ ಚಿತ್ರ :** ಕಹ್ರವಾಜೋ ಕ್ರಿ.ಶ. ೧೬೦೦ರಲ್ಲಿ ರಚಿಸಿದ ಅಪೂರ್ವ ಚಿತ್ರಗಳಲ್ಲೊಂದು ಎಂದು ಪ್ರಸಿದ್ಧಿ ಪಡೆದ ಚಿತ್ರ ಸೈಂಟ ಮ್ಯಾಥ್ಯುವಿನ ಸಾವಿನದು. ಇಥೋಪಿಯಾದ ದೊರೆಯ ಆಜ್ಞೆಯಂತೆ ಮ್ಯಾಥ್ಯುವಿನಗೆ ಆಫ್ರಿಕಾದಲ್ಲಿ ಮರಣ ದಂಡನೆ ವಿಧಿಸಲ್ಪಟ್ಟಿತು. ರಾಜಾಜ್ಞೆಯಂತೆ ಅವನನ್ನು ಕೊಲ್ಲಲು ಬಂದ ನಗ್ನ ರೂಪದ ವ್ಯಕ್ತಿ ಈ ಚಿತ್ರಾಂಶದಲ್ಲಿ ಕಾಣಿಸುತ್ತಾನೆ. ಒಬ್ಬ ತರುಣ ಈ ದೃಶ್ಯವನ್ನು ಕಂಡು ಭಯಭೀತನಾಗಿ ಕಾಲೆತ್ತಲಾರದೆ ಸ್ಥಂಭೀಭೂತನಾಗಿ ನಿಂತಿದ್ದಾನೆ. ಇಲ್ಲಿ ಕಾಣಿಸಿದ ಚಿತ್ರದ ಎಡಭಾಗದಲ್ಲಿ ಮ್ಯಾಥ್ಯುವಿನ ಹತ್ಯಗೆ ಆಜ್ಞೆಯನ್ನು ಹೊತ್ತುಕೊಂಡು ಬಂದವರಿದ್ದಾರೆ. ಮರಣ ದಂಡನೆಗೆ ಗುರಿಯಾದ ಮ್ಯಾಥ್ಯು ನೆಲದಲ್ಲಿ ಉರುಳಿ ಬಿದ್ದಿದ್ದಾನೆ. ಆಗ ಬಾನಿನಿಂದ ತೇಲಿಬಂದ ದೇವದೂತನೊಬ್ಬ ಸಮಾಧಾನ ಸೂಚಕವಾದ ತಾಳೆಯ ಗರಿಯೊಂದನ್ನು ಆತನಿಗೆ ಅರ್ಪಿಸುತ್ತಿದ್ದಾನೆ, ಅವನ ಸಾವು ಬಲಿದಾನವೆನಿಸುತ್ತದೆ. ಈ ಚಿತ್ರದ ಯಾವತ್ತು ಪ್ರಬಂಧ, ಅಲ್ಲಿನ ವ್ಯಕ್ತಿಗಳ ಅಂಗರೇಖೆಗಳು ಲಯಬದ್ಧವಾಗಿ ಹರಿಯುವ ರೀತಿ, ನೆರಳು ಬೆಳಕಿನ ಯೋಜನೆ ಈ ದೃಶ್ಯದ ಅಪೂರ್ವ ಕ್ರಿಯೆಯನ್ನು ಅಷ್ಟೇ ಶಕ್ತಿಯುತವಾಗಿ ಬಿಂಬಿಸುತ್ತವೆ.[೧೩] ಬಣ್ಣಗಳ ಹಿತಮಿತ ಬಳಕೆ ಚಿತ್ರದ ಹಿಂಬದಿಯ ವಿನ್ಯಾಸದಿಂದ, ಕೃತಿ ನೋಡುಗನನ್ನು ಆಕರ್ಷಿಸುತ್ತದೆ.

೪. **ದಿ ಬಾಯ್ ಬಿಟನ್ ಬಾಯ್ ಎ ಲಿಝರ್ಡ್ :** (The Boy Bitten by a Lizard.) ಈ ಚಿತ್ರವು ನ್ಯೂಯಾರ್ಕಿನ ಮಾಡರ್ನ್ ಆರ್ಟ್ ಮ್ಯೂಜಿಯಮ್‌ನಲ್ಲಿ ಸಂಗ್ರಹಗೊಂಡಿದೆ. ಸನಾತನ ಕಾಲಾವಿದರ ಶೈಲಿಯ ಕೊನೆಯ ಚಿತ್ರವಿದು ಎಂದು ಕೆಲವು ವಿಮರ್ಶಕರು ಬರೆದಿದ್ದಾರೆ. ಹೊಸ ದೃಷ್ಟಿಕೋನದಿಂದ ಹಳೆಯ ವಿಷಯವನ್ನು ಇಲ್ಲಿ ಕಹ್ರವಾಜೋ ನೋಡಿದ್ದು ಗಮನಾರ್ಹ. ಇದು ಅವನ ಹೊಸತನದ ಕೊಡುಗೆ ಕೂಡ ಆಗಿದೆ. “He shows the simple natural at a boy whose finger has been caught

೧೩. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೭

by the little Lizard a straight forward and un-ideal conception. moreover he also shows that a picture need not have a good looking or Classical subject. This type of treatment had been ristricted to a tortured saint, but with caravaggio if could be used for any theme. "His interest in the specific quality of objects and substances may be seen in the careful and precise rendering of the water bottle with its flower the charries, or the hair of the boy.[೧೪] ಕಪ್ರವಾಜನ ಈ ಚಿತ್ರದ ನೆರಳು ಬೆಳಕು, ಚಿತ್ರಾಂಕಿತ ಹುಡುಗನ ಗಂಟಿಕ್ಕಿದ ಮುಖದ ಭಾವ, ತಲೆಗೂದಲುಗಳು ಮೈಮೇಲಿರುವ ಬಟ್ಟೆಯ ನಿರಿಗೆಗಳು ನಯನಾಜೂಕಿನಲ್ಲಿ ನಿರೂಪಿತವಾದ ಕೈ ಬೆರಳುಗಳು ಮುಂದೆ ಇರುವ ಹಣ್ಣುಗಳು ಕಾಜಿನ ನೀರಿರುವ ಪಾತ್ರೆ ಅದರಲ್ಲಿಟ್ಟಿರುವ ಹೂವಿನ ಗೊಂಚಲು ತದ್ರೂಪವಾಗಿ ಚಿತ್ರಿಸಲ್ಪಟ್ಟಿವೆ. ಕಪ್ರವಾಜೋ ಯಾವ ವಸ್ತುವನ್ನು ಅಲಕ್ಷಿಸುವುದಿಲ್ಲ, ತನ್ನ ಚಿತ್ರದ ಪರಿವಾರಗಳನ್ನು ಅಷ್ಟೇ ಸೂಕ್ಷ್ಮವಾಗಿಚಿತ್ರಿಸುತ್ತಾನೆ ಎಂಬುದಕ್ಕೆ ಈ ಚಿತ್ರ ಒಂದು ಮಾದರಿಯೆನ್ನಬಹುದು. ಸತ್ವಶಾಲಿಯಾದ ರೇಖಾವಿನ್ಯಾಸ, ತನ್ನ ಮನದ ಭಾವವನ್ನು ಅಭಿವ್ಯಕ್ತಿ ಮಾಧ್ಯಮದ ಮೂಲಕ ಸಾದರ ಪಡಿಸುವಲ್ಲಿ ತೋರುವ ಸಂಯಮ, ಚಾಣಾಕ್ಷತನ, ಅವನ ಪಳಗಿದ ಕೈಕುಂಚಗಳ ಬಣ್ಣದ ಹಿತಮಿತವಾದ ಲೇಪನದಿಂದ ಒಟ್ಟು ಕಲಾಕೃತಿ ಅದ್ದೂರಿಯಾಗಿ ಮೂಡಿ ಬರುತ್ತದೆ. ಬಣ್ಣಗಳ ಮೂಲಕವಾಗಿಯೇ ತೋರಿಸುವ ಬೆಳಕು ಕತ್ತಲೆಯ ವಿನ್ಯಾಸ ಕಪ್ರವಾಜೋನ ವಿಶೇಷ ಕೊಡುಗೆಯಾಗಿದೆ.

೫. **ಜೋಸೆಫ್‌ನ ಪ್ರಯಾಣದ ಚಿತ್ರ :** ಕ್ರಿ.ಶ. ೧೫೯೫-೯೬ರಲ್ಲಿ ಈ ಚಿತ್ರವು ರಚನೆಗೊಂಡಿದೆ. ಜೋಸೆಫ್ ಈಜಿಪ್ತಿಗೆ ಪರಾರಿಯಾಗುತ್ತ ದಾರಿಯಲ್ಲೊಂದು ಕಡೆ ವಿಶ್ರಾಂತಿ ತೆಗೆದುಕೊಳ್ಳುವ ದೃಶ್ಯವಾಗಿದೆ. ಈ ನೋಟದಲ್ಲಿ ಜೋಸೆಫ್ ಸ್ವರ ಪ್ರಸ್ತಾರವುಳ್ಳ ಪುಸ್ತಕದ ಹಾಳೆಯನ್ನೆತ್ತಿ ಹಿಡಿದಿದ್ದಾನೆ. ದೇವದೂತಿಯೊಬ್ಬಳು ಗಗನದಿಂದ ಹಾರಿ ಬಂದು, ಮೇರಿ, ಬಾಲಕ ಯೇಸು ಇವರ ಸಲುವಾಗಿ ಮೋಹಕ ಗಾನವನ್ನು ಪಿಟೀಲಿನ ಮೇಲೆ ನುಡಿಸುತ್ತಿದ್ದಾಳೆ. ಹಿನ್ನೆಯಲ್ಲಿ ಸುಂದರವಾದ ನಿಸರ್ಗ ಕಾಣಿಸುತ್ತದೆ. ಅದಕ್ಕೊಪ್ಪುವಂತೆ ಚಿತ್ರ ಪ್ರಬಂಧದಲ್ಲಿ ವಾಸ್ತವಿಕವಾಗಿ ಕಾಣಿಸುವ ವ್ಯಕ್ತಿಗಳು ಕಾಣಿಸುತ್ತಾರೆ. ಬೆಳಕಿನಿಂದ ಎದ್ದು ಕಾಣುವ ದೇವದೂತಿಯಲ್ಲಿ ವಾಸ್ತವಿಕ ಚೆಲುವೆಲ್ಲವು ಹೊರಸೂಸುತ್ತದೆ.[೧೫]

೬. **ದಿ ಡೆತ್ ಆಫ್ ದಿ ವರ್ಜಿನ್ :** (The Death of the Virgin) ಕಪ್ರವಾಜೋನ ಮತ್ತೊಂದು ಅತ್ಯುತ್ತಮ ಕಲಾಕೃತಿ ಎಂದು ಕರೆಯಿಸಿಕೊಂಡ ಚಿತ್ರವಿದು, ಲೂವೇರೇ ಪ್ಯಾರಿಸ್‌ನಲ್ಲಿ ಈಗ ಸಂಗ್ರಹಗೊಂಡಿದೆ. ದುಃಖದ ಸನ್ನಿವೇಶವೊಂದನ್ನು ಚಿತ್ರದ

---

೧೪. Bernard Myers : 50 Great Artist, Page-86

೧೫. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೭

ವಿಷಯವನ್ನಾಗಿ ಮಾಡಿಕೊಂಡು ಪ್ರೇಕ್ಷಕರ ಸಹಾನುಭೂತಿ ಗಳಿಸುವದೇ ಚಿತ್ರದ ಉದ್ದೇಶವೆಂದು ಕಪ್ರವಾಜೋ ಭಾವಿಸಿಲ್ಲ. ಆತ ಸನ್ನಿವೇಶದ ಯಥಾವತ್ತಾದ ವಾತಾವರಣವನ್ನು ತನ್ನ ಕಲಾಕೃತಿಯ ಗಂಭೀರ ಆವರಣವನ್ನಾಗಿ ಪರಿಗಣಿಸುತ್ತಾನೆ. ಚಿತ್ರದ ಸಂದೇಶವನ್ನು ಪ್ರತಿಪಾದನೆ ಮಾಡುವ ಆಂತರಿಕ ತೊಳಲಾಟ ಅವನ ಕೃತಿಗಳ ವೈಶಿಷ್ಟ ಕೂಡ ಆಗಿದೆ. ಕತ್ತಲಿನ ವಾತಾವರಣದಲ್ಲಿ ಆರೇಳು ಜನರು ಸತ್ತ ಹೆಣ್ಣುಮಗಳ ಕಡೆ ಬೇರೆ ಬೇರೆ ದೃಷ್ಟಿಕೋನಗಳಿಂದ ವೀಕ್ಷಿಸುವ ವಿವಿಧ ಬಂಗಿಯ ಈ ವ್ಯಕ್ತಿಗಳಲ್ಲಿ ಕೆಲವರ ತಲೆ, ಕೈ, ಮುಖ ಹೀಗೆ ಶರೀರದ ಯಾವ ಯಾವುದೋ ಭಾಗದಲ್ಲಿ ಬಿದ್ದಿರುವ ಬೆಳಕು ಆಯಾ ವ್ಯಕ್ತಿಗಳು ಕತ್ತಲಿನಲ್ಲಿಯೂ, ಅವರ ವ್ಯಕ್ತಿಚಿತ್ರವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಚಿತ್ರಿಸಲಾಗಿದೆ. ಸತ್ತ ವ್ಯಕ್ತಿಯ ಮುಖದ ಲಕ್ಷಣದ ರೀತಿಯೇ ಬೇರೆ, ಹೀಗೆ ಚಿತ್ರದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯೂ ನೋಡುಗರ ಅನುಕಂಪೆಗೆ ಪಾತ್ರರಾಗುತ್ತಾರೆ. ಚಿತ್ರದ ಹಿನ್ನೆಲೆಯಲ್ಲಿ ಇಳಿಬಿದ್ದಿರುವ ಅರಿವೆಯ ನಿರಿಗೆಗಳು ಚಿತ್ರಕ್ಕೆ ಇನ್ನಷ್ಟು ಕಳೆ ತಂದಿವೆ ಎಂದು ಹೇಳಬಹುದು.

Moreover, as in most Boroque paintings, there is a delibreate incompleteness; cut-off figures carry the eye out of the painting on all sides, and back into its as well. Many people of that day were much offended by this 'Vulgarization' of religious art, by the abandoment of religious nobility in favour of a realism which demanded that the arciest paint only who he could see. Caravggio tied wings on the backs of his models when he had to paint angels, later in addition to these revolutionary religious treatments, caravaggio manaed to get him self into truble in various other ways.[೧೬]

ಕಪ್ರವಾಜೋನ ಮೇಲೆ ಅನೇಕ ಕಲಾವಿದರ ಪ್ರಭಾವ ಬೀರಿದರೂ ತನ್ನತನವನ್ನು ಉಳಿಸಿಕೊಂಡು ಬರುವದರೊಂದಿಗೆ ಅದನ್ನು ಬೆಳೆಯಿಸಿಕೊಂಡು ಬಂದಿದ್ದಾನೆ. ಇಲ್ಲಿ ಅವನ ಕ್ರೀಯಾಶೀಲ ಹಾಗೂ ಪ್ರಯತ್ನವಾದಿ ವ್ಯಕ್ತಿತ್ವವನ್ನು ನಾವು ಕಾಣಬಹುದು. ವಾಸ್ತವಿಕ ಶೈಲಿಯ ಬೆಳವಣಿಗೆಯ ಹರಿಕಾರನಾಗಿ ಕಪ್ರವಾಜೋ ಬೆಳೆಯಿಸಿಕೊಂಡು ಬಂದಿದ್ದಾನೆ. ಅಲ್ಲದೆ ಇವನ ತರುವಾಯ ಅವನ ಅನುಯಾಯಿಗಳು ಕಪ್ರವಾಜೋನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

೭. **ಕ್ಯೂಪಿಡ್ ಕೃತಿ :** ಕ್ರಿ.ಶ. ೧೬೦೦ರಲ್ಲಿ ಬರೆದ ಇನ್ನೊಂದು ಮೋಹಕ ಸೃಷ್ಟಿ 'ಕ್ಯೂಪಿಡ್' ಎಂಬುದು. ಕ್ಯೂಪಿಡ್ ಭಾರತೀಯ ಕಲ್ಪನೆಯ ಮನ್ಮಥನಿಗೆ ಸಮಾನನಾದ ವ್ಯಕ್ತಿ. ಅಲ್ಲಿಯೂ ಕಾಮನ ಬಾಣಕ್ಕೆ ಸಂಕೇತವಾಗಿ ಅವನ ಕೈಯಲ್ಲಿ ಅಂಬನ್ನು ಕೊಡುವ ವಾಡಿಕೆಯಿದೆ.

---

೧೬. Bernard Myers : 50 Great Artist, Page-88

ಕಹ್ರವಾಜೋ ಆತನನ್ನು ಚೆಲುವಿನ ಒಬ್ಬ ಬಾಲಕನನ್ನಾಗಿ ಇಲ್ಲಿ ತೋರಿಸಿದ್ದಾನೆ. ಅವನ ಕೆಳಗೆ ವಾದ್ಯ ಪರಿಕರಗಳಿವೆ. ಲೋಹದ ಕವಚ, ಕೈವಾರ, ಕಿರೀಟಗಳಂತಹ ಅರಸೊತ್ತಿಗೆಯ ಮತ್ತು ಸಾಹಸಗಳ ಸಾಂಕೇತಿಕ ವಸ್ತುಗಳು ಬಿದ್ದಿವೆ. ಕ್ಯೂಪಿಡ್‌ನ ತುಂಟ ನಗು ಈ ಮಾನವೀಯ ಸಾಧನಗಳನ್ನೆಲ್ಲ, ಮೂದಲಿಸುವ ತೆರನಲ್ಲಿದೆ. ತೋರಿಕೆಗೆ ಇದು ವಾಸ್ತವಿಕ ಶೈಲಿಯ ಚಿತ್ರವೆಸಿದರೂ, ಚಿತ್ರಕಾರನ ಪ್ರತಿಭೆಯಿಂದಾಗಿ, ಆತ ಇಲ್ಲಿ ತೋರಿಸಿದ ವರ್ಣ ವಿನ್ಯಾಸ ಮತ್ತು ಬೆಳಕಿನ ಯೋಜನೆಯಿಂದಾಗಿ ಇದೊಂದು ಅಸಮಾನ್ಯ ಸೃಷ್ಟಿಯೆನಿಸುತ್ತದೆ.[೧೭] ಕಹ್ರವಾಜೋನ ಈ ಕೃತಿ ಪೌರಾಣಿಕ ಹಿನ್ನೆಲೆಯಲ್ಲಿ ರಚನೆಗೊಂಡಿದೆ.

ಕಹ್ರವಾಜೋನ ಕಲಾಶೈಲಿಯನ್ನು ಅನೇಕ ಕಲಾವಿದರು ಅನುಸರಿಸಿಕೊಂಡು ಬಂದಿದ್ದಾರೆ. ಅವರಲ್ಲಿ ಒರಿಘೋ ಜೆಂಟಲೆಸಾಚಿ, ಮತ್ತು ಇವನ ಮಗಳು ಅರ್ಟಿ ಮೇಸಿಯಾ, ಮಾನ್ಫರಡಿ, ಬಾರ್ಜಿನ್ನೇ, ಸೈರೋಡೈನೇ, ಮುಂತಾದವರು ಪ್ರಮುಖರಾಗಿದ್ದಾರೆ.

ಕಹ್ರವಾಜೋನನ ಕಲಾಕೃತಿಗಳ ಸಂಗ್ರಹ : ಇವನ ಕಲಾಕೃತಿಗಳು ಜಗತ್ತಿನ ಪ್ರಮುಖ ಕಲಾಸಂಗ್ರಹಗಳಲ್ಲಿವೆ. ಬರ್ಲಿನ್, ಫ್ಲಾರೆನ್ಸ್, ಲಂಡನ್, ಮೇಸಾಯಿನ್, ಮಿಲಾನ್, ನೇಪಲ್ಸ್, ನ್ಯೂಯಾರ್ಕ್, ಪ್ಯಾರಿಸ್, ರೋಮ್, ಇತ್ಯಾದಿ[೧೮] ಸ್ಥಳಗಳಲ್ಲಿ ಸಂಗ್ರಹಗೊಂಡಿವೆ.

ಕಹ್ರವಾಜೋನ ಕಲಾಶೈಲಿ : ಕಹ್ರವಾಜೋನ ಕಲಾಕೃತಿಗಳಲ್ಲಿ ಹೊರಗಿನಿಂದ ಎಲ್ಲಿಂದಲೋ ಬೆಳಕು ಬಿದ್ದು ಚಿತ್ರದಲ್ಲಿಯ ಸನ್ನಿವೇಶ ತೇಜೋಮಯವಾಗಿ ಕಂಗೊಳಿಸಿ ನೋಡುಗನಲ್ಲಿ ಆಶ್ಚರ್ಯ ವ್ಯಕ್ತಪಡಿಸುತ್ತವೆ. ಸಾಮಾನ್ಯವಾಗಿ ಇವನ ಚಿತ್ರಗಳ ಹಿನ್ನೆಲೆ ಕಪ್ಪು ವರ್ಣದಿಂದ ಆಚ್ಛಾದಿತವಾಗಿದ್ದು, ಪ್ರಮುಖ ವ್ಯಕ್ತಿ ಅಥವಾ ಮುಖ್ಯವಾಗಿ ಹೇಳಬೇಕಾದ ವ್ಯಕ್ತಿಗೆ ಹೆಚ್ಚಿನ ಮಹತ್ವ ಕೊಟ್ಟದ್ದು ಕಂಡುಬರುತ್ತದೆ.

"The effect of Carvaggio's two styles the clear limpid naturalistic early manner and the more spectacular light and dark realism of his later works is seen throught the seventeenth and following centuris"[೧೯] ಕಹ್ರವಾಜೋನ ಮೇಲೆ ಅನೇಕ ಕಲಾವಿದರ ಪ್ರಭಾವ ಆಗಿದ್ದರೂ ತನ್ನತನವನ್ನು ಉಳಿಸಿಕೊಂಡು ಮತ್ತು ಬೆಳೆಯಿಸಿಕೊಂಡು ಬಂದಿದ್ದಾನೆ. ಈ ದೃಷ್ಟಿಯಿಂದಲೇ ಕಹ್ರವಾಜೋನ ಕಲಾಕೃತಿಗಳು ಸಹೃದಯನನ್ನು ಆಕರ್ಷಿಸುತ್ತವೆ.

೩. ಬಾರೋಕ್ ಚಿತ್ರಕಲೆಯ ಮೂರು ಯುಗ(ಹಂತ)ಗಳು:

ಇಟಲಿಯ ಚಿತ್ರಕಲೆಯನ್ನು[೨೦] ಸಾಮಾನ್ಯವಾಗಿ ಕಲಾವಿಮರ್ಶಕರು ೧೩೨೦ರಲ್ಲಿ ರಚಿಸಿದ ಗಿಟ್ಟೋನ ಸೇಂಟ ಫ್ರಾನ್ಸಿಸ್, ರಿಸಿವ್ವಿಂಗ್‌ದ ಸ್ಟಿಗ್ಮೆಂಟಾದಿಂದ ಹಿಡಿದು ೧೩೪೦ರ ಫೇರಾ

---

೧೭. ಡಾ. ಶಿವರಾಮ ಕಾರಂತ: ಕಲಾಪ್ರಪಂಚ, ಪುಟ-೨೮೭.

೧೮. ವಿವರಗಳಿಗೆ ನೋಡಿ: Peter & Linda Murry : A Dictionary of Art and Artists, Page-47

೧೯. Bernard Myers : 50 Great Artists, Page-88

೨೦. Rene Huyghe : Art Treasures of The Louvre, Page-9.

ಅಂಜಿಲೋ, ವಿನ್ಸಿ, ಬಾಟಿಸೆಲ್ಲಿ, ಚಾರ್ಡೋನೇ, ಟಿಟಿನ್, ಟಿಂಟಿರೊಟ್ಟಿನ, 'ಪ್ಯಾರಡೇಜ' ಕೃತಿಯವರೆಗೂ ಪ್ರಮುಖವಾಗಿ ಕಲಾಕೃತಿಗಳನ್ನು ಪರಿಗಣಿಸುತ್ತಾರೆ. ಇಲ್ಲಿ ಬಾರೋಕ್ ಅವಧಿಯ ಚಿತ್ರಕಲೆಯನ್ನು ಮುಖ್ಯವಾಗಿ ಮೂರು ಯುಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಲಾಗುತ್ತದೆ.

i. ಪ್ರಾರಂಭಿಕ ಬಾರೋಕ್ ಯುಗ
ii. ಉಜ್ವಲ ಬಾರೋಕ್ ಯುಗ
iii. ಅಂತಿಮ ಬಾರೋಕ್ ಯುಗ

i. **ಪ್ರಾರಂಭಿಕ ಬಾರೋಕ್ ಯುಗ :** ಈ ಯುಗವನ್ನು ಕ್ರಿ ಶ ೧೫೬೫ರಿಂದ ೧೬೨೫ರ ಅವಧಿಯವರೆಗೆ ಸೃಷ್ಟಿಯಾದ ಕಲೆಗಳನ್ನು ಬಾರೋಕ್ ಚಿತ್ರಕಲೆಯ ಪ್ರಾರಂಭಿಕ ಯುಗವೆಂದು ಕರೆಯುತ್ತಾರೆ. ಈ ಯುಗದ ಲಕ್ಷಣಗಳನ್ನು ನಾವು ಲುಥೋವಿಕೋ ಕಹ್ರಾಷಿ ಕಲಾಕೃತಿಗಳಲ್ಲಿ 'ದಿ ಕನ್‌ವರ್ಷನ್ ಆಫ್ ಸೆಂಟ್‌ಲ್‌ಪಾ' ಫಾರ್ನಿಷ್ ಅರಮನೆಯಲ್ಲಿ ಅನಿಬಾಲಿಕಹ್ರಾಷಿ ಮಾಡಿದ ವರ್ಣಾಲಂಕಾರಗಳಲ್ಲಿ, ರೂಬಿನ್ಸ್‌ನ 'ಗ್ರಿಗರಿ ಆ್ಯಂಡ್ ಡೇಮಿಟೆಲ್ಲಾ' ಎಂಬ ಚಿತ್ರದಲ್ಲಿ ಕಾಣಬಹುದು. ಇಲ್ಲಿ ಕಾಣಿಸುವ ವರ್ಣಮಯ, ವೈಭವ, ಮಾನವ ದುರಂತದ ಮಾರ್ಧವ ಕಲ್ಪನೆ, ಬೆಳಕಿನ ವಿನ್ಯಾಸ ಇವು ತೇಜೋಹಾರಿಯಾಗಿವೆ.[೨೧]

ii. **ಉಜ್ವಲ ಬಾರೋಕ್ ಯುಗ :** ಕ್ರಿ.ಶ. ೧೬೨೫ರಿಂದ ೧೬೭೫ರ ಅವಧಿಯ ಈ ಕಲೆಯನ್ನು ಉಜ್ವಲ ಬಾರೋಕ್ ಯುಗ ಎಂದು ಕರೆಯುತ್ತಾರೆ. ಉಜ್ವಲ ಬಾರೋಕ್ ಶೈಲಿ ಸೃಷ್ಟಿಯಾದದ್ದು ರೋಮ್‌ನಲ್ಲಿ, ಅದನ್ನು ನಾವು ಲುಡಿವಿಚಿ ಮಂದಿರದ ಮೇಲುಛಾವಣಿಯಲ್ಲಿ ಚಿತ್ರಕಾರ ಗರಸಿನೋ ಮಾಡಿರುವ ಚಿತ್ರಾಲಂಕಾರದಲ್ಲಿ, ಸೈಂಟ್ ಆಂಡ್ರಿಯಾ ಮಂದಿರದ ಗುಮ್ಮಟದೊಳಗೆ ಲಾನ್ ಫ್ರಾಂಕೊ ಎಂಬಾತ ರಚಿಸಿರುವ ಚಿತ್ರಾವಳಿಗಳಲ್ಲಿ ಕಾಣಬಹುದು. ಈ ಸಂಪ್ರದಾಯದ ಅತ್ಯುತ್ಕೃಷ್ಟ ಪ್ರತಿಭಾವಂತನೆಂದರೆ ಕಾರ್ಟಾನಾ ಅವನ 'ದಿ ರೋಪ್ ಆಫ್ ದಿ ಸ್ಯಾಬೈನ್ಸ್' ಅಲ್ಲದೆ ಇವನು ವೆನಿಸ್, ಫ್ಲಾರೆನ್ಸ್ ನಗರಗಳಲ್ಲಿ ಚರ್ಚುಗಳಲ್ಲಿ ಮಾಡಿರುವ ಚಾವಣಿ ಚಿತ್ರಾಲಂಕಾರಗಳ ಮಾದರಿಗಳು ಇಟಲಿಯ ಹಲವು ಚರ್ಚುಗಳಲ್ಲಿ ಕಾಣಿಸುತ್ತವೆ.[೨೨]

iii. **ಅಂತಿಮ ಬಾರೋಕ್ ಯುಗ :** ಕ್ರಿ. ಶ. ೧೬೭೫ರಿಂದ ೧೭೧೫ರ ಈ ಸಂದರ್ಭದಲ್ಲಿ ರಚನೆಯಾದ ಕೃತಿಗಳನ್ನು ಅಂತಿಮ ಬಾರೋಕ್ ಯುಗ ಎಂದು ಕರೆಯುತ್ತಾರೆ. ಹೆಸರೇ ಸೂಚಿಸುವಂತೆ ಬಾರೋಕ್ ಚಿತ್ರಕಲೆಯ ಕೊನೆಯ ಭಾಗದಲ್ಲಿ ರಚನೆಗೊಂಡ ಬಾರೋಕ್ ಶೈಲಿಯ ಕಲಾಕೃತಿಗಳು ಹಲವಾರು ಇದ್ದರೂ ಇಲ್ಲಿ ಮಾದರಿಗಾಗಿ ಕೆಲವನ್ನು ನೋಡಬಹುದು. ಈ ಹಂತದಲ್ಲಿ ಎದ್ದು ಕಾಣುವ ವ್ಯಕ್ತಿ ಸ್ಪೇನಿನ ವೆಲ್ಜಿಜ್, ಇವನ ದಿ ಮೇಡ್ಸ್ ಆಫ್ ಆನರ್, ಸರಾಡರ್ ಆಫ್ ಬ್ರೀಡಾ ಮುಂತಾದ ಚಿತ್ರಗಳು. ಗಿವೋನಿ

---

೨೧. ಕನ್ನಡ ವಿಶ್ವಕೋಶ : ಸಂಪುಟ-೭, ಪುಟ - ೩೮೭

೨೨. ಕನ್ನಡ ವಿಶ್ವಕೋಶ : ಸಂಪುಟ-೭, ಪುಟ-೩೮೭

ಬಾಟೀಸ್ಟಾಗಲ್ಲಿ ಇನ್ನೊಬ್ಬ ಪ್ರಖ್ಯಾತ ಶಿಲ್ಪಿ, ಚಿತ್ರಕಾರ. ಇವನ ಭಿತ್ತಿಚಿತ್ರಗಳು ಪ್ರಮುಖವಾಗಿ ರೋಮಿನಲ್ಲಿರುವ 'ದಿ ಸಿಲ್ಲಿಂಗ್ ಆಫ್ ದಿ ಚರ್ಚ್ ಅಫ್‌ಗಿಸು'[೨೩] ಮುಂತಾದವುಗಳನ್ನು ಹೆಸರಿಸಬಹುದು.

೪. ವಿವಿಧ ದೇಶಗಳಲ್ಲಿ ಬಾರೋಕ್ ಚಿತ್ರಕಾರರು:[೨೪]

೧. ಕರಾಚಿ ಸಂಪ್ರದಾಯದ ಕಲಾವಿದರು:

೧. ಅಗಸ್ಟಿನೋ ಕರಾಚಿ	೧೫೫೭-೧೬೦೨
೨. ಅನಿಬಲಿ ಕರಾಚಿ	೧೫೬೦-೧೬೦೯
೩. ಡೊಮೋನಿಸಿನೋ	೧೫೮೧-೧೬೪೧
೪. ಗುರಿಸಿನೋ	೧೫೯೧-೧೬೬೬
೫. ಗುಡಿರೇನಿ	೧೫೭೫-೧೬೪೨
೬. ಕಾರ್ಲೋಡೆಲ್ಸಿ	೧೬೧೬-೧೬೮೬
೭. ಮರ್ಟಾ	೧೬೨೫-೧೭೧೩

೨. ಕಪ್ರವಾಜೋ ಸಂಪ್ರದಾಯದ ಕಲಾವಿದರು:

೧. ಕಹ್ರಾವಾಜೋ	೧೫೬೫-೧೬೦೯
೨. ಕೋರ್ಟಾನಾ	೧೫೯೬-೧೬೬೯
೩. ಪೋಜೋ	೧೬೪೨-೧೭೦೯
೪. ಪ್ರೇಡಿನಂಡೋ	೧೬೫೭-೧೭೪೩
೫. ಫ್ರಾನ್ಸಿಸ್ಕೋಬಿಬೇನಾ	೧೬೫೯-೧೭೩೯
೬. ಸಾಲವಟೊರ ರೋಜಾ	೧೬೧೫-೧೬೭೩
೭. ಮೆಗ್ನೆಸ್ಕೋ	೧೬೮೧-೧೭೪೭

೩. ವೇನಿಸ್‌ದ ಚಿತ್ರಕಾರರು :

೧. ಟಿಪೋಲೋ (ಗಿವೋದನಿ ಬಟೋಸ್ಟಾ	೧೬೯೬-೧೭೭೦
೨. ಕಾನಲೆಟ್ಟೋ (ಅಂಟೋನಿ ಸಿ.)	೧೬೯೭-೧೭೬೮
೩. ಪೀಯಜಟ್ಟಾ	೧೬೮೨-೧೭೫೪
೪. ಲೋಂಗಿ	೧೭೦೨-೧೭೭೨
೫. ಗೋರಿಡಿ	೧೭೧೨-೧೭೯೩

---

೨೩. Edith Tomory : Introducation to the History of Fine Arts in India and the West, page-160

೨೪. ನೋಡಿರಿ Dagoberted Runes & Harry . G Schrickel (Ed) Encyclopedia of Arts : Page - 96

೪. ಫ್ಲ್ಯಾಮೀಶ್ ಮತ್ತು ಡಚ್‌ನ ಚಿತ್ರಕಾರರು :

೧.	ರೂಬಿನ್ಸ್	೧೫೭೭-೧೬೪೦
೨.	ರೆಂಬ್ರಾಂಟ್	೧೬೦೬-೧೬೬೯
೩.	ಜಾಕೋಟ್‌ವ್ಹಾನ್‌ರೊಯಿಸಿಡಿಲ್	೧೬೨೮-೧೬೮೨
೪.	ಹೋಬಿಮ್ಮಾ	೧೬೩೮-೧೭೦೯
೫.	ವೆರ್ಮಿಯರ್	೧೬೩೨-೧೬೭೫
೬.	ಪಿಟರ್ ಡಿ. ಹೊಕಾ	೧೬೨೯-೧೬೭೭
೭.	ಟೆರಬೊಟ್	೧೬೧೭-೧೬೮೧
೮.	ಫ್ರಾನ್ಸಹಾಲ್ಸ್	೧೫೮೨-೧೬೬೬
೯.	ಅಡ್ರಿನ್‌ನಿವ್ಹಾನ್ ಅಸ್ಟೇ	೧೬೧೦-೧೬೮೫
೧೦.	ಜಾನ್ ಸ್ಟೀನ್	೧೬೨೬-೧೬೭೯
೧೧.	ಅಡ್ರೀನ್ ಬೋದರ್	೧೬೦೫-೧೬೩೮

೫. ಸ್ಪ್ಯಾನಿಶ್‌ದ ಚಿತ್ರಕಾರರು :

೧.	ಗ್ರೇಕೋ (ರೆಲ್ಲಿಡೊಮೆನಿಕೊಕ್ರೇಟ್)	೧೫೪೧-೧೬೧೩
೨.	ವಲಸ್ಕತ್	೧೫೯೯-೧೬೬೦
೩.	ರೈಬೇರಾ	೧೫೮೮-೧೬೫೩
೪.	ಜರ್ಬಾರನ್	೧೫೯೮-೧೬೬೪
೫.	ಮುರಿಲ್ಲೋ	೧೬೧೮-೧೬೮೨

೬. ಫ್ರೆಂಚ್‌ದ ಚಿತ್ರಕಾರರು :

೧.	ಪೋಸಿನ್ ಮತ್ತು ಕ್ಲಾಡ್‌ಲೋರೈನ್	೧೬೦೦-೧೬೮೨
೨.	ಲೇ ನೈನ್ (ಅಂಟೊನೋ)	೧೫೮೮-೧೬೪೮
೩.	ಲೋಯಿಸ್	೧೫೯೩-೧೬೪೮
೪.	ಮ್ಯಾಥೋ	೧೬೯೭-೧೬೦೭

೭. ಯುರೋಪದ ಚಿತ್ರಕಾರರು :

೧.	ಪಟ್ಟು	೧೬೮೪-೧೭೨೧
೨.	ಬುಚರ್	೧೭೦೩-೧೭೭೦
೩.	ಫ್ರಾಗ್‌ನಾರ್ಡ	೧೭೩೨-೧೮೦೬

೮. ಇಂಗ್ಲಂಡದ ಚಿತ್ರಕಾರರು :

೧.	ಗೋನ್ಸ್‌ಬರ್ಗ್	೧೭೨೭-೧೭೮೮
೨.	ಹೋಗಾರ್ಥ್	೧೬೯೭-೧೭೬೪

ಇಟಲಿ ದೇಶದಲ್ಲಿ ಹೊಸ ಹುಟ್ಟಿನ ಯುಗದ ಚಿತ್ರಕಲೆಯಲ್ಲಿ ಪಾಶ್ಚಾತ್ಯ ಕಲಾ ಸಂಶೋಧನೆಗಳ ಆವಿಷ್ಕಾರವಿದೆ. ಲಿಯೋನಾರ್ಡೋ, ಬಾಟಿಸೆಲ್ಲಿ ಮುಂತಾದ ಪ್ರತಿಭಾವಂತ ಕಲಾವಿದರ ಕೃತಿಗಳಲ್ಲಿ ಕಾವ್ಯಮಯ ಸೌಂದರ್ಯವನ್ನು ಕಾಣಬಹುದು. ಗ್ರೀಕ್-ರೋಮನ್ (classical) ಹಾಗೂ ಗಾಥಿಕ್ 'ಮೂಡು'ಗಳ ಸಮ್ಮೇಳನವೇ ಇವರ ಕೃತಿಗಳಲ್ಲಿದೆ. ಒಟ್ಟಿನಲ್ಲಿ ಹೇಳುವದಾದರೆ ಇಟಲಿ ದೇಶದ ಚಿತ್ರಕಲೆಯು ಮಾನವನ ಮಾನವೀಯತೆಯನ್ನು ಒತ್ತಿ ತೋರಿಸುತ್ತದೆ.

"Know, then, they self presume not God to Sean, The Proper Study of mankind is man"

ಪೋಪ ಕವಿಯ ಈ ಎರಡು ಸಾಲುಗಳು ಹದಿನಾರು ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಸುಸಂಸ್ಕೃತ ಯುರೋಪಿಯನ್ನನ ಮನೋಭಾವವನ್ನು ಎತ್ತಿ ತೋರಿಸುತ್ತದೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ, ಈ ಮನೋವೃತ್ತಿ ಕಂಡುಬರುತ್ತದೆ. ಚಿತ್ರಕಲೆಯ ಅಭಿವೃದ್ಧಿ ಹಾಗೂ ಉತ್ಪಾದನೆಯ ದೃಷ್ಟಿಯಿಂದ ಚಿತ್ರಕಲೆಯ ಇತಿಹಾಸದಲ್ಲಿಯೇ ಈ ಶತಮಾನಕ್ಕಿದ್ದಷ್ಟು ಮಹತ್ವ ಬೇರೆ ಯಾವ ಶತಮಾನಕ್ಕೂ ಇಲ್ಲ[೨೫] ಎಂಬ ಮಾತನ್ನು ಯಾರೂ ಅಲ್ಲಗಳೆಯುವಂತಿಲ್ಲ. ಬಾರೋಕ್ ಚಿತ್ರಕಲೆಯ ಸುವರ್ಣಯುಗವೆಂದು ಹೇಳಬಹುದಾದ ಈ ಶತಮಾನಗಳು ಕಲಾಜಗತ್ತಿನಲ್ಲಿ ತನ್ನತನವನ್ನು ಉಳಿಸಿಕೊಂಡು ಬಂದಿವೆ. ಮತ್ತು ಉತ್ತಮ ಕಲಾವಿದರನ್ನು ಪಡೆದ ಕೀರ್ತಿಯೂ ಈ ಶತಮಾನಗಳಿಗೆ ಸಲ್ಲುತ್ತದೆ.

❑


---

೨೫. ಕಮಲದಾನಿ ಗುರುರಾಯ : ಪಾಶ್ಚಿಮಾತ್ಯ ಕಲಾವಿದರು. ಪುಟ-೧೯

ಅಧ್ಯಾಯ : ನಾಲ್ಕು

ಪ್ರಮುಖ ಬಾರೋಕ್ ಕಲಾವಿದರ ಜೀವನ ಮತ್ತು ಕಲಾಕೃತಿಗಳ ಪರಿಚಯ

೧. ಬಾರೋಕ್ ವಾಸ್ತು ಹಾಗೂ ಶಿಲ್ಪಕಾರರು



i ಮೈಕೆಲ್ ಎಂಜಿಲೋ

೧೪೭೫–೧೫೬೪

ಯುರೋಪಿನ ಸಾಂಸ್ಕೃತಿಕ ಪುನರುಜ್ಜೀವನ ಯುಗದ ಪ್ರಧಾನ ಪ್ರತಿನಿಧಿಯೆಂದು ಶಿಲ್ಪಿ ಮೈಕೆಲೆಂಜಿಲೋನನ್ನು ಕರೆಯುವದು ರೂಢಿ. ನಾಲ್ಕು ಶತಮಾನಗಳಿಗೂ ಹೆಚ್ಚು ಕಾಲ ಕಲಾವಿಶ್ವದಲ್ಲಿ ಅವಿಚಲಿತವಾಗಿರುವ ಆತನ ಕೀರ್ತಿ ಜಗತ್ತಿನ ಇತಿಹಾಸದಲ್ಲಿಯೇ ಅತ್ಯುದ್ದಂಡ ಶಿಲ್ಪಕಾರನೆಂಬ[೧] ಸ್ಥಾನವನ್ನು ಆತನಿಗೆ ತಂದುಕೊಟ್ಟಿದೆ. ಇಟಲಿಯ ಬಾರೋಕ್ ಸಂಪ್ರದಾಯದ ಶಿಲ್ಪ ರಚನೆಯ ರೂವಾರಿಯಾಗಿ ಮೈಕೆಲ್ ಎಂಜಿಲೋ ಪ್ರಥಮವಾಗಿ ಕಾರ್ಯನಿರ್ವಹಿಸಿದ್ದಾನೆ[೨] ಅವನೊಬ್ಬ ವಾಸ್ತುಕಾರ, ಚಿತ್ರಕಾರ, ಕವಿ ಇವನು ಕೈಯೋಡಿಸದಲ್ಲೆಲ್ಲ ಕಲೆ ಚೆಲ್ಲವರೆದಿದೆ.

ಎಲ್ಲ ಕಾಲಕ್ಕೂ ಉಳಿಯುವ ವಿಖ್ಯಾತಿ ಮೈಕೆಲ್ ಎಂಜಿಲೋವಿನದು, ಆತನು ಆಜನ್ಮ ಪ್ರತಿಭಾಶಾಲಿ. ತನ್ನ ಕಾಲದ ದಾರ್ಶನಿಕ ಸಂಪ್ರದಾಯಗಳನ್ನು ಚೆನ್ನಾಗಿ ತಿಳಿದುಕೊಂಡ ಆತ ತನ್ನ ಕಲಾಸೃಷ್ಟಿಗಳಲ್ಲಿ ಯಾವೊಂದು ಸಂಪ್ರದಾಯಕ್ಕೂ ಕಟ್ಟು ಬಿದ್ದವನಲ್ಲ. ಅವನು ಆರಿಸಿಕೊಂಡ ಸೃಷ್ಟಿಕಾರಿ ಮಾಧ್ಯಮಗಳಲ್ಲಿ ಶಿಲ್ಪಕ್ಕೆ ಮೊದಲನೆಯ ಸ್ಥಾನ ದೊರೆಯುವದಾದರೆ ಚಿತ್ರಕಲೆ ಮತ್ತು ವಾಸ್ತುಕಲೆಗಳಿಗೆ ಅನಂತರದ ಸ್ಥಾನ ದೊರೆಯುತ್ತದೆ[೩] ಎಂಬ ಮಾತಿನಲ್ಲಿ ಅತಿಶಯೋಕ್ತಿ ಇಲ್ಲ.

ಜನನ : ಇಂದು ನನಗೆ ಗಂಡುಮಗು ಹುಟ್ಟಿತು. ಅದಕ್ಕೆ ಮೈಕೆಲ್ ಎಂಜಿಲೋ ಎಂದು ನಾಮಕರಣ ಮಾಡಿದೆ. ಎಂದು ಮೈಕೆಲ್‌ನ ತಂದೆ ದಿನಚರಿಯೊಂದರಲ್ಲಿ ಬರೆದಿದ್ದಾನೆ. ಈ ಚಿತ್ರಕಾರ ಹುಟ್ಟಿದ್ದು ೧೪೭೫ನೆಯ ಮಾರ್ಚ್ ೫ನೆಯ ದಿನಾಂಕದಂದು. ಇವನ ತಂದೆ ಲುಡೋಂಕೋ ಚಾನಾರವಿ ಇಟಲಿಯ ಆರಾಘೋದ ಬಳಿ ಇರುವ ಕಾಪ್ರೆಸ್ ಎಂಬ ಸಣ್ಣ

---

೧. ಎಸ್.ಆರ್. ರಾಮುಸ್ವಾಮಿ : ಕಲಾವಿಶ್ವದ ಧೃವತಾರೆ ಯುಗಪುರುಷ ಮೈಕೆಲ್ ಎಂಜಿಲೋ, 'ಸುಧಾ ವಾರಪತ್ರಿಕೆ' ೨೨ ಜೂನ್ ೧೯೭೫, ಪುಟ-೩೬

೨. Encyclopedia of World Art : Vol-viii, 1963, page-505

೩. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೬೪

ಪಟ್ಟಣದ ಗವರ್ನರನಾಗಿದ್ದನಂತೆ[೪]. ಇವನ ಜನನ ಕಲ್ಲುಟಿಕ ಕುಟುಂಬದ ಪರಿಸರದಲ್ಲಿ. ಆದುದರಿಂದ ಬಾಲ್ಯದಲ್ಲಿಯೇ ಉಳಿಸುತ್ತಿಗೆಗಳ ನಂಟುತನವಿರುವುದರಿಂದ ಸಹಜವಾಗಿಯೇ ಶಿಲ್ಪಕೆತ್ತನೆಯ ಕಡೆಗೆ ಆಸಕ್ತಿ ಬೆಳೆಯಿತು.

ಕಲಾಧ್ಯಯನ : ಚಿಕ್ಕವನಿದ್ದಾಗಲೇ ಇವನ ಕಲಾಭಿರುಚಿಯ ಪರಿಚಯ ಎಲ್ಲರಿಗೂ ಆಗಿತ್ತು. ಮೈಕೆಲ್ ಎಂಜಿಲೋನ ತಂದೆಯು ಗಿರ್ಲಾಂಡೋ ಎಂಬಾತನ ಕಲಾಶಾಲೆಲ್ಲಿ ಚಿತ್ರಕಲೆಯ ಅಭ್ಯಾಸಕ್ಕೆ ಮೈಕೆಲ್‌ನನ್ನು ಸೇರಿಸಿದನಂತೆ ಆದರೆ ಮೈಕೆಲ್ ಎಂಜಿಲೋಗೆ ಚಿತ್ರಕಲೆಗಿಂತ ವಿಶೇಷವಾದ ಆಸಕ್ತಿ ಶಿಲ್ಪಕಲೆಯ ಕಡೆಗೆ ಇದ್ದುದರಿಂದ ಚಿತ್ರಕಲಾ ಶಾಲೆಯನ್ನು ಬಿಟ್ಟು ಶಿಲ್ಪಕಲೆಯ ಶಾಸ್ತ್ರೀಯ ಅಧ್ಯಯನಕ್ಕಾಗಿ ಫ್ಲಾರೆನ್ಸಿನ ಶ್ರೀಮಂತ 'ಲೋರೆಂಜೋದ ಮೆಡಿಸಿಯ' ಶಿಲ್ಪಾಗಾರವೊಂದರಲ್ಲಿ 'ಬರ್ಟಾಲ್ಡೋ' ಎಂಬ ಪ್ರಖ್ಯಾತ ಶಿಲ್ಪಿಯ ಕೈಯಲ್ಲಿ ಶಿಲ್ಪಗಳ ಕೆತ್ತನೆಯ ಕಾರ್ಯದಲ್ಲಿ ತರಬೇತಿಯನ್ನು ಹೊಂದಿದ. ಇವನಿಗೆ ಲೋರೆಂಜೋನ ಆಶ್ರಯವಲ್ಲದೆ "ಬರ್ಟಾಲ್ಡೋ"ನಂತಹ ಶಿಲ್ಪಿಯ ಮಾರ್ಗದರ್ಶನವು ಸಿಕ್ಕಿತಲ್ಲದೆ ಮೇಲಾಗಿ ಪ್ಲೇಟೋ ಅಕ್ಯಾಡೆಮಿಯ ಸಾಮೀಪ್ಯವು ದೊರೆಯಿತು. ಹೀಗಾಗಿ ಇವನ ಕಲಾ ಅಧ್ಯಯನ ತುಂಬಾ ಪ್ರೋತ್ಸಾಹಕರವಾಗಿ ಬೆಳವಣಿಗೆಯಾಯಿತು.

ಮೈಕೆಲ್ ಎಂಜಿಲೋನ ಕೆಲವು ಶಿಲ್ಪಕಲಾ ಕೃತಿಗಳು:

೧. ಮೆಡೋನಾ ಆಫ್ ದಿ ಸ್ಟೇರ್ಸ್ ಕೃತಿ
೨. ಸೇಂಟಾರ್ಸ ಕೃತಿ.
೩. ಬ್ಯಾಕಸ್ ಮೂರ್ತಿ ಶಿಲ್ಪ.
೪. ಮೋಸೆಸ್ ಶಿಲ್ಪ
೫. ಡೆವಿಡ್‌ನ ಕೃತಿ.
೬. ಪಿಯೇಟಾ (ಅನುಕಂಪ)
೭. ಸ್ಮಾರಕ ಶಿಲ್ಪಗಳು.

೧. ಮೆಡೋನಾ ಆಫ್ ದಿ ಸ್ಟೇರ್ಸ್: ಈ ಕೃತಿಯು ೧೪೯೧ರಲ್ಲಿ ರಚನೆಗೊಂಡಿದೆ. ಸೋಪಾನವೊಂದರಲ್ಲಿ ಅಡಿಯಲ್ಲಿ ಶಿಶು ಯೇಸುವನ್ನು ತೆಕ್ಕೆಯಲ್ಲಿ ಹಿಡಿದುಕೊಂಡು ಕುಳಿತಿರುವ ಭಂಗಿಯಲ್ಲಿ ಮೇಡೋನಾ ಕೃತಿ ನಿರ್ಮಾಣವಾಗಿದೆ. ಪೂರ್ಣ ಗಾತ್ರದ ಈ ಶಿಲ್ಪದಲ್ಲಿ ತಾಯ್ತನದ ವಾತ್ಸಲ್ಯವನ್ನು ಗುರುತಿಸಬಹುದಾಗಿದೆ. ತನ್ನ ಎದೆಯ ಮೇಲಿರುವ ಅರಿವೆಯನ್ನು ಸರಿಸಿ ಮಗುವಿಗೆ ಹಾಲು ಕುಡಿಸುತ್ತಿರುವಂತಿದೆ, ತಾಯಿಯ ಮುಖದಲ್ಲಿ ಪ್ರಶಾಂತವಾದ ಭಾವನೆಯಿದ್ದರೆ, ಮಗು ತಾಯಿಯ ಹಾಲು ಕುಡಿಯುವುದರಲ್ಲಿಯೇ ಮಗ್ನವಾದಂತಿದೆ. ಸಹಜ ಬಂಗಿಯಲ್ಲಿ ಕುಳಿತುಕೊಂಡ ಈ ತಾಯಿಯ ಅರಿವೆಯ ನಿರಿಗೆಗಳು ತುಂಬ ಸಹಜವಾಗಿ ಕೆತ್ತನೆಗೊಂಡಿವೆ. ಮೈಕೆಲ್ ಎಂಜಿಲೋನ ಸೂಕ್ಷ್ಮವಿನ್ಯಾಸಕ್ಕೆ ಶಿಲ್ಪದ ಈ ನಿರಿಗೆಗಳು ಉತ್ತಮ ನಿದರ್ಶನವಾಗಿವೆ. ಶಿಲ್ಪದ ಹಿನ್ನೆಲೆಯೂ ಕೂಡ ಅಷ್ಟೇ ಕಲಾತ್ಮಕವಾಗಿದೆ. ಹೊರಗಿನಿಂದ

---

೪. ಕಮಲದಾನಿ ಗುರುರಾಯ : ಪಾಶ್ಚಾತ್ಯ ಕಲಾವಿದರು, ಪುಟ-೪

ವ್ಯಕ್ತಿಯೊಬ್ಬ ಒಳಗೆ ಬರುವಂತೆ ಕೆತ್ತಲಾಗಿದೆ. ಇಲ್ಲಿ ಪ್ರಮುಖ ವ್ಯಕ್ತಿಗೆ ಎಳ್ಳಷ್ಟು ಭಂಗ ಬರದಂತೆ ಹಿನ್ನೆಲೆಯನ್ನು ಪೂರಕವಾಗಿ ನಿರ್ಮಿಸಿದ್ದುದನ್ನು ಕಾಣಬಹುದು. ಒಳ್ಳೆಯ ಶಿಲ್ಪದ ಎಲ್ಲ ಅಂಶಗಳನ್ನು ಈ ಕೃತಿ ಪಡೆದು ಸಹೃದಯನನ್ನು ಆಕರ್ಷಿಸುತ್ತದೆ. ಫ್ಲಾರೆನ್ಸಿನ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಈಗ ಸಂಗ್ರಹಿಸಲಾಗಿದೆ.

೨. ಸೇಂಟಾರ್ಸ : ಕ್ರಿ.ಶ. ೧೪೯೨ರಲ್ಲಿ ಈ ಕೃತಿ ನಿರ್ಮಾಣಗೊಂಡಿದೆ. ಮೈಕೆಲ್ ಎಂಜಿಲೋ ಚಿಕ್ಕವನಿದ್ದಾಗಲೇ ಶಿಲ್ಪಗಳನ್ನು ರಚಿಸುತ್ತಿದ್ದನಂತೆ. ಇವನ ಬಾಲ್ಯದ ಶಿಲ್ಪಗಳು ಕಲೆಯ ಇತಿಹಾಸದಲ್ಲಿ ಅಭೂತಪೂರ್ವವೆನಿಸಿದವುಗಳಾಗಿವೆ, ಸೇಂಟಾರ್ಸ ಈ ಕೃತಿ ಸೇಂಟಾರ್ಸ ತಂಡದ ಆಕ್ರಮಣದಿಂದ ಕನ್ಯೆಯೊಬ್ಬಳನ್ನು ಪಾರುಮಾಡುವ ಪ್ರಸಂಗದ ಶಿಲ್ಪವಾಗಿದೆ. ಮೈಕೆಲ್ ಎಂಜಿಲೋ ಅತ್ಯುತ್ತಮ ಶಿಲ್ಪಗಾರನಾಗಿರುವ ಲಕ್ಷಣವನ್ನು ಸೇಂಟಾರ್ಸ ಕೃತಿಯ ಮೂಲಕ ತೋರಿಸಿಕೊಟ್ಟಿದ್ದಾನೆ. ಶಾರೀರಕ ವಿನ್ಯಾಸ ನಯನಾಜೂಕುತನಗಳು ಶಿಲ್ಪಕ್ಕೆ ಹಿನ್ನೆಲೆಯನ್ನು ರೂಪಿಸಿರುವ ರೀತಿ, ಮುಂತಾದವುಗಳು ಪ್ರಮಾಣಬದ್ಧವಾಗಿ ಮೂಡಿ ಬಂದಿವೆ.

೩. ಬ್ಯಾಕಸ್ ಮೂರ್ತಿಶಿಲ್ಪ (Bucchus) : ಕ್ರಿ.ಶ. ೧೪೯೬ರಿಂದ ೧೫೦೧ರ ಅವಧಿಯಲ್ಲಿ ನಿರ್ಮಾಣವಾದ ಕಲಾಕೃತಿಗಳಲ್ಲಿ ಬ್ಯಾಕಸ್ ಶಿಲ್ಪವು ಒಂದು. ಇದು ಸುಮಾರು ೮೦ ಅಡಿ ಎತ್ತರವಿದೆ. ಗ್ರೀಕ್ ಕಥಾನಕದ ಪೌರಾಣಿಕ ಹಿನ್ನೆಲೆಯ ಶಿಲ್ಪವಿದಾಗಿದೆ. ಪೂರ್ಣಗಾತ್ರದ ನಗ್ನರೂಪದ ಈ ಶಿಲ್ಪವು ಜಿಕೋಫ್‌ಗಲ್ ಎಂಬಾತನ ನೆನಪಿಗಾಗಿ ಮಾಡಿಸಿದುದಾಗಿದೆ. ಸಂಗಮವರಿ ಕಲ್ಲಿನಲ್ಲಿ ನುಣುಪಾಗಿ ತುಂಬ ಸುಂದರವಾಗಿ ಕೃತಿ ಸೃಷ್ಟಿಗೊಂಡಿದೆ. ಕೈಯಲ್ಲಿ ಪಾತ್ರೆಯನ್ನು ಹಿಡಿದುಕೊಂಡಿರುವ ಗ್ರೀಕರ ಪಾನಾಧಿದೇವತೆ ಸಹೃದಯನನ್ನು ಪ್ರಥಮ ನೋಟದಲ್ಲಿಯೇ ಆಕರ್ಷಿಸುತ್ತದೆ. ಕೃತಿ ರೂಪ ಲಾವಣ್ಯದ ದೃಷ್ಟಿಯಿಂದಲೂ ಅಷ್ಟೇ ಶ್ರೀಮಂತವಾಗಿ ಕಂಗೊಳಿಸುತ್ತದೆ. ಈಗ ಈ ಕೃತಿಯು ಪ್ಲೋರೆನ್ ಪಟ್ಟಣದ ರಾಷ್ಟ್ರೀಯ ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿದೆ.

೪. ಮೊಸೆಸ್ ಶಿಲ್ಪ : ಮೈಕೆಲ್ ಎಂಜಿಲೋನ ಈ ಉದ್ದಾಮ ಶಿಲ್ಪ ರೋಮನ್‌ದ ಸೈಂಟ್ ಪೀಟರ್ಸ್ ಕೆಥಡ್ರದಲ್ಲಿ ಇರುವ ಆಷೀನ ವಿಗ್ರಹ. ಎಂಟಡಿಗಿಂತ ದೊಡ್ಡದು ಅದರಲ್ಲಿ ಒಂದು ಪೀಠದ ಮೇಲೆ ಮೋಸೆಸ್ ಮುಖ ತಿರುವಿ ಕುಳಿತಿದ್ದಾನೆ. ಅವನ ತುಂಬು ದೇಹ ನಾಬಿಯ ತನಕ ಹರಿಯುವ ದಾಡಿ ಮೀಸೆಗಳು ಗಂಭೀರ ಮುಖಭಾವ ಇವೆಲ್ಲವೂ ತನ್ನ ಮುಪ್ಪನ್ನು ದಮನಿಸಿ ಕುಳಿತ ಒಬ್ಬ ವ್ಯಕ್ತಿಯ ಕಲ್ಪನೆಯನ್ನು ಕೊಡುತ್ತದೆ.[೫] ಈ ಶಿಲ್ಪದಲ್ಲಿ ಮೊಸೆಸ್‌ನ ಅಪಾರ ಬುದ್ಧಿವಂತಿಕೆ ಕೋಪದ ಭಾವನೆ, ಗಂಭೀರವಾದ ತೀಕ್ಷ್ಣನೋಟ, ಸಹೃದಯನನ್ನು ಕ್ಷಣದಲ್ಲಿಯೇ ತನ್ನಡೆಗೆ ಆಕರ್ಷಣೆ ಗೈಯುವ ಮೋಹಕ ಶಿಲ್ಪವಿದಾಗಿದೆ. ಮೈಕೆಲ್ ಎಂಜಿಲೋನ ಅನೇಕ ಒಳ್ಳೆಯ ಶಿಲ್ಪಗಳಲ್ಲಿ ಈ ಶಿಲ್ಪಕ್ಕೂ ಒಂದು ವಿಶಿಷ್ಟ ಸ್ಥಾನವಿದೆ.

೫. ಡೆವಿಡ್ ಶಿಲ್ಪ : ಹದಿನೈದುನೂರಾ ಒಂದರಲ್ಲಿ ಬೆಲ್ಜಿಯಮ್‌ನ ಇಬ್ಬರು ವರ್ತಕರಿಗಾಗಿ

---

೫. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ, ಪುಟ-೨೮೧

ರಚಿಸಿದ ನಗ್ನಶಿಲ್ಪವಿದಾಗಿದೆ. ಈ ಶಿಲ್ಪದಲ್ಲಿ ಮೈಕೆಲ್ ಎಂಜಿಲೋ, ಆತನ ವೈಯಕ್ತಿಕ ದರ್ಶನ ಹಸ್ತಕೌಶಲ್ಯ, ರಸದೃಷ್ಟಿ ಭಾವಪ್ರತಿಪಾದನ, ನೈಪುಣ್ಯ ಕಲಾಸೃಷ್ಟಿ, ತಾಂತ್ರಿಕ ಪರಣತಿಗಳೆಲ್ಲ ಏಕೀಭವಿಸಿ ಮೈತಳೆದಿವೆ ಪ್ರಸಿದ್ಧ ಡೆವಿಡ್ ಕೃತಿಯಲ್ಲಿ. (ಹದಿನೇಳು ಅಡಿ ಎತ್ತರ) ಗುಣದಲ್ಲಿಯೂ ಇದಕ್ಕೆ ಸಮನಾದ ಕಲಾಶಿಲ್ಪಗಳು ವಿರಳವೆಂದೇ ಹೇಳಬೇಕು. ಫಿಲಿಸ್ಟೈನ್ ದೈತ್ಯ ಗೋಲಿಯತನನ್ನು ಸಂಹರಿಸಿದ ಡೆವಿಡ್‌ನು ನಿಂತಿರುವ ಧಿರೋದ್ದಾತ್ತ ಸಹಜಭಂಗಿ, ಮುಖದಲ್ಲಿ ಹೊಮ್ಮುವ ಧೋರಣೆ ಆತ್ಮವಿಶ್ವಾಸಗಳು ಅಂತರಂಗದ ತುಮುಲದ ಅಭಿವ್ಯಂಜನೆಯೂ ಶಿಲ್ಪಗಳಿಗಿರಲಿ ಕವಿಗಳಿಗೂ ವರ್ಣನೆಗೆ ನಿಲುಕದಷ್ಟು ಪರಿಸ್ಫುಟ[೬]ದಿಂದ ಕೂಡಿದ ಡೆವಿಡ್‌ನ ಶಿಲ್ಪ, ಜಗತ್‌ಪ್ರಸಿದ್ಧಿಯನ್ನು ಪಡೆದಿದೆ. ಈಗ ಬೆಲ್ಜಿಯಮ್‌ನ ಭ್ರೂಜ್ ಎಂಬಲ್ಲಿ ಸಂಗ್ರಹಿಸಲಾಗಿದೆ. ಇದರ ಎತ್ತರ ೫೧೪ ಸೆಂ. ಮೀಟರ್ ಇದೆ.

೬. ಪಿಯೇಟಾ (ಅನುಕಂಪ) ಶಿಲ್ಪ : ಮೈಕೆಲ್ ಎಂಜಿಲೋನ ಶಿಲ್ಪಗಳಲ್ಲಿ ಹೆಚ್ಚು ಚರ್ಚೆ ಹಾಗೂ ವಿಮರ್ಶೆಗೊಳಗಾದ ಕೃತಿ ಇದು. ಮೈಕಲ್ ಎಂಜಿಲೋನನ್ನು ಕಲಾ ಇತಿಹಾಸದ ವ್ಯಕ್ತಿಯನ್ನಾಗಿ ದಾಖಲು ಮಾಡಿದ ಕಲಾಕೃತಿಗಳಲ್ಲಿ ಈ ಶಿಲ್ಪಕ್ಕೊಂದು ವಿಶಿಷ್ಟ ಸ್ಥಾನವಿದೆ. ತನ್ನ ಪರಿಸರದಲ್ಲಿ ಅತ್ಯಂತ ಪರಿಚಿತವಿರುವ ಸನ್ನಿವೇಶದ ವಸ್ತುವೊಂದನ್ನು ಆಯ್ಕೆ ಮಾಡಿಕೊಂಡು ಸ್ಪರ್ಧಾತ್ಮಕವಾಗಿ ಕೆತ್ತನೆಗೈದ ಕೃತಿ ಇದಾಗಿದೆ. ಈಗಾಗಲೇ ಅನೇಕ ಜನ ಕಲಾವಿದರು ಈ ವಿಷಯದ ಶಿಲ್ಪ ರಚಿಸಿ ಪ್ರಸಿದ್ಧಿ ಗಳಿಸಿದ್ದರೂ, ಮತ್ತೆ ಪ್ರತಿಸ್ಪರ್ಧಿಯಾಗಿ ಬಂದ ಈ ಕೃತಿಯ ಬಗೆಗೆ ಸಹಜವಾದ ಕುತೂಹಲ ಕಲಾವಿದರಲ್ಲಿ ಬೆಳೆದಿರಲಿಕ್ಕೆ ಸಾಕು. ಉಳಿದ ಕಲಾವಿದರ ಕೃತಿಗಳಿಗಿಂತ ತೀರಾ ಭಿನ್ನವಾದ ಕಲಾತ್ಮಕತೆಯಿಂದ ಈ ಶಿಲ್ಪ ದಾಖಲೆಯ ಶಿಲ್ಪವಾಗಿ ಕಂಗೊಳಿಸಿದೆ.

ಅಮೃತಶಿಲೆಯ ಈ ಬೃಹತ್ ಶಿಲ್ಪ 'ಕರುಣೆ' (ಅನುಕಂಪ) ಎಂಬುದು ರೋಮ ನಗರದ ಸೈಂಟ್ ಪೀಟರ್ಸ್ ಕೆಥೆಡ್ರದಲ್ಲಿದೆ. ಮೇರಿ ತನ್ನ ಮಗನನ್ನು ತೊಡೆಯ ಮೇಲಿರಿಸಿಕೊಂಡ ಈ ಅನುಪಮ ಶಿಲ್ಪದಲ್ಲಿ ಆಕೆ ತನ್ನ ಪ್ರಾಯಕ್ಕಿಂತ ಚಿಕ್ಕ ವನಿತೆಯಾಗಿ ಕಾಣುತ್ತಾಳೆ. ಅವಳ ತೊಡೆಯ ಮೇಲೆ ವಿರಮಿಸಿರುವ ಯೇಸು ಮೃತನಾಗಿದ್ದರೂ ಅವನ ದೇಹ ಸತ್ತಿಲ್ಲ ಅದರಲ್ಲಿ ಇನ್ನೂ ರಕ್ತ ಸಂಚಾರವಿದೆ. ಆತ ತಾಯಿ ತೊಡೆಯ ಮೇಲೆ ನಿದ್ರಿಸುತ್ತಿದ್ದಾನೆ ಅನಿಸುವಂತಿದೆ. ಇಲ್ಲಿ ಕನ್ಯೆ ಮೇರಿಯ ಚಿರಪಾವಿತ್ರ್ಯತೆಯನ್ನು ಶಿಲ್ಪಿ ಅವಳ ಭಂಗಿಯಲ್ಲಿಯೂ ಮುಖದಲ್ಲಿಯೂ ತೋರಿಸಿದ್ದಲ್ಲದೆ ಅವಳು ಮಗನ ಸಲುವಾಗಿ ಪಡುತ್ತಿರುವ ಯಾತನೆಯನ್ನು ಚಾಚಿದ ಒಂದು ಹಸ್ತದಲ್ಲಿ ಬಿಂಬಿಸಿದ್ದಾನೆ.[೭] ಇದೊಂದು ಜಗತ್‌ಪ್ರಸಿದ್ಧ ಕಲಾಕೃತಿಯಾಗಿ ಕಂಗೊಳಿಸುತ್ತಿದೆ ಯಾದರೂ ಅನಾಟಮಿಯ (ಶರೀರ ರಚನಾಶಾಸ್ತ್ರದ ಜ್ಞಾನವಿರುವ ಯಾರಿಗಾದರೂ ಇದು ತಾಯಿ ಮಗನ ಶಿಲ್ಪವೆಂದು ಅನಿಸುವುದಿಲ್ಲ. ಇಲ್ಲಿ ತಾಯಿಯ ಹಾಗೂ ಮಗನ ವಯಸ್ಸಿನ ಕಲ್ಪನೆಯನ್ನು ಮಾಡಿಕೊಂಡರೆ ಮಗನಕ್ಕಿಂತ ತಾಯಿಯೇ ಚಿಕ್ಕವಳಂತೆ ಕಾಣಿಸುತ್ತಾಳೆ. ಈ

---

೬. ಎಸ್.ಆರ್. ರಾಮಸ್ವಾಮಿ : ಕಲಾವಿಶ್ವದ ಧೃವತಾರೆ ಯುಗ ಪುರುಷ ಮೈಕೆಲ್ ಎಂಜಿಲೋ 'ಸುಧಾ ವಾರ ಪತ್ರಿಕೆ' ೨೨ ಜೂನ್ ೧೯೭೫, ಪುಟ -೩೬

೭ ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೧

ಅಸಮತೋಲನದಿಂದಾಗಿ ಪಿಯೇಟಾ ಶಿಲ್ಪ ಕಳಾಹೀನವಾಗುತ್ತದೆ. ದೊಡ್ಡ ಕಲಾವಿದನೆನ್ನುವ ಅಗ್ಗಳಿಕೆಯಲ್ಲಿ ಕಲಾವಿಮರ್ಶಕರು ಈ ಕೊರತೆಯನ್ನು ತೋಲಿಸಿಕೊಂಡು ಹೋಗಿರಲಿಕ್ಕೆ ಸಾಧ್ಯತೆಗಳಿವೆ. ಪಿಯೇಟಾ ಶಿಲ್ಪದ ಬಗೆಗಿನ ಹಿಂದಿನ ಸಾಹಿತ್ಯವನ್ನು ತಿಳಿದಾಗ ಮೇಲಾಗಿ ಶಿಲ್ಪದ ನಯ ನಾಜೂಕತೆಯಿಂದ ಈ ಅಸಮತೋಲನದ ಪರಿಣಾಮ ಹಿಂದೆ ಸರಿದು ಒಟ್ಟು ಕಲಾತ್ಮಕತೆಯ ವಿನ್ಯಾಸದಿಂದ ಆಕರ್ಷಣೀಯವೆನಿಸುತ್ತದೆ. ವಿಮರ್ಶಕರು ಮೈಕೆಲ್ ಎಂಜಿಲೋನ ಕಲಾತ್ಮಕತೆಯನ್ನು ಅಭೂತಪೂರ್ವ ರಮ್ಯತೆಯನ್ನು, ಶಿಲ್ಪದ ಕೆತ್ತುವಿಕೆಯಲ್ಲಿ ಅಸಾಮಾನ್ಯವಾದ ನೈಪುಣ್ಯತೆಯನ್ನು ಸ್ಪಷ್ಟವಾಗಿ ಇಲ್ಲಿ ಗುರುತಿಸುತ್ತಾರೆ. ಒಟ್ಟಾರೆ ಮಾತೃವಾತ್ಸಲ್ಯದ ದುಃಖ ಅನುಕಂಪ ಇಲ್ಲಿ ಧ್ವನಿತವಾಗುತ್ತದೆ ಎಂಬುದರಲ್ಲಿ ಯಾವ ಸಂದೇಹವು ಇಲ್ಲ. "He was working on his Pieta within a few days of his death in this 90th year on 18 February 1564"[೮]. ಮೈಕೆಲ್ ಎಂಜಿಲೋನ ಪ್ರಖ್ಯಾತ ಶಿಲ್ಪಗಳಲ್ಲಿ ಪಿಯೇಟಾ ಕೊನೆಯ ಶಿಲ್ಪವಾಗಿದೆ.

೭. ಸ್ಮಾರಕ ಶಿಲ್ಪಿಗಳು : ಮೈಕೆಲ್ ಎಂಜಿಲೋನ ಪ್ರಖ್ಯಾತ ಅನೇಕ ಉತ್ತಮ ಶಿಲ್ಪಗಳಲ್ಲಿ ಸ್ಮಾರಕ ಶಿಲ್ಪಗಳಿಗೂ ಒಂದು ವಿಶಿಷ್ಟ ಸ್ಥಾನವಿದೆ. ಫ್ಲಾರೆನ್ಸ್‌ನ ಲೊರೆಂಜೋ ಮತ್ತು ಗ್ವಿಲಿಯಾನೋ ಶ್ರೀಮಂತರ ಸ್ಮಾರಕದಲ್ಲಿಯ ಲೊರೆನ್ಜೋದ ಮೆಡೀಸಿ ಅರಸು ಕುಳಿತುಕೊಂಡಿರುವ ಶಿಲ್ಪ, ಅಡಿಯಾಳುಗಳ ಮೋಸಸ್ ಶಿಲ್ಪಗಳು, ತಮ್ಮದೇ ಆದ ವೈವಿಧ್ಯತೆಗಳಿಂದ ತುಂಬ ಪ್ರಖ್ಯಾತಿಯನ್ನು ಪಡೆದಿವೆ.

"The development of the Baroque was heralded by (Florence) the statue of moses (Rome spietro in vicoli) and the done of Peter's created a new vision of plastic space articalated on set in motion by alternating volumes a voids Parallel to the conter Reformation the new style manumentally affirmed the renovated life and authority of the chruch.[೯] ಶಿಲ್ಪ ಕಲಾಕೃತಿಗಳು ಕಂಗೊಳಿಸವೆ. ಪೋಪ ಜೂಲಿಯಸ್‌ನ ಸ್ಮಾರಕವನ್ನು ನಿರ್ಮಿಸಿದ್ದಾನೆ. ಅಲ್ಲಿ ಮೆಡಿ ಚಾಪೆಲಿನಲ್ಲಿ ಭೂಮಿ ಸ್ವರ್ಗಗಳ ಪ್ರತೀಕವಾಗಿ ಹಗಲು ರಾತ್ರಿಗಳ ಸಂಕೇತದ ಕೃತಿಗಳು ಸ್ಮರಣೀಯವಾಗಿ ನೋಡುಗರನ್ನು ಆಕರ್ಷಿಸುತ್ತವೆ. ಈ ಸ್ಮಾರಕ ಶಿಲ್ಪಗಳಲ್ಲಿ ಕಂಡುಬರುವ ಪ್ರಮುಖ ವೈಶಿಷ್ಟ್ಯವೆಂದರೆ ಇಲ್ಲಿ ಸೃಷ್ಟಿಯಾದ ಶಿಲ್ಪಗಳು ಹೆಚ್ಚಾಗಿ ನಗ್ನ ರೂಪದವುಗಳು. ವಿವಿಧ ಬಂಗಿಗಳಲ್ಲಿ ನಿರ್ಮಾಣಗೊಂಡಿವೆ. ಶರೀರದ ಅಂಗಾಂಗಗಳು ಬಲಿಷ್ಠವಾದ ಸ್ನಾಯುಗಳು ಮತ್ತು ಮಾಂಸಖಂಡಗಳಿಂದ ಶಿಲ್ಪಕಲಾ ಕೃತಿಗಳು ತುಂಬ ಸೊಗಸಾಗಿ ಕಾಣಿಸುತ್ತವೆ. ಮಾನವ ಗಾತ್ರದ ಈ ಶಿಲ್ಪಗಳಲ್ಲಿ ವ್ಯಕ್ತಿಗಳ ವಿವಿಧ ಭಾವನೆಗಳು ಪ್ರಕಟವಾಗುತ್ತವೆ. ಈ ಶಿಲ್ಪಗಳನ್ನು ಕಲಾತ್ಮಕವಾಗಿ ಸಂಯೋಜನಗೊಳಿಸಿರುವ ರೀತಿ ಕೂಡ ಮೆಚ್ಚುವಂತಹದಾಗಿದೆ.

---

೮. Peter and Linda Murray : A Dictionary of Art and Artists. Page - 210

೯. Encyclopedia of World Art : Vol - viii 1963, Page - 505

ii. ಮೈಕಲ್ ಎಂಜಿಲೋನ ಚಿತ್ರಗಳು :

೧೫೦೮ರಲ್ಲಿ ಪೋಪ ಗುರುವಿನಿಂದ ಉತ್ತೇಜಿತನಾಗಿ ಆದೇಶ ಪಡೆದ ಈತ ವ್ಯಾಟಿಕನ್ ಖಾಸಗಿ ನಿವಾಸದ (ಸಿಸ್ಟೈನ್ ಚಾಪಲ್) ಚಾವಣಿಯ ಒಳಮೈಯಲ್ಲಿ ಸೃಷ್ಟಿಯ ಬಗ್ಗೆ ಹಲವಾರು ವಿಷಯದ ವರ್ಣಚಿತ್ರಗಳನ್ನು ರಚಿಸಿದ್ದಾನೆ. ಈ ಸಿಸ್ಟೈನ್ ಚಾಪಲ್‌ನ ಇಗರ್ಜಿಯನ್ನು ಹಲವಾರು ರೀತಿಯಲ್ಲಿ ಅಂಕಣಗಳಾಗಿ ವಿಂಗಡಿಸಿಕೊಂಡು ಕ್ರೈಸ್ತ ಧರ್ಮದ ಹಿನ್ನೆಲೆಯಲ್ಲಿ ವೈವಿಧ್ಯಪೂರ್ಣವಾದ ದೃಶ್ಯಗಳನ್ನು ಕಲಾತ್ಮಕವಾಗಿ ಈ ರಚನೆ ಗೈದಿದ್ದಾನೆ. ಇಲ್ಲಿಯ ಚಿತ್ರಗಳು ಶಿಲ್ಪಗಳೇನೋ, ಶಿಲ್ಪಗಳು ಚಿತ್ರಗಳೇನೋ ಎಂಬ ಭ್ರಮೆ ನೋಡುಗನಲ್ಲಿ ಉಂಟಾಗುತ್ತವೆ. ಉದಾಹರಣೆಗಾಗಿ ಆಡಮ್‌ನ ಸೃಷ್ಟಿಯ ಕಥಾಭಾಗವೆನ್ನಿ, ದೇವರು ಆಡಮ್‌ನನ್ನು ಸೃಷ್ಟಿಸಿದ್ದಾನೆ. ಬಲಿಷ್ಠ ದೇಹಿಯಾದ ಮುಗ್ಧ ಮನಸ್ಸಿನ ಆಡಮ್‌ನ ಬೆರಳನ್ನು ಗಗನ ಸಂಚಾರಿಯಾದ ಆ ದೇವರು ತನ್ನೊಂದು ಬೆರಳಿನಿಂದ ಸ್ಪರ್ಶಿಸುತ್ತಿದ್ದಾನೆ. ಆ ದೇವರು ಇನ್ನೊಂದು ತೋಳಿನ ಆಸರೆಯಲ್ಲಿ ನಾಳೆ ಅವನ ಸಲುವಾಗಿ ಹುಟ್ಟಬೇಕಾದ 'ಇವ್' ಕಾಣಿಸುತ್ತಾಳೆ. ಆಡಮ್‌ನ ದೃಷ್ಟಿ ದೇವರ ಕಡೆಗಿರುವಂತೆಯೇ ತನ್ನ ಭಾವಿ ಪ್ರೇಯಸಿಯ ಕಡೆಗೂ ಹರಿದಂತೆ ಚಿತ್ರಿತವಾಗಿದೆ. ಇದೇ ರೀತಿ ತನ್ನ ಈಡನ್ ಉದ್ಯಾನದಿಂದ ಪತಿತರಾದ ಆಡಮ್ ಮತ್ತು ಇವ್‌ರನ್ನು ಓಡಿಸುವ ಚಿತ್ರವು ಇದೆ. ಈ ಚಿತ್ರಗಳಲ್ಲೆಲ್ಲಾ ಅಂಗವಿನ್ಯಾಸಗಳನ್ನು ಮಾನವ ಕಾರ್ಯಗಳನ್ನು ಶಕ್ತಿಯುತವಾಗಿ ಸುಂದರವಾಗಿ ಚಿತ್ರಿಸಿದ್ದು ಅವನ ಬಗೆಯನ್ನು ಮುಂದೆ ಯಾರಲ್ಲಿಯೂ ನಾವು ಕಾಣುವುದಿಲ್ಲ.[೧೦] ಅಲ್ಲದೆ ಜೂಲಿಯಸ್‌ನ ನಂತರ ಬಂದ ಪೀಠಾಧಿಕಾರಿ ಎರಡನೆಯ ಪೋಪನ ಒತ್ತಾಯಕ್ಕಾಗಿ ಬಂದು ೧೫೩೪ರಲ್ಲಿ 'ಲಾಸ್ಟ ಜಡ್ಜಮೆಂಟ' ಎಂಬ ಮಾನವತೆಯ ಕೃತಕೃತ್ಯಗಳನ್ನು ಕುರಿತಾಗಿ ಚಿತ್ರಿತಗೊಂಡಿರುವ ಕ್ರೈಸ್ತನ ಅಂತಿಮ ತೀರ್ಪು ಜಗತ್ ವಿಖ್ಯಾತಿಯನ್ನು ಪಡೆದ ಶ್ರೇಷ್ಠ ಚಿತ್ರವಾಗಿದೆ. ಈ 'ಅಂತಿಮ ತೀರ್ಪು' ಚಿತ್ರ ಸಿಸ್ಟೈನ್ ಚಾಪಲ್‌ನ ಕಡೆಯ ಗೋಡೆಯಲ್ಲಿ ರಚಿತಗೊಂಡಿದೆಯಂತೆ. ಇವನು ತನ್ನ ಇಳಿಯ ವಯಸ್ಸಿನಲ್ಲಿ ರಚಿಸಿದ ಚಿತ್ರಗಳು ಸಂತ ಪೀಟರನ ಉತ್ಕ್ರಮಣ, ಸಂತ ಪಾಲನ ಮನ ಪರಿವರ್ತನ ಹೀಗೆ ಹಲವಾರು ಚಿತ್ರಗಳನ್ನು ಅಲ್ಲದೆ ರೋಮಿನ ಸೇಂಟ್ ಪೀಟರ ಬೆಸಿಲಿಕಾದ ವಾಸ್ತುವಿನ್ಯಾಸವನ್ನು ಸೃಷ್ಟಿಗೈದಿದ್ದಾನೆ. "ಕ್ರೈಸ್ತ ಧರ್ಮಗಳಿಗನುಸಾರವಾಗಿ ಹಗಲು ರಾತ್ರಿಗಳು, ಸೂರ್ಯ ಚಂದ್ರ, ನಕ್ಷತ್ರಗಳು, ನೀರು, ಮಾನವನ ಪ್ರಳಯ, ಕ್ರೈಸ್ತನ ಆಗಮನದ ಮುನ್ಸೂಚನೆ ಮುಂತಾದ ವಿಸ್ತಾರವಾದ ಸೃಷ್ಟಿ ಪುರಾಣವನ್ನು ವರ್ಣಗಳಲ್ಲಿ ಚಿತ್ರಿಸಿದ ಮೈಕೆಲ್ ಎಂಜಿಲೋ ಜಗತ್ ವಿಖ್ಯಾತವಾಗಿರುವ ಈ ಚಿತ್ರ ಸಮೂಹವನ್ನು ರೂಪಿಸಲು ನಾಲ್ಕು ವರ್ಷ ಹಿಡಿಯಿತಂತೆ ಮೈಕೆಲ್ ಎಂಜಿಲೋನ ಅಭೂತಪೂರ್ವ ಕಲಾಸಿದ್ಧಿಯಾಗಿರುವಂತೆ ಸಿಸ್ಟೈನ್ ಚಾಪಲ್ ಚಿತ್ರಸಮೂಹ ಆತನ ಆಧ್ಯಾತ್ಮಿಕ ಪರಿಪಕ್ವತೆಯು ಡಾಂಟೆನಂತಹ ಕವಿಗಳ ಹಾಗೂ ಪ್ಲೇಟೋ ಮುಂತಾದ ತಾತ್ವಿಕರ ವಾಙ್ಮಯವನ್ನು ಆತ ಮೈಗೂಡಿಸಿಕೊಂಡಿದುದಕ್ಕೆ ಸಾಕ್ಷಿಯಾಗಿವೆ"[೧೧] ಮೈಕೆಲ್ ಎಂಜಿಲೋನ ಚಿತ್ರಗಳಲ್ಲಿ

---

೧೦. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ, ಪುಟ-೨೮೧

೧೧. ಎಸ್. ಆರ್. ರಾಮಸ್ವಾಮಿ : ಮೈಕೆಲ್ ಎಂಜಿಲೋ 'ಸುಧಾ ವಾರಪತ್ರಿಕೆ' ೨೨ ಜೂನ್ ೧೯೭೫, ಪುಟ-೩೬.

ಅವು ಚಿತ್ರವೇ ಆಗಿರಲಿ ಶಿಲ್ಪವೇ ಆಗಿರಲಿ ಅಲ್ಲಿ ಜೀವಕಳೆಯನ್ನು ಕಾಣಬಹುದು. ತನ್ನ ಜೀವನದ ಸುಖ ದುಃಖಗಳ ಅನುಭವಗಳನ್ನು ಮೈಕೆಲ್ ಎಂಜಿಲೋ ತಾನು ರಚಿಸಿದ ವ್ಯಕ್ತಿಗಳಲ್ಲಿ ತುಂಬಿದ್ದಾನೇನೋ ಎನಿಸುವಷ್ಟು ಸಹಜ ಸುಂದರ ಭಾವ ಅವುಗಳಲ್ಲಿ ಮೂಡಿದೆ. ಭಾವ ಭಂಗಿ ಎರಡರಲ್ಲೂ ಅವು ಅದ್ವಿತೀಯ, ಜಗತ್ತಿನ ಕಲಾಪ್ರಪಂಚಕ್ಕೆ ಅವು ಅಮೂಲ್ಯ ಕಾಣಿಕೆಗಳು.[೧೨] ಮೈಕೆಲ್ ಎಂಜಿಲೋನಿಗೆ ಪರಂಪರಾಗತವಾದ ಶಾಸ್ತ್ರೀಯ ಅಧ್ಯಯನದ ಕೂಡ ಆಧುನಿಕ ಕಲೆಯ ಜ್ಞಾನವು ಇತ್ತು. ಅವನ ಕೃತಿಗಳಲ್ಲಿ (Anotomy) ಶರೀರ ರಚನಾಶಾಸ್ತ್ರದ ಸ್ಪಷ್ಟವಾದ ರೇಖಾವಿನ್ಯಾಸ ಶಾರೀರಿಕ ಭಂಗಿ ಮುಂತಾದವುಗಳನ್ನು ಕಾಣಬಹುದಾಗಿದೆ. ಮನುಷ್ಯ ಶರೀರದ ಅಂಗರಚನೆಯ ಸೂಕ್ಷ್ಮ ಪರಿಜ್ಞಾನಸಂಪಾದಿಸಲು ಮೈಕೆಲ್ ಎಂಜಿಲೋ ಶವಗಳ ವಿಚ್ಛೇದನ ಮಾಡಬೇಕಾಯಿತು. ಆದರೆ ಫ್ಲಾರೇನ್ಸಿನ ಕಾನೂನಿನಂತೆ ದೇಹ ವಿಚ್ಛೇದನ ದಂಡನಾರ್ಹವಾದ್ದರಿಂದ ಮೈಕೆಲ್ ಎಂಜಿಲೋ ನಡುರಾತ್ರಿಯಲ್ಲಿ ಕಳ್ಳತನದಲ್ಲಿ ಆಸ್ಪತ್ರೆಯ ಶವಸಂಗ್ರಹಾಲಯಕ್ಕೆ ಹೋಗಿ ಮೊಂಬತ್ತಿಯ ಮಿಣಕು ದೀಪದಲ್ಲಿ ಅಭ್ಯಾಸ ನಡೆಸಿದ. ಈ ವ್ಯಾಸಂಗದಿಂದ ಮೈಕೆಲ್ ಎಂಜಿಲೋನಿಗಾದ ಲಾಭ ಅದ್ವಿತೀಯ ಶರೀರವಿನ್ಯಾಸ ಜ್ಞಾನ.[೧೩] ಇದರ ಪರಿಣಾಮವಾಗಿ ಕೃತಿಗಳಲ್ಲಿ ಸ್ನಾಯುಗಳು ಪರಿಪುಷ್ಟವಾಗಿ ಬಂದಿವೆ. ಅವನ ನಗ್ನಚಿತ್ರಗಳು ಶರೀರದ ಪ್ರಮಾಣಕ್ಕನುಗುಣವಾಗಿ ಸದೃಢವಾದ ಅಂಗರಚನೆಗಳಿಂದ ಕೂಡಿವೆ. ಸ್ತ್ರೀ ಪುರುಷರ ಶಿಲ್ಪಗಳು ಕೂಡ ಜೀವಂತಿಕೆಯಿಂದ ಕಂಗೊಳಿಸುತ್ತವೆ.

"His thoughtful, passionate force of charector was reflected in his work, with its lovef for contorted nudes to express emotion through The divice of turning one part of the body in a different direction from another, and yet balancing the part of the body called contrapposto, in Italian this and other aspects of his grandiose production made a profounded impression on his contempareries".[೧೪] ಮೈಕೆಲ್ ಎಂಜಿಲೋನದು ತನ್ನ ಸಮಕಾಲಿನ ಕಲಾವಿದರಲ್ಲಿ ಎದ್ದು ಕಾಣುವ ಬಹುದೊಡ್ಡ ವ್ಯಕ್ತಿತ್ವವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಮೈಕೆಲ್ ಎಂಜಿಲೋ ಬದುಕಿರುವಾಗಲೇ ಅವನ ಕಲಾಸಾಧನೆಯನ್ನು ಕುರಿತು ಬರೆದ ವ್ಯಕ್ತಿ ವಸಾರಿ ಎಂಬ ಇತಿಹಾಸಕಾರ. ಮೆಕೆಲ್ ಎಂಜಿಲೋನನ್ನು ತೀರ ಸನಿಹದಿಂದ ಕಂಡು ಹೀಗೆ ಬರೆಯುತ್ತಾನೆ. "ಮೈಕೆಲ್‌ನು ಅತ್ಯಂತ ಬಡವನಂತೆ ಜೀವಿಸುತ್ತಾನೆ. ಒಂದು ತುಂಡು ಬ್ರೆಡ್ಡು, ದ್ರಾಕ್ಷಿರಸ ಇಷ್ಟನ್ನು ಮಾತ್ರ ಸೇವಿಸುತ್ತಾನೆ. ಆತನಿಗೆ ನಿದ್ರೆ ಬರುವುದಿಲ್ಲ ಆದುದರಿಂದ ರಾತ್ರಿ ಸಹ ಎದ್ದು ಕೆಲಸಮಾಡುತ್ತಾನೆ. ಆ ಸಮಯದಲ್ಲಿ ಮೇಣದ ಬತ್ತಿ ತಗಲಿಸಿದ ಕಾಗದದ

---

೧೨. ಜ್ಞಾನಗಂಗೋತ್ರಿ : ಕಲೆ ಸಾಹಿತ್ಯ ಸಂಪುಟ-೫, ಪುಟ-೪೯೮

೧೩. ಎಸ್. ಆರ್. ರಾಮಸ್ವಾಮಿ : ಮೈಕೆಲ್ ಎಂಜಿಲೋ 'ಸುಧಾ ವಾರಪತ್ರಿಕೆ' ೨೨ ಜೂನ್ ೧೯೭೫, ಪುಟ-೨೯

೧೪. Paul, J. Seachs : The pocket book of great Drawing's Page-29

ಟೊಪ್ಪಿಗೆಯೊಂದನ್ನು ತಲೆಗೆ ಇಟ್ಟುಕೊಳ್ಳುತ್ತಾನೆ. ಅದರಿಂದ ಛಾಣವನ್ನು ಹಿಡಿದು ಶಿಲ್ಪ ಕೆತ್ತಲು ಆತನಿಗೆ ಎರಡೂ ಕೈಗಳು ಬಿಡುವಾಗಿರುತ್ತವೆ"[೧೫] ಎಂಬುದಾಗಿ ವಿವರಿಸಿದ್ದಾನೆ. ಇಲ್ಲಿ ಮೈಕೆಲ್ ಎಂಜಿಲೋನ ಕಲಾಸಿದ್ಧಿಯ ಹಿಂದೆ ಅವನ ಪರಿಶ್ರಮದ ಚಿತ್ರ ಕಣ್ಮುಂದೆ ಬರುತ್ತದೆ. ಕಲೆಗಾಗಿಯೇ ಬದುಕಿದ ಕಲೆಗಾಗಿಯೇ ತನ್ನನ್ನು ಅರ್ಪಿಸಿಕೊಂಡ ಸಾಧಕನೀತ. The turbulent Sprit of Michelangelo expressed it salf in a unscasing life long production of Great Sculpture and painting, But in Spite of vast force and violent movement expressed in his gigantic forms he maintane the typical High Renaissence balance of power and control and he preserved his own quality of thought fulness"[೧೬] ಮೈಕೆಲ್ ಎಂಜಿಲೋನ ವಾಸ್ತುವಿನ್ಯಾಸವಾಗಲಿ, ಚಿತ್ರಗಳಾಗಲಿ, ಶಿಲ್ಪಗಳಾಗಲಿ, ಅವುಗಳಲ್ಲಿ ಜೀವಂತಿಕೆಯ ಲಕ್ಷಣ ಕಾಣುವುದರ ಜೊತೆಗೆ ಚಲನಶೀಲವಾದ ವೇಗದಿಂದ ಕಲಾಕೃತಿಗಳು ಭವ್ಯತೆಯಿಂದ ಕಂಗೊಳಿಸಿ ಸಹೃದಯನನ್ನು ಚಿಂತನೆಯತ್ತ ಕರೆದೊಯ್ಯುತ್ತವೆ. ಮೈಕೆಲ್ ಎಂಜಿಲೋನನ್ನು ಬಾರೋಕ್ ಕಲೆಯ ಜನಕನೆಂದು ಕರೆಯುತ್ತಾರೆ[೧೭] ಈತ ಈ ಸಂಪ್ರದಾಯದ ನಾಯಕರತ್ನವಾಗಿ ಮೆರೆದಿದ್ದಾನೆ.

ಹೀಗೆ ಯುಗ ಯುಗಗಳು ಕಳೆದಂತೆಲ್ಲ ತಲೆಮಾರುಗಳು ಸರಿದಂತೆಲ್ಲ ಅವನ ವ್ಯಕ್ತಿತ್ವದ ಬಗ್ಗೆ ಅವನ ಕಲಾಸೃಷ್ಟಿಗಳ ಕುರಿತು ರಸಿಕರ ಕಲಾವಿದರ ವಿಮರ್ಶಕರ ಸಹೃದಯರ ಕೂತೂಹಲ ಹೆಚ್ಚುತ್ತಲಿದೆಯೇ ಹೊರತು ಕುಗ್ಗುತ್ತಿಲ್ಲ. ಅವಿವಾಹಿತನಾಗಿಯೇ ಅಮರನಾದ ಮೈಕೆಲ್ ಎಂಜಿಲೋನಿಗೆ ಜಗತ್ತಿನ ಶ್ರೇಷ್ಠ ಕಲಾವಿದರಲ್ಲಿ ಒಂದು ಉನ್ನತ ಸ್ಥಾನವಿದೆ.

❑

---

೧೫. ಬಿ.ಪಿ. ಬಾಯರಿ : ಕಲೆಗಾರರ ಕಥೆಗಳು, ಪುಟ-೩೭

೧೬. Bernard Myers : 50 Great Artist, Page-37

೧೭. Erwino Christensen : The History of Western Art, Page-224




ಮೈಕೆಲ್ ಎಂಜೆಲೋನ ರಿಲೀಫ್ ಚಿತ್ರಗಳು

ಮೈಕೆಲ್ ಎಂಜೆಲೋನ ಕಲಾಕೃತಿಗಳು




ಮೋಸಸ್ ಶಿಲ್ಪ




ಸೃಷ್ಟಿಯ ಚಿತ್ರದ ಮುಖದ ವಿನ್ಯಾಸ

ಮೈಕೆಲ್ ಎಂಜಿಲೋನ ಕಲಾಕೃತಿಗಳು



ಸಿಸ್ಟೈನ್ ಚಾಪೇಲ್ ವ್ಯಾಟಿಕನ್



ii ಬರ್ನಿನಿ

೧೫೯೮–೧೬೮೦

ಪ್ರಕೃತಿಯನ್ನು ಪೂರ್ತಿಯಾಗಿ ಅನುಕರಿಸುವಿಕೆ ಉತ್ತಮ ಶಿಲ್ಪ ಸೃಷ್ಟಿಯಾಗದೆಂಬುದು ಸತ್ಯವಾದುದೇ ಆದರೆ ಪ್ರಕೃತಿಯನ್ನು ಪೂರ್ತಿ ನಿರಾಕರಿಸುವಿಕೆ ಕೂಡ ಉತ್ತಮ ಶಿಲ್ಪಸೃಷ್ಟಿಯಾಗದು. ಪ್ರಕೃತಿಯ ಅನುಕರಣಗಳ ಸಂಪೂರ್ಣ ಸಮ್ಮೇಳನವೇ ನಿಜವಾದ ಶಿಲ್ಪಸೃಷ್ಟಿ. ಕೇವಲ ಬಾಹ್ಯ ಜಗತ್ತನ್ನೇ ಸರ್ವವೆಂದು ಭಾವಿಸಿ ಅದರ ಪ್ರತಿಬಿಂಬಗಳನ್ನೇ ನಿಜವಾದ ಶಿಲ್ಪವೆಂದುಕೊಳ್ಳುವದರಲ್ಲಿ ಎಷ್ಟು ಅಸಂಪೂರ್ಣತೆ ಇದೆಯೋ ಕೇವಲ ಅಂತರ್ಜಗತ್ತನ್ನೇ ಸರ್ವವೆಂದು ಭಾವಿಸಿ ಅದರ ಕಲ್ಪನೆಯ ರೂಪವನ್ನು ಮಾತ್ರವೇ ಉತ್ತಮ ಶಿಲ್ಪ, ಎಂದುಕೊಳ್ಳುವುದರಲ್ಲಿಯೂ ಅಷ್ಟೇ ಅಸಂಪೂರ್ಣತ್ವವು ತುಂಬಿದೆ. ಈ ಅಂತರ್ಬಹಿರ್ಜಗತ್ತುಗಳ ಲಯ ಮಯ ಸಮ್ಮೇಳನವೇ ಉತ್ತಮ ಶಿಲ್ಪಸೃಷ್ಟಿ. ಬಾಹ್ಯ ಪ್ರಕೃತಿಯ ಮೇಲೆ ಎಷ್ಟರವರೆಗೆ ಆಧಾರಪಡಬೇಕೋ, ಆಂತರಿಕ ಭಾವಗಳ ಮೇಲೆ ಎಷ್ಟರವರೆಗೆ ಆಧಾರಪಡಬೇಕೋ ಇದು ಶಿಲ್ಪಿಯ ಸ್ವೇಚ್ಛೆಯ ಮೇಲೆ ಆಧಾರಪಟ್ಟಿರುತ್ತದೆ.[೧] ಈ ರೀತಿಯ ಸ್ವೇಚ್ಛೆಯಿಂದ ವಾಸ್ತು ಹಾಗೂ ಶಿಲ್ಪರಚನೆಗೈದ ಕಲಾವಿದ ಲಾರ್ನಂಜ ಬರ್ನೀನಿ.

ಬಾಲ್ಯ ಜೀವನ : ಬಾರೋಕ್ ವಾಸ್ತು ಹಾಗೂ ಶಿಲ್ಪಕಲೆಯ ಕಲಾವಿದರಲ್ಲಿ ಪ್ರಥಮ ಶ್ರೇಣಿಯಲ್ಲಿ ಕಂಡುಬರುವವ ಲಾರ್ನಂಜ ಬರ್ನೀನಿ. ಈತನ ಜನನವು ೧೫೯೮ರಲ್ಲಿ ಇಟಲಿಯ ಫ್ಲಾರೆನ್ಸ್‌ನಲ್ಲಾಯಿತು. ತಂದೆ ಪಿಟ್ರೋ ಬರ್ನೀನಿ ಒಳ್ಳೆಯ ಮನೆತನಕ್ಕೆ ಸಂಬಂಧಪಟ್ಟವನು. ಮಗನ ಬಗ್ಗೆ ತುಂಬ ಭರವಸೆ ಇಟ್ಟುಕೊಂಡವ, ತಂದೆಯ ಈ ಆಶೆ ನಿರಾಶೆಯಾಗಲಿಲ್ಲ. ಬರ್ನೀನಿ ಚಿಕ್ಕವಯಸ್ಸಿನಲ್ಲಿಯೇ ಅದ್ವಿತೀಯ ಶಿಲ್ಪಿಯೆನಿಸಿಕೊಂಡಿದ್ದ, ಇವನು ನೇಪಲ್ಸನಲ್ಲಿ ವಾಸಮಾಡುತ್ತಿದ್ದ ಸಂದರ್ಭದಲ್ಲಿ ಅಂದರೆ ಹತ್ತು ಹದಿನೈದನೆಯ ವಯಸ್ಸಿನಲ್ಲಿ ಭಾವ ಶಿಲ್ಪಗಳನ್ನು ರಚಿಸಿ ತನ್ನ ಪರಿಸರದ ಜನರನ್ನು ಆಶ್ಚರ್ಯ ಪಡಿಸುತ್ತ,

---

೧. ಹರಿಹರಪ್ರಿಯ : ರಸರೇಖೆ (ಅನು), ಪುಟ-೮೧

ಪ್ರಖ್ಯಾತಿಯನ್ನು ಪಡೆದ. ೧೬೧೫ ರಲ್ಲಿ ರಚನೆಗೊಂಡ 'Goat Amalthea' ಎಂಬುದು ಬರಗ್ಯಾಜ ಮ್ಯುಜಿಯಮ್‌ನಲ್ಲಿ ಸಂಗ್ರಹಗೊಂಡಿದೆ. ಇದೊಂದು ಎಂಟಿಕ್ ಶಿಲ್ಪ (ಪೂರ್ಣಗಾತ್ರದ ನಗ್ನಶಿಲ್ಪ). ೧೬೧೮-೧೯ರಲ್ಲಿ ಸೃಷ್ಟಿಯಾದ 'ಅನೇಸ್ ಮತ್ತು ಆನೇಸಸ್' ಕೃತಿಗಳು ಬರಗ್ಯುಜ ಮ್ಯುಜಿಯಮ್‌ನಲ್ಲಿವೆ. ೧೬೨೦ರಲ್ಲಿ ನೆಪ್ಚೂನ್ ಮತ್ತು ಟ್ರೆಸನ್ ಕಲಾಕೃತಿಗಳು ಲಂಡನ್‌ದ ವ್ಹಿ ಮತ್ತು ವ್ಹಿ ಮ್ಯುಜಿಯಂನಲ್ಲಿ ಸಂಗ್ರಹಿತವಾಗಿವೆ, ಇವೆಲ್ಲವು ಬರ್ನೀನಿಯ ಪ್ರಾರಂಭದ ಶಿಲ್ಪರಚನೆಗಳಾಗಿವೆ.

ಇಪ್ಪತ್ತನೆಯ ವಯಸ್ಸಿನಲ್ಲಿ ವರ್ಜಿಲ್ ಕಾವ್ಯದ ಕಥಾನಾಯಕ ಏನಿಡ್ ಬೆಂಕಿ ಹತ್ತಿದ ಟ್ರಾ ನಗರದಿಂದ ತನ್ನ ತಂದೆಯನ್ನು ಹೊತ್ತು ಸಾಗಿಸುವ ವಸ್ತುವಿನ ಶಿಲ್ಪವನ್ನು ಸೃಷ್ಟಿಸಿದ್ದಾನೆ. ಹೃದಯಸ್ಪರ್ಶೀಯ ಭಾವನೆಗಳನ್ನು ನೈಜವಾದ ಘಟನೆಯ ಹಿನ್ನೆಲೆಯಲ್ಲಿ ನಿರೂಪಿಸಿದ್ದಾನೆ. ಗ್ರೀಕ್ ಕಥಾನಕದ ಪ್ಲೇಟೋ, ಪ್ರಣಯೋನ್ಮತ್ ದೇವತೆ ಪರ್ಷಿಪೋನಳನ್ನು ಕದ್ದೊಯ್ಯುವ ಶಿಲ್ಪದಲ್ಲಿ ಆತನ ದೈತ್ಯ ಒರಟುತನ ಪರ್ಷಿಪೋನಳ ನಿಃಸಾಹಯ ಸಂಕಟಗಳನ್ನು ಅಷ್ಟೊಂದು ಉಜ್ವಲವಾಗಿ ಬಿಂಬಿಸಿದ್ದಾನೆ. ಅವನು ಕೆತ್ತಿದ ಅಮೃತಶಿಲೆ ನಿಜಕ್ಕೂ ಮಾಂಸಬದ್ದ ಶರೀರ ಎಂಬಷ್ಟು ಭ್ರಮೆಯನ್ನು ಹುಟ್ಟಿಸುತ್ತದೆ.[೨] ಪೋಪ ಅರಸರ ಆಶ್ರಯ ದೊರೆತು ರೋಮ್‌ನಲ್ಲಿಯೇ ಈತ ಬಹುಕಾಲ ಬಾಳಿದ. ಇವನ ಕೆಲಸದಲ್ಲಿ ಲೆಕ್ಕವಿಲ್ಲದಷ್ಟು ಹಿರಿ ಕಿರಿಯ ಕಲಾವಿದರು ಸಹಾಯಕರಾಗಿ ದುಡಿದರು. ಅನೇಕರಿಗೆ ಒಳ್ಳೆಯ ಮಾರ್ಗದರ್ಶಕನಾಗಿ ಬರ್ನೀನಿ ಶಿಲ್ಪ ರಚನೆಯನ್ನು ಮಾಡಿದ. ಇವನ ಗರಡಿಯಲ್ಲಿ ತಯಾರಾದವರಲ್ಲಿ ಮೋಚಿ, ಬೊಲ್ಲಿ, ಮತ್ತು ರಗ್ಗಿ ಮುಂತಾದವರನ್ನು ಉದಾಹರಿಸಬಹುದು.

ರೂಬಿನ್ಸ್, ರೆಂಬ್ರಾಂಟ್‌ನಂತಹ ಕಲಾವಿದರಿಗೆ ಕೀರ್ತಿ ಸತ್ತ ನಂತರ ಲಭಿಸಿದರೆ ಬರ್ನೀನಿ ಇದಕ್ಕೆ ಹೊರತಾದವನಾಗಿದ್ದಾನೆ. ಬದುಕಿದ್ದಾಗಲೇ ಅದ್ವಿತೀಯ ವ್ಯಕ್ತಿ ಎಂದು ಪ್ರಸಿದ್ಧಿಯನ್ನು ಪಡೆಯುತ್ತಾನೆ. ಬರ್ನೀನಿಯ ಅವಿರತವಾದ ಪ್ರಯತ್ನ ಹೋರಾಟ, ಇವನ ಅಗ್ಗಳಿಕೆಗೆ ಸಾಕ್ಷಿಯಾಗಿವೆ. ಇವನ ಶಿಲ್ಪಗಳು ಮಾನವೀಯ ಮೌಲ್ಯಗಳನ್ನು ಸಹಜವಾಗಿ ಪ್ರಕಟಿಸುತ್ತವೆ, ಹಾವ ಭಾವಗಳು ವ್ಯಕ್ತಿಗಳ ನೈಜ ಸ್ವಭಾವವನ್ನು ಜೀವಂತಗೊಳಿಸಿವೆ.

ಬರ್ನೀಯ ಕೆಲವು ಕಲಾಕೃತಿಗಳು :

೧. ಡೇವಿಡ್‌ನು ಗೊಲೀಯಥ್ ಚಕ್ರವನ್ನು ಎಸೆಯುತ್ತಿರುವ ಶಿಲ್ಪ.
೨. ಸೇಂಟ ತೇರಿಸಾಳ ಭಾವಪೂರಿತ ಶಿಲ್ಪ.
೩. ರೋಮಿನ ಸೇಂಟ ಪೀಟರ ಚರ್ಚಿನ ವಾಸ್ತು ವಿನ್ಯಾಸ.
೪. ನಾಲ್ಕು ನದಿಗಳ ಕಾರಂಜಿ ಕೂಟದ ಶಿಲ್ಪ.
೫. ಹದಿನಾಲ್ಕನೆಯ ಲೂಯಿಯ ಭಾವಶಿಲ್ಪ.
೬. ದೇವದೂತನ ಸಂದೇಶದ ಶಿಲ್ಪ.

---

೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೨

೧. ಡೆವಿಡ್ ಗೋಲಿಯಥ್ ಚಕ್ರವನ್ನು ಎಸೆಯುತ್ತಿರುವ ಶಿಲ್ಪ :

ಕ್ರಿ.ಶ. ೧೬೨೩ರಲ್ಲಿ ಈ ಶಿಲ್ಪವು ರಚನೆಗೊಂಡಿದೆ. ದೇವಿಡ್‌ನು ಗೋಲಿಯಥ್ ಚಕ್ರವನ್ನು ಎಸೆಯುತ್ತಿರುವ ಭಂಗಿಯಲ್ಲಿದೆ. ಮಾನವ ಗಾತ್ರದ ಈ ಶಿಲ್ಪದಲ್ಲಿ ಚಲನಶೀಲವಾದ ಭಾವನೆಗಳಿವೆ. ನಗ್ನ ರೂಪದ ಅರೆಬೆತ್ತಲೆಯ ವೇಷಭೂಷಣಗಳಿಂದ ಕೂಡಿದ ಶಿಲ್ಪವಿದಾಗಿದೆ. ಸದ್ಯ ರೋಮ್‌ನ 'ಗಲೇರಿಯೊ ಬೋರ್‌ಗೀಜ್' ಮ್ಯುಜಿಯಮ್‌ನಲ್ಲಿ ಸಂಗ್ರಹವಾಗಿದೆ. ಬರ್ನಿನಿಯು ತನ್ನ ತಾರುಣ್ಯದಲ್ಲಿ ಇದನ್ನು ನಿರ್ಮಿಸಿದ್ದಾನೆ. 'ಡೇವಿಡ್'ನ ಶಿಲ್ಪವನ್ನು ಪ್ರಖ್ಯಾತ ಶಿಲ್ಪಿ ಮೈಕೆಲ್ ಎಂಜಿಲೋ ಕೂಡ ರಚಿಸಿದ್ದಾನೆ. ಆದರೆ ಬರ್ನಿನಿಯ ಕಲ್ಪನೆಯ 'ಡೇವಿಡ್' ಬೈಬಲ್ಲಿನ ಅಗೋಚರ ವ್ಯಕ್ತಿಯಾಗಿದ್ದಾನೆ. ಬರ್ನಿನಿಯ ಒಳ್ಳೆಯ ಶಿಲ್ಪಗಳಲ್ಲಿ ಡೇವಿಡ್‌ನ ಶಿಲ್ಪವು ತುಂಬ ಪ್ರಖ್ಯಾತಿಯನ್ನು ಪಡೆದ ಕೃತಿಯಾಗಿದೆ.

೨. ಸೇಂಟ ತೇರಿಸಾಳ ಭಾವಪೂರಿತ ಶಿಲ್ಪ (The Ecstasy of St. Teresa)

ಕ್ರಿ.ಶ. ೧೬೪೫-೪೮ರಲ್ಲಿ ಶಿಲ್ಪವು ಮಾನವನ ಪೂರ್ಣಗಾತ್ರದ ಸಂಗಮವರಿ ಕಲ್ಲಿನಲ್ಲಿ ನಿರ್ಮಾಣಗೊಂಡಿದೆ. ಸೇಂಟ ತೇರಿಸಾಳ ಮುಖದ ಭಾವನೆಗಳು ಉದ್ವೇಗಪೂರಿತವಾಗಿದ್ದು ಬಾರೋಕ್ ಶೈಲಿಯ ಲಕ್ಷಣಕ್ಕೆ ಒಂದು ಉತ್ತಮ ನಿದರ್ಶನವಾಗಿದೆ.

"Bernini most renowned religious work and one of the typical Expressions of the Baroque, is the altarapices within a niche representing the Ecstasy of Saint Teresa"[೩] ಈ ಶಿಲ್ಪವು ರೋಮ್‌ನ ಸಾಂಟಾ ಮೇರಿಯಾದ ಮ್ಯುಜಿಯಮ್‌ನಲ್ಲಿ ಸಂಗ್ರಹಗೊಂಡಿದೆ. ಇದರಲ್ಲಿ ಸೇಂಟ್ ತೇರಿಸಾಳಿಗೆ ದೈವದರ್ಶನವಾಗಿ ಆಕೆ ಆನಂದದಲ್ಲಿ ತನ್ನನ್ನು ತಾನೇ ಮರೆತ ದೃಶ್ಯವಿದೆ. ಅವಳೆದುರಿಗೆ ಒಬ್ಬ ದೇವದೂತ ತನ್ನ ಬಾಣವನ್ನು ಅವಳ ಎದೆಗೆ ಚುಚ್ಚಿ ಹಿಂದಕ್ಕೆ ತೆಗೆಯುವಂತೆ ನಿರೂಪಿತವಾಗಿದೆ. ಆ ಬಾಣದ ಸ್ಪರ್ಶದಿಂದ ಆಕೆ ದೈವಪ್ರೇಮದಲ್ಲಿ ಮುಳುಗಿ ಹೋಗಿದ್ದಾಳೆ. ಸ್ವರ್ಣಕಿರಣಗಳಂತೆ ಆಕೃತಿಗಳ ಉಡುಗೆಯ ನಿರಿಗೆಗಳನ್ನು ಅತಿಶಯಿಸಿ ತೋರಿಸಿ, ಅವುಗಳೆಡೆಯಿಂದ ಕಾಣಿಸುವ ಮುಖ, ಹಸ್ತ, ಪಾದಗಳನ್ನು ನಿರಾಡಂಬರವಾಗಿ ತೋರಿಸಲಾಗಿದೆ[೪] ಕಲಾವಿದ ಬರ್ನಿನಿಯ ಈ ಶಿಲ್ಪದ ಹಿನ್ನೆಲೆಯ ಕಲೆ ಕೂಡ ಶಿಲ್ಪದ ಸೌಂದರ್ಯವನ್ನು ಹೆಚ್ಚಿಸಲು ಸಹಾಯಕಾರಿಯಾಗಿದೆ.

೩. ರೋಮ್‌ದ ಸೇಂಟ ಪೀಟರ್ಸ್ ಚರ್ಚು : (St. peter's Charch-Rome)

ಐತಿಹಾಸಿಕ ಹಿನ್ನೆಲೆ ಹೊಂದಿದ ರೋಮ್‌ನ ಸೇಂಟ ಪೀಟರ್ಸ್ ಚರ್ಚಿನಲ್ಲಿ ಉದ್ಯಮ ಕಲಾವಿದ ಮೈಕೆಲ್ ಎಂಜಿಲೋ, ೧೬೦೦ರಲ್ಲಿ ಮದರೇಸಾ, ಎಂಬ ಕಲಾವಿದ ಈ ಚರ್ಚಿನ ವಾಸ್ತುವಿನ್ಯಾಸದ ಸ್ತಂಭಗಳನ್ನೂ ಹಾಗೂ ಅದರ ಸೌಂದರ್ಯದ ಸಲುವಾಗಿ ಶ್ರಮಿಸಿದ್ದಾರೆ. ಹೀಗೆ ಅನೇಕ ಕಲಾವಿದರ ಪರಿಶ್ರಮದ ಕಾಣಿಕೆಯಾಗಿ ಈ ಚರ್ಚು ಬೆಳೆದು ನಿಂತಿದೆ.

---

೩. Erwin O. Christensen : Western Art, page-257

೪. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ - ೨೯೩

ಮೈಕೆಲ್ ಎಂಜಿಲೋ ಮುಂತಾದ ಕಲಾವಿದರಿಂದ ಅಪೂರ್ಣವಾಗಿ ಉಳಿದ ಭಾಗವನ್ನು ಪೂರ್ಣಗೊಳಿಸಿದ ಶ್ರೇಯಸ್ಸು. ಬರ್ನೀನಿಯದ್ದಾಗಿದೆ. ಇಲ್ಲಿ ವೈವಿಧ್ಯಮಯವಾದ ಅನೇಕ ಕಲಾಕೃತಿಗಳನ್ನು ನಿರ್ಮಿಸಿ ಸೇಂಟ ಪೀಟರ್ಸ ಚರ್ಚಿನ ನಾವಿನ್ಯತೆಗೆ ಬಹು ದೊಡ್ಡ ಕಾಣಿಕೆಯನ್ನು ಲಾರ್ನಂಜ ಬರ್ನೀಯು ಕೊಟ್ಟಿದ್ದಾನೆ. ಬರ್ನೀನಿಯ ಅಗ್ಗಳಿಕೆಗೆ ಇದೊಂದು ಉತ್ತಮ ಉದಾಹರಣೆಯಾಗಿದೆ.

೪. ನಾಲ್ಕು ನದಿಗಳ ಕಾರಂಜಿಕೂಟದ ಶಿಲ್ಪ :

ಜಗತ್ ವಿಖ್ಯಾತಿಯ ಈ ಶಿಲ್ಪವು ಕ್ರಿ.ಶ. ೧೬೪೮-೫೧ರಲ್ಲಿ ನಿರ್ಮಾಣಗೊಂಡಿದೆ ಕಾರಂಜಿ ಕೂಟದ ವಾಸ್ತುವಿನ್ಯಾಸದ ಶಿಲ್ಪಕಲಾ ಕೃತಿಯು ಸದ್ಯ ರೋಮಿನ ಕಲಾ ಸಂಗ್ರಹಾಲಯ ಒಂದರಲ್ಲಿ ಸಂಗ್ರಹಗೊಂಡಿದೆ.

ರೋಮಿನ ಪಿಯೇಟಾ ನವುನಾದಲ್ಲಿ ಕಾರಂಜಿಯ ಸುತ್ತ ಜಗತ್ತಿನ ಭೂಖಂಡಗಳ ಪ್ರತೀಕವಾಗಿ ಗಂಗಾ, ಡೇನೋಬ್, ನೈಲ್, ಪ್ಲಾಟಾ (Nile, Danube,Ganges, Plata) ಈ ನಾಲ್ಕು ನದಿಗಳನ್ನು ನಗ್ನತೆಯಿಂದ ಕೂಡಿದ ಪುರುಷರ ರೂಪದಲ್ಲಿ ನಾಲ್ಕು ದಿಕ್ಕುಗಳಲ್ಲಿ ಸೃಷ್ಟಿಗೈದಿರುವದು ಈ ಶಿಲ್ಪದ ವೈಶಿಷ್ಟ್ಯವಾಗಿದೆ. ಸಾಂಕೇತಿಕ ರೂಪದ ಶಿಲ್ಪದಲ್ಲಿ ನಾಲ್ಕು ಜನರು ಕುಳಿತಿರುವ ವಿವಿಧ ಭಂಗಿಗಳು, ಅವರ ಪುಷ್ಟವಾದ ಮಾಂಸಖಂಡಗಳು, ಶಾರೀರಕ ವಿನ್ಯಾಸ, ಮುಖದ ಭಾವನೆಗಳು ಯಾರನ್ನಾದರೂ ಕ್ಷಣಾರ್ಧದಲ್ಲಿ ಆಕರ್ಷಿಸುವಂತಹ ನಯ ನಾಜೂಕುತನವನ್ನು ನಾವು ಇಲ್ಲಿ ಕಾಣಬಹುದಾಗಿದೆ. ನಾಲ್ಕು ನದಿಗಳನ್ನೂ ಪ್ರತಿನಿಧಿಸುವ ನಗ್ನ ರೂಪಿನ ಪುರುಷರ ಶಿಲ್ಪಗಳು ಅಲ್ಲಿರುವ ನಕ್ಷೆ. ಅದರ ಸುತ್ತಲು ಬಳಸಿಕೊಂಡಿರುವ ವಿನ್ಯಾಸ ಎಲ್ಲವು ಒಟ್ಟು ಶಿಲ್ಪಕ್ಕೆ ನಾವೀನ್ಯತೆಯನ್ನು ತಂದುಕೊಡುವಲ್ಲಿ ಸಹಯಕಾರಿಯಾಗಿವೆ.

೫. ೧೪ನೇ ಲೂಯಿಸ್‌ನ ಭಾವಶಿಲ್ಪ : (Portrait bust of Louis-XIV)

೧೪ನೇ ಲೂಯಿಸ್‌ನ ಭಾವಶಿಲ್ಪ ೧೬೬೫ರಲ್ಲಿ ರಚನೆಯಾಗಿದೆ. "One of the most Extraordinary Portrait bust of any period is Bernini is bronze bust of Louis XIV of France Louis rapresented the height of absolutism in the monarchial System of Seventheenth Century Europe. and the bust was intended to give the most Claborate Expression to the glorified head of the State. Bernini invented the motif of brown drapery to magnify the impression of grandeur.[೫] ಹದಿನಾಲ್ಕನೆಯ ಲೂಯಿಯ ದರ್ಪ ಹಾಗೂ ಅಧಿಕಾರದ ಮದಗಳಿಗೆ ಪ್ರಸಿದ್ಧನಾಗಿದ್ದವನು, ಬರ್ನೀನಿ ರಚಿಸಿದ ಅವನ ಶಿಲ್ಪ ಲೂಯಿಯ ರೂಪಗುಣಗಳ ಚಿತ್ರಣವಾಗಿದೆ. ಲೂಯಿಯ ಗಂಭೀರ ಮುಖಮುದ್ರೆ ಇಲ್ಲಿ ರಮ್ಯವಾಗಿ ಮೂಡಿ ಬಂದಿದೆ. ಈ ಭಾವಶಿಲ್ಪವು ಈಗ ರೋಮಿನ 'ವರ್‌ಸೈಲಿಸ್'

---

೫. Erwin O. Chrutensen: The History of Western Art Page-257

ಎಂಬಲ್ಲಿ ಸಂಗ್ರಹಗೊಂಡಿದೆ. ಲೂಯಿಸ್‌ನ ಪ್ರೋತ್ಸಾಹದಿಂದ ಬರ್ನಿನಿಯು ಈ ಪ್ರಸಿದ್ಧ ಕಲಾಕೃತಿಯನ್ನು ನಿರ್ಮಿಸಿದ್ದಾನೆ.

೬. ದೇವದೂತನ ಸಂದೇಶದ ಶಿಲ್ಪ : (The Angel with Superscription)

೧೬೬೮ರಲ್ಲಿ ಬರ್ನಿನಿ ಈ ಶಿಲ್ಪವನ್ನು ರಚನೆಗೈದಿದ್ದಾನೆ. 'pont Saint Angelo ಎಂಬ ದೇವದೂತನು ಸಂದೇಶವನ್ನು ಬೀರುವ ಈ ಕೃತಿಯು ಪೂರ್ಣಗಾತ್ರದ ಸಂಗಮವರಿ ಕಲ್ಲಿನಲ್ಲಿ ಸೃಷ್ಟಿಯಾಗಿದೆ. ತ್ರಿಭಂಗಿಯಲ್ಲಿ ನಿಂತಿರುವ ಈ ಶಿಲ್ಪ ರಭಸದಿಂದ ಧಾವಿಸುವ ಗುಂಗುರು ಕೂದಲಿನ ದುಂಡುಮೊಗದ, ಭಾವೋನ್ಮಾದ ದೇವದೂತನ ವೇಷ ಭೂಷಣಗಳು, ಶಿಲ್ಪದ ಉಬ್ಬು ತಗ್ಗುಗಳು, ನವಿರಾದ ಮತ್ತು ಯಥಾವತ್ತಾದ ನಿರಿಗೆಗಳು ಶಿಲ್ಪಕ್ಕೆ ಚಲನಶೀಲತೆ ಯನ್ನು ತಂದುಕೊಟ್ಟಿವೆ.

The Angel with superscription 1668, Marble overlife, S. Andrea delle Fratte Rome Parming part of a series of angel holding the instruments of christ's Passion Made for the Ponsant' Angelo, this figure and one other were kept indoors on the pope's orders replicas being substituted on the bridge to, save them from weathering. In Style it shows an even more Extreme from of Baroque then the angel in the Ecstasy of St. Teras. ಈ ಶಿಲ್ಪವು ಈಗ ರೋಮ್‌ನ ಎಸ್ ಅಂಡ್ರೆಯಾ ಡೆಲ್ಲೆ ಫ್ರೆಟ್ಟೇ ಎಂಬ ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿದೆ.

"The great arcitect, sculpture and painter of this Baroque period bult the famous colonnuade in front of the bosilica of St. Peter's From a sketh drown by him we learn that he wished the wide curved colonnades surrounding the great piazza, to symbolize, the arms of christ stretched out on the cross to embrace all mankind. Bernini delibrately give the piazza an oval shape instead of the more stable circle in order to create the visual illusion of great depth."[೬]

ರೋಮ್‌ನಗರದ ಸೈಂಟ್ ಪೀಟರ್ಸ್ ಚರ್ಚಿನ ಅದ್ಭುತ ಅಲಂಕಾರಿಕವಾದುದೊಂದು ಮಂಟಪ ೯೫ ಅಡಿ ಎತ್ತರವಿದೆ. ಬರ್ನಿನಿಯಿಂದ ಅದು ಸೃಷ್ಟಿಯಾಗಿದೆ. ಸೈಂಟ್ ಪೀಟರನ ಸಮಾಧಿ ಸ್ಥಳದ ಮೇಲೆ ಇದನ್ನು ನಿಲ್ಲಿಸಿದ್ದಾರೆ. ಈ ಅಲಂಕಾರಿಕ ಶಿಲ್ಪಕೃತಿ ಬಣ್ಣಗಳಿಂದ ಚಿನ್ನದ ಮುಲಾಮನಿಂದ ಸ್ವರ್ಗೀಯ ವೈಭವವಿಲಾಸಗಳನ್ನು ತೋರಿಸುತ್ತದೆ. ಅಲಂಕಾರಿಕ ಶಿಲ್ಪದ ಪರಮಾವಧಿಯನ್ನು ನಾವು ಇಲ್ಲಿ ಕಾಣಬಹುದು. ಕಲಾಕೃತಿಗಳಿಗೆ ಇಂಥ ಬೆಡಗು

೬. Edith Tomory : An Introduction to the History of Fine Arts in India and the West. Page-158

ಬೇಕೇ, ಬೇಡವೇ ಎಂಬ ವಿಚಾರದಲ್ಲಿ ಮಾತ್ರ ವಿವಿಧ ಅಭಿಪ್ರಾಯಗಳಿವೆ.[೭] ಆದರೆ ಕಲೆ ನಮ್ಮನ್ನು ಯಾವುದೋ ಒಂದು ಭ್ರಮಾಲೋಕಕ್ಕೊಯ್ಯಬಹುದು. ಕಲೆಯ ಗುಣ ಅದಿರಬೇಕು ಎಂಬುದನ್ನು ಅನೇಕರು ಒಪ್ಪುತ್ತಾರೆ.

"Baroque sculpture as we saw was closely related to the architecture. The dominating figure in Baroque, Sculpture was Bernini as Michelangelo had been of century before. His throne of St. peter and the so called glory above it in the apse of St. peter's basilica, are typically Baroque.[೮]" ಬರ್ನೀನಿಯೂ ಅಂಡಾಕಾರದ ರೇಖಾ ಗಣಿತದ ಆಕೃತಿಗಳನ್ನು ಹೆಚ್ಚಾಗಿ ನಿರ್ಮಿಸಿದ್ದಾನೆ. ಚಿತ್ರ ವಿಚಿತ್ರವಾದ ನೀರಿನ ಚಿಲುಮೆಗಳು ನೀರಿನ ಕೊಳವೆಗಳು ಗೋಡೆಯೊಳಗೆ ನಿರ್ಮಿಸಿದ ಪ್ರತಿಮೆಗಳನ್ನಿಡುವ ಕಪಾಟುಗಳು ಮುಂತಾದ ಔಪಯೋಗಿಕವೆನ್ನ ಬಹುದಾದ ಕಲಾ ಸ್ವರೂಪಗಳನ್ನು ರಚಿಸಿ ಪ್ರಖ್ಯಾತಿಯನ್ನು ಗಳಿಸಿದ್ದಾನೆ.

ಬರ್ನೀನಿಯ ಕಲಾಶೈಲಿ : ಬಹುಮುಖ ವ್ಯಕ್ತಿತ್ವದ ಮೈಕೆಲ್ ಎಂಜಿಲೋ ಎನಿಬಲಿ, ಕಹ್ರವಾಜಿಯೋ, ಗುಡಿರೇನಿ ಮುಂತಾದ ಕಲಾವಿದರ ಶೈಲಿಯ ಪ್ರಭಾವ ಇವನ ಮೇಲಾಗಿರುವದರಿಂದ ಒಂದು ರೀತಿಯಲ್ಲಿ ಬರ್ನೀನಿಯ ಶೈಲಿ ಮೇಲಿನ ಕಲಾವಿದರ ಸಮ್ಮಿಶ್ರಣದ ಶೈಲಿ ಎಂದು ಹೇಳಬಹುದಾಗಿದೆ.

"As a Sculpter Bernini had profound influence on the European Style of the time : his manner became almost univeral during the rest of the Seventeenth Centure.[೧೦] ಬರ್ನೀನಿಯ ಕೃತಿ ರಚನೆಗಳಲ್ಲಿ ಅದರಲ್ಲೂ ಭಾವಶಿಲ್ಪಗಳು ಆತನನ್ನು ಒಬ್ಬ ಅತ್ಯುನ್ನತ ಶಿಲ್ಪಿಯನ್ನಾಗಿ ಮಾಡಿವೆ. ವ್ಯಕ್ತಿಗಳ ಭಾವನೆಗಳು ಶಿಲ್ಪದಲ್ಲಿ ತದ್ರೂಪವಾಗಿ ಸೃಷ್ಟಿಸುವ ವಿಶೇಷ ಕುಶಲಕೆ ಬರ್ನೀನಿಯ ವೈಶಿಷ್ಟ್ಯವಾಗಿದೆ. ಯಾವುದೋ ಸಂದೇಶವನ್ನು ಬೀರುವಂತೆ ಇವನ ಕಲಾಕೃತಿಗಳು ರಚನೆಗೊಂಡಿರುವದು ಕೂಡ ಗಮನಾರ್ಹ ವಿಷಯವಾಗಿದೆ. ಬರ್ನೀನಿಯೂ ಶಿಲ್ಪಕಲಾ ಕೃತಿಗಳಲ್ಲಿ, ವಾಸ್ತುವಿನ್ಯಾಸದಲ್ಲಿ, ಚಿತ್ರಗಳಲ್ಲಿ ತನ್ನದೇ ಆದ ಈ ವೈಶಿಷ್ಟ್ಯಗಳಿಂದ ಇನ್ನುಳಿದ ಕಲಾವಿದರಿಗಿಂತ ಭಿನ್ನವಾಗಿ ನಿಂತುಕೊಳ್ಳುತ್ತಾನೆ.

"He search for a means of Expressing different reams of the divine, the mystical, and the earthly led him to imaginative mixtures

---

೭. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೩

೮. Edith Tomory : An introduction to the History of Fine Arts India and the West, Page-159

೯. ಕನ್ನಡ ವಿಶ್ವಕೋಶ : ಸಂಪುಟ-೩, ಪುಟ-೩೪೪

೧೦. Edith Tomory : An introduction to the History of India and the West, Page-159

of white and coloured marbles, bronze stuccof stone, painting and even coloured light through stained galss and the combination of these varying materials has often been condemned, by uncompere hending critics as tasteless overdecoration."[೧೧] ಹೀಗೆ ಬರ್ನೀನಿ ಅನೇಕ ಶಿಲ್ಪಗಳನ್ನು ಸೃಷ್ಟಿಸಿದ್ದಾನೆ. ಅಲ್ಲಿ ಚರ್ಚಿನ ಅಲಂಕರಣೆಗೂ ಕಲಾಕೃತಿಗಳನ್ನು ಒದಗಿಸಿದ್ದಾನೆ. ನಿಜ ಪ್ರಮಾಣದ ಅದಕ್ಕಿಂತಲೂ ಹೆಚ್ಚು ಗಾತ್ರವಾದ ಭಾವಶಿಲ್ಪಗಳಲ್ಲಿ, ಮತ್ತು ಅಲಂಕಾರಿಕ ಶಿಲ್ಪಗಳಲ್ಲಿ ಆತ ತೋರಿಸಿದ ಕೌಶಲ ಭಾವಾತಿಶಯ, ಭ್ರಮೆಕಾರಕ ಬಣ್ಣ, ಬೆಡಗು ಮೊದಲಾದವುಗಳು ಇವನನ್ನು ಭಾವಾವಿಷ್ಟ (ಬಾರೋಕ್) ಯುಗದ ದೈತ್ಯಶಿಲ್ಪಿ ಎಂದು ಸಾರಿವೆ.[೧೨] ಬರ್ನೀನಿಯ ಅನೇಕ ಕಲಾಕೃತಿಗಳು ಜಗತ್ತಿನ ಪ್ರಖ್ಯಾತ ಕಲಾಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿವೆ. ಉದಾ. ಕ್ಯಾಂಬ್ರಿಜ್, ಫ್ಲಾರೆನ್ಸ್, ಲಂಡನ್, ನ್ಯೂಯಾರ್ಕ್, ಪ್ಯಾರಿಸ್, ವಾಸಿಂಗಟನ್ ನಂತಹ ಸ್ಥಳಗಳನ್ನು ಹೆಸರಿಸಬಹುದು ಬರ್ನೀನಿ ೧೬೮೦ರಲ್ಲಿ ಈ ಲೋಕದಿಂದ ದೂರವಾದರೂ ಅವನು ನಡೆದು ಬಂದ ದಾರಿ ಅವನ ಕಲಾಕೃತಿಗಳು ಈಗಲೂ ಕಲಾ ಅಭ್ಯಾಸಿಗಳಿಗೆ ಸಹೃದಯರಿಗೆ ಸ್ಫೂರ್ತಿಯನ್ನೀಯುತ್ತಿವೆ ಮತ್ತು ಆದರ್ಶಪ್ರಾಯವಾಗಿವೆ.

❑


---

೧೧. Peter and Lindamurry:A dictionary of art and artist's.Page-25

೧೨. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ, ಪುಟ-೨೯೩



ರೋಮನ್ ಸೇಂಟ್ ಪೀಟರ್ಸ್ ಚರ್ಚ್



ನಾಲ್ಕು ನದಿಗಳ ಕಾರಂಜಿ ಕೂಟದ ಶಿಲ್ಪ

೨. ಬಾರೋಕ್ ಕಲೆಯ ಚಿತ್ರಕಾರರು



i ರೂಬಿನ್ಸ್

೧೫೭೭–೧೬೪೦

"ವೆನಿಸಿನ ಒಂದು ತಂಗುದಾಣ. ಅಂಗಳದಲ್ಲಿ ಯುವಕನೊಬ್ಬ ತಾನು ನೋಡಿದ್ದ ವಿಖ್ಯಾತ ಚಿತ್ರವೊಂದನ್ನು ಸ್ಮರಿಸಿಕೊಳ್ಳುತ್ತ ಅದರ ಪ್ರತಿಕೃತಿ ಬರೆಯುತ್ತಿದ್ದ. ಅಪರಿಚಿತ ವ್ಯಕ್ತಿ ಹಿಂದಿನಿಂದ, "ಅದ್ಭುತ! ಮೂಲಕೃತಿಗಿಂತ ಉತ್ತವಾಗಿ ಬಂದಿದೆ. ನನ್ನ ಸೇಹಿತ ಮಾಂಟುವಾ ಡ್ಯೂಕನ ಬಳಿಗೆ ಕರೆದುಕೊಂಡು ಹೋಗ್ತೇನೆ. ನಿನ್ನ ಅದೃಷ್ಟದ ಬಾಗಿಲು ತೆರೆದಂತೆಯೇ"[೧] ಎಂದು ಹೇಳಿ, ಯುವಕನನ್ನು ತನ್ನ ಸ್ನೇಹಿತನ ಬಳಿ ಕರೆದೊಯ್ದ. ಆಸ್ಥಾನ ಚಿತ್ರಕಾರನ ಕೆಲಸ ಆ ಯುವಕನಿಗೆ ಸಿಕ್ಕಿತು. ಆತನೇ ನವೋದಯ ಕಾಲದ ಶ್ರೇಷ್ಠ ಚಿತ್ರಕಾರರಲ್ಲೊಬ್ಬನಾದ ಪೀಟರ್‌ಪಾಲ್ ರೂಬಿನ್ಸ್.

ಜನನ, ವಿದ್ಯಾಭ್ಯಾಸ : "Peter Poual Rubins prince of broque painters"[೨] ಬಾರೋಕ್ ಕಲೆಯ ರಾಜನಾಗಿ ಮೆರೆದ ರೂಬಿನ್ಸ್‌ನು ಹುಟ್ಟಿದ್ದು ೧೫೭೭ ಜೂನ್ ೨೮ರಂದು ಜರ್ಮನಿಯ 'ಸೈಗನ್' ಎಂಬ ಪಟ್ಟಣದಲ್ಲಿ. ತಾಯಿ ಮಾರಿಯಾ 'ಪಿಪೆಲಿಂಕ್ಸ್' ತಂದೆ ಜಾನ್ ರೂಬಿನ್ಸ್‌ನು ನೆದರ್ಲೆಂಡಿನ 'ಅಂಟ್ವರ್ಪ'ನಲ್ಲಿ ಊರಿನ ಪ್ರಮುಖನಾಗಿದ್ದನು. ರೂಬಿನ್ಸ್ ಚಿಕ್ಕವನಾಗಿದ್ದಾಗಲೆ ತಂದೆಯನ್ನು ಕಳೆದುಕೊಂಡು ತಬ್ಬಲಿಯಾಗಿ ಕಷ್ಟದ ದಿನಗಳನ್ನು ಸಾಗಿಸಬೇಕಾಯಿತು, ಶ್ರೀಮಂತರ ಮನೆಗಳಲ್ಲಿ ಕೆಲಸ ಮಾಡಿ ಮನೆತನದ ಜವಾಬ್ದಾರಿಯನ್ನು ನಿರ್ವಹಿಸುತ್ತಾನೆ. ಬಾಲ್ಯದಿಂದಲೂ ಚಿತ್ರಕಲೆಯ ಕಡೆಗೆ ವಿಶೇಷ ಒಲವು ಇರುವುದನ್ನು ಕಂಡುಕೊಂಡ ಸಂಬಂಧಿಕರೊಬ್ಬರು ಇವನನ್ನು ಚಿತ್ರಕಲೆಯ ವ್ಯಾಸಂಗಕ್ಕಾಗಿ ಹಿರಿಯ ಕಲಾವಿದರೊಬ್ಬರಲ್ಲಿಗೆ ಕಳುಹಿಸಿ ಶಿಕ್ಷಣವನ್ನು ಕೊಡಿಸುತ್ತಾರೆ. ತನ್ನ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಚಿತ್ರಕಲೆಯ ಶಾಸ್ತ್ರೀಯವಾದ ಅಧ್ಯಯನವನ್ನು ಪಡೆದು ಕಲಾಕೃತಿ ನಿರ್ಮಾಣ ಮಾಡಲು ಪ್ರಾರಂಭಿಸುತ್ತಾನೆ.

---

೧. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೫೩೭

೨. Paul J. Sachs : Great Drawing, Page-67

"Among the courtyly artists of seventheenth centruy baroque painting, no one was exciting or so influential as perter Paul Rubins. He was product of the royalist and catholic environment of flanders which had remained part of the spanish empire. His works present a brilliantly effective mixture of the chief trends of the day."[೩]

ರಾಯಲಿಸ್ಟ್ ಮತ್ತು ಕ್ಯಥೋಲಿಕ್ ಶ್ರದ್ಧೆಯ ಪರಿಸರದಲ್ಲಿ ಬೆಳೆದ ರೂಬಿನ್ಸ್ ಒಬ್ಬ ಕಲಾವಿದ ಅಷ್ಟೇ ಅಲ್ಲ, ಅವನೊಬ್ಬ ಮುತ್ಸದ್ದಿ, ಕುಶಾಗ್ರಮತಿ, ಹಲವಾರು ಭಾಷೆಗಳನ್ನು ಕಲಿತ ಧೀಮಂತ ವ್ಯಕ್ತಿ, ರಾಜಕೀಯದಲ್ಲಿ ರಾಯಭಾರಿಯಾಗಿ ಅನೇಕ ರಂಗಗಳ ಅನುಭವವಿರುವ ಬಹುಮುಖ ವ್ಯಕ್ತಿತ್ವದ ಆಸ್ಥಾನ ಚಿತ್ರಕಾರ, ಅನೇಕ ರಾಜರುಗಳು ಇವನನ್ನು ಕರೆಯಿಸಿಕೊಂಡು ಕಲಾಕೃತಿಗಳನ್ನು ರಚಿಸಿಕೊಂಡಿದ್ದಾರೆ. ಅಲ್ಲದೆ ಅವುಗಳನ್ನು ಸಂಗ್ರಹಿಸಿದ್ದಾರೆ. ರೂಬಿನ್ಸ್‌ನ ಕಲಾಕೃತಿಗಳು ತಮ್ಮಲ್ಲಿ ಇರುವುದು ತಮಗೆ ಗೌರವ ಹಾಗೂ ಅಭಿಮಾನದ ವಿಷಯ ಎಂಬ ಭಾವನೆಯು ಅವರಲ್ಲಿತ್ತು.[೪] ಇಟಲಿ, ಫ್ರಾನ್ಸ್, ಸ್ಪೇನ್, ನೆದರ್ಲೆಂಡ್, ಇಂಗ್ಲೆಂಡ್, ವೆನಿಸ್, ಮುಂತಾದ ಕಡೆಗಳಲ್ಲೆಲ್ಲಾ ಪ್ರವಾಸಗೈದು ಅನೇಕ ಹಿರಿಯ ಕಲಾವಿದರ ಸ್ನೇಹ ಸಂಪಾದಿಸಿಕೊಂಡು ತನ್ನದೇ ಆದ ವಿನೂತನ ಶೈಲಿಯಲ್ಲಿ ಕೃತಿರಚನೆಗೈದ ವಿಶಿಷ್ಟ ವ್ಯಕ್ತಿ ರೂಬಿನ್ಸ್.

೧೬೦೯ರಲ್ಲಿ ಇಸುಬೆಲ್ಲಾ ಬ್ರಾಂಟ್‌ಳನ್ನು ಮದುವೆಯಾಗುತ್ತಾನೆ. ಬಡತನದ ನೆರಳಲ್ಲಿ ಬೆಳೆದ ರೂಬಿನ್ಸ್‌ನ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗುತ್ತದೆ. ಭವ್ಯವಾದ ಮನೆ, ಶ್ರೀಮಂತಿಕೆಯ ಸುಖ ಸಂಸಾರದೊಂದಿಗೆ ಮೂರು ಜನ ಮಕ್ಕಳನ್ನು ಪಡೆಯುತ್ತಾನೆ. ಹೆಂಡತಿಯನ್ನೇ ತನ್ನ ಚಿತ್ರ ರಚನೆಗೆ ರೂಪದರ್ಶಿನಿಯನ್ನಾಗಿ ಮಾಡಿಕೊಂಡು ಚಿತ್ರ ರಚಿಸುತ್ತಾನೆ. ಸಮೃದ್ಧಿಯ ಈ ಜೀವನ ಬಹುಕಾಲ ಉಳಿಯಲಿಲ್ಲ. ೧೫೮೭ರಲ್ಲಿ ತಂದೆಯನ್ನು ಕಳೆದುಕೊಂಡಂತೆ ೧೬೦೮ರಲ್ಲಿ ತಾಯಿಯನ್ನು ಹಾಗೆಯೇ ೧೬೨೬ರಲ್ಲಿ ಪ್ರೀತಿಯ ಪತ್ನಿ ಇಸುಬೆಲ್ಲಾ ಬ್ರಾಂಟ್‌ಳನ್ನು ಕಳೆದುಕೊಂಡ. ಈಕೆಯ ಮರಣದಿಂದ ತುಂಬ ದುಃಖಿತನಾದ. ಮುಂದೆ ಸ್ವಲ್ಪ ಕಾಲದ ನಂತರ ರಾಯಬಾರಿಯ ಕೆಲಸಕ್ಕೆ ಸೇರುತ್ತಾನೆ. ಸ್ಪೇನ್ ಮತ್ತು ಇಂಗ್ಲೆಂಡ್‌ಗಳ ಮನಸ್ತಾಪವನ್ನು ಹೋಗಲಾಡಿಸಿ ಪರಸ್ಪರರಲ್ಲಿ ಮೈತ್ರಿಯ ಭಾವನೆಯನ್ನು ಉಂಟುಮಾಡುವಲ್ಲಿ ರೂಬಿನ್ಸ್‌ನ ಪಾತ್ರ ತುಂಬ ಹಿರಿದಾದುದಾಗಿದೆ. ಎರಡೂ ರಾಷ್ಟ್ರಗಳು ಪ್ರೀತಿಯಿಂದ ಅವನಿಗೆ 'ನೈಟ್' ಪದವಿ ಇತ್ತು ತಮ್ಮ ಗೌರವವನ್ನು ವ್ಯಕ್ತಪಡಿಸಿವೆ.

೧೬೩೦ರಲ್ಲಿ ರೂಬಿನ್ಸ್ ಅಂಟ್ವೆರ್ಪ್‌ಗೆ ಹಿಂತಿರುಗಿ ಬರುತ್ತಾನೆ. ೧೬ ವರ್ಷದ ಹೆಲನ್ ಫರ್ಮಾಂಟ್‌ಳನ್ನು ಮದುವೆ ಮಾಡಿಕೊಂಡ, ಅವಳ ೧೫ಕ್ಕೂ ಹೆಚ್ಚು ರೂಪಚಿತ್ರಗಳನ್ನು ಬರೆದ, ಅವನ ಅನೇಕ ಧಾರ್ಮಿಕ ಹಾಗೂ ಪೌರಾಣಿಕ ಚಿತ್ರಗಳಿಗೆ ಆಕೆ ಮಾದರಿಯಾಗಿದ್ದಳು. ರೂಬಿನ್ಸ್‌ನ ಕೃತಿಗಳಿಗೆ ಬೇಡಿಕೆ ಹೆಚ್ಚುತ್ತಿತ್ತು. ರೂಬಿನ್ಸ್‌ನು ರೇಖಾಚಿತ್ರವನ್ನು ಮಾತ್ರ ಬರೆದು

---

೩. Barnard Myers : 50 Great Artists, Page-90

೪. ಜ್ಞಾನಗಂಗೋತ್ರಿ : ಕಲೆ ಮತ್ತು ಸಾಹಿತ್ಯ ಸಂಪುಟ-೫, ಪುಟ-೫೩೭

ಕೊಡುತ್ತಿದ್ದ. ಶಿಷ್ಯರು ಬಣ್ಣಹಾಕಿದ ಮೇಲೆ ಚಿತ್ರಕ್ಕೆ ಮುಕ್ತಾಯದ ಸೂಕ್ಷ್ಮ ಕುಸುರಿಯನ್ನು ರೂಬಿನ್ಸ್ ಮಾಡುತ್ತಿದ್ದ.[೫] ಸುಮಾರು ೩೦೦೦ಕ್ಕಿಂತಲೂ ಹೆಚ್ಚು ಪೇಂಟಿಂಗ್ಸ್‌ಗಳು ಲೆಕ್ಕವಿಲ್ಲದಷ್ಟು ರೇಖಾಚಿತ್ರಗಳು ಸ್ಕೆಚಸ್‌ಗಳು ಕಲಾಪ್ರಪಂಚಕ್ಕೆ ಕಾಣಿಕೆಯಾಗಿ ಬಂದಿವೆ.[೬] ರೂಬಿನ್ಸ್ ತನ್ನ ಕೃತಿಗಳ ಗುಣಮಟ್ಟವನ್ನು ಎಲ್ಲಿಯೂ ಕಡಿಮೆ ಮಾಡಲಿಲ್ಲ[೭] ಎಂಬ ವಿಮರ್ಶಕರ ಮಾತುಗಳು ಇಲ್ಲಿ ಹೆಚ್ಚು ಸೂಕ್ತವಾಗಿವೆ.

ರೂಬಿನ್ಸ್‌ನ ಕಲಾಕೃತಿಗಳು:

ರೂಬಿನ್ಸ್‌ನ ಕಲಾಕೃತಿಗಳ ಸಂಖ್ಯೆ ಅಪಾರವಾಗಿದೆ. ಇಲ್ಲ ಮಾದರಿಗಾಗಿ ಕೆಲವು ಕಲಾಕೃತಿಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ.

೧. ಸೆಲ್ಫ್ ಪೊರ್ಟ್ರೆಟ್ ವಿತ್ ಇಸ್‌ಬೆಲ್ಲಾ ಬ್ರಾಂಟ್ (Self portrat with Isbella Brant)
೨. ಶಿಲುಬೆಯನ್ನೇರಿಸುವ ಚಿತ್ರ :
೩. ಡಿ ಕನ್‌ವರ್ಷೆನ್ ಆಪ್ ಸೇಂಟ್‌ಪಾಲ್ : (The conversation of the St. Paual)
೪. ಲ್ಯಾಂಡ್‌ಸ್ಕೇಪ್ ವಿತ್ ದಿ ಸಿಪ್‌ವ್ರಿಕ್ ಆಫ್ ಅ್ಯನಿಸ್ : (Landscape with the shipwreck of Aenes)
೫. ಸಂಧಿಯ ಅನುಗ್ರಹಗಳು :
೬. ಆಪೋಥೆಸಿಸ್ ಆಫ್ ಜೇಮ್ಸ್ : (Apotheses of Jemes)
೭. ದಿ ಆಡೋರೇಶನ್ ಆಫ್ ದಿ ಕಿಂಗ್ಸ್ : (The Adoration of the kings)
೮. ದಿ ಟೂರ್ನಾಮೆಂಟ್ : (The Tournament)
೯. ಕ್ರಿಸ್ತನ ಚಿತ್ರಗಳು :

೧. ಸೆಲ್ಫ್ ಪೊರ್ಟ್ರೆಟ್ ವಿತ್ ಇಸ್‌ಬೆಲ್ಲಾ ಬ್ರಾಂಟ್ : (Self portrat with Isbella Brant)

ಈ ಚಿತ್ರವು ಮ್ಯುನಿಚ್ ಪಟ್ಟಣದ 'ಅಲತ್‌ಪಿನಾಕೊಥೆಕ್' ಎಂಬಲ್ಲಿ ಸಂಗ್ರಹಿಸಲ್ಪಟ್ಟಿದೆ. ೧೬೦೯ರಲ್ಲಿ ತೈಲವರ್ಣ ಮಾಧ್ಯಮದಲ್ಲಿ ಪ್ರಕಾಶಗೊಂಡ ಈ ಕೃತಿ ಅವನ ವೈವಾಹಿಕ ಜೀವನಕ್ಕೆ ಸಂಬಂಧಿಸಿರುವುದು. ಪ್ರೀತಿಯ ಮೊದಲನೆಯ ಹೆಂಡತಿ ಬ್ರಾಂಟ್‌ಳೊಂದಿಗೆ ತನ್ನ

---

೫. ಜ್ಞಾನಗಂಗೋತ್ರಿ : ಕಲೆ ಮತ್ತು ಸಾಹಿತ್ಯ, ಸಂಪುಟ-೫, ಪುಟ-೫೩೭

೬. Leonid Volynsky : Seven days Page-49

೭. "All this made him a rich Man, but never did he become Careless or Slipshod. whatever left his studio was finished, and the quality of his work remained on a par with the quantity" - Gorge G. Harrap : The Arts of mankind, page-318)

ಭಾವಚಿತ್ರವನ್ನು ಚಿತ್ರಿಸಿಕೊಂಡಿದ್ದಾನೆ. ಪ್ರೀತಿ ವಾತ್ಸಲ್ಯದ ಹಾಗೂ ಮಧುರ ನೆನಪಿನ ಕಾಣಿಕೆಗಾಗಿ, ಒಲವಿನ ಕೊಡುಗೆಯಾಗಿ ದಾಂಪತ್ಯ ಜೀವನದ ಹೊಸದರಲ್ಲಿ ರಚನೆಗೊಂಡಿದೆ. ಬಣ್ಣಗಳ ಶ್ರೀಮಂತಿಕೆಯ ಅರ್ಥವಂತಿಕೆ ಅವುಗಳ ಸಾದೃಶ್ಯದ ಸಮ್ಮಿಳನದಿಂದ ನಿರೂಪಣೆಗೊಂಡು ಸಹೃದಯನನ್ನು ಸಹಜವಾಗಿಯೇ ಆಕರ್ಷಿಸುತ್ತದೆ.

೨. ಶಿಲುಬೆಯನ್ನೇರಿಸುವ ಚಿತ್ರ :

ಎಟ್ವೆರ್ಪ್ ಕೆಥೆಡ್ರಲ್ಲೊಂದರಲ್ಲಿ ಕ್ರಿ.ಶ. ೧೬೧೦ರಲ್ಲಿ ಬರೆದ 'ಶಿಲುಬೆಯನ್ನೇರಿಸುವುದು' ಎಂಬ ಭವ್ಯಚಿತ್ರ ೧೫ ಮತ್ತು ೧೧ ಅಡಿ ಗಾತ್ರದ್ದಿದೆ. ಈ ಚಿತ್ರದಲ್ಲಿ ಕಾಣಿಸುವ ಆಕೃತಿಗಳ ಯೋಜನೆ, ಲಯಗಾರಿಕೆ, ಬೆಳಕು ನೆರಳುಗಳ ಹಂಚಿಕೆ ಅಲ್ಲಲ್ಲಿ ತೋರಿಸುವ ಸ್ಪಷ್ಟ ವಿವರಗಳು ಭಾವಾವಿಷ್ಟ ಶೈಲಿಯ ಒಂದು ಉಜ್ವಲ ಉದಾಹರಣೆ ಎನ್ನಬಹುದು.[೮] ಕ್ರಿಸ್ತನನ್ನು ಶಿಲುಬೆಗೆ ಏರಿಸುವ ಸನ್ನಿವೇಶವನ್ನು ಈ ಚಿತ್ರದಲ್ಲಿ ಹೃದಯಂಗಮವಾಗಿ ಚಿತ್ರಿಸಲಾಗಿದೆ.

೩. ಡಿ ಕನ್‌ವ್ವರ್ಸೆನ್ ಆಪ್ ಸೇಂಟ್‌ಪಾಲ್ :
(The conversation of the St. Paual)

ಈ ಚಿತ್ರವು ೧೬೧೬ರಲ್ಲಿ ರಚನೆಗೊಂಡು 'ಸೈಲೆರನ್' ಎಂಬ ಸ್ಥಳದಲ್ಲಿ ಸಂಗ್ರಹಿಸಲ್ಪಟ್ಟಿದೆ. 'ಸೇಂಟ್ ಪಾಲ್‌ನ ಮಾತುಕತೆ'ಯ ಈ ತೈಲವರ್ಣದ ಕೃತಿ ಕುದುರೆಗಳ ಮೇಲೆ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಮಾತುಕತೆಗಳಲ್ಲಿ ಮಗ್ನರಾಗಿರುವ ಯೋಧರ ಚಿತ್ರವಿದು. ಅಲ್ಲದೆ ತನ್ನ ಕಾಲದ ರಾಜಕೀಯ ಜೀವನದ ಪ್ರತೀಕವಾಗಿ ಪ್ರಕಟಗೊಂಡ ಕೃತಿಯೂ ಕೂಡ. ಪ್ರಮಾಣಬದ್ಧವಾದ ಶಾರೀರಿಕ ವಿನ್ಯಾಸ ಅಂಗರಚನಾ ಶಾಸ್ತ್ರದ ತಾತ್ವಿಕ ಹಿನ್ನೆಲೆಯಿಂದ ಚಿತ್ರ ಪ್ರಭಾವಯುತವಾಗಿ ರೂಹುದಳೆದಿದೆ ಎನ್ನಬಹುದು.

೪. ಲ್ಯಾಂಡ್‌ಸ್ಕೇಪ್ ವಿತ್ ದಿ ಸಿಪ್‌ವ್ರಿಕ್ ಆಫ್ ಅ್ಯನಿಸ್ :
(Landscape with the shipwreck of Aenes)

೧೬೨೪ರಲ್ಲಿ ಸೃಷ್ಟಿಗೊಂಡ ನಿಸರ್ಗದ ಈ ಚಿತ್ರ ಮುರಿದ ಹಡಗದ ದುರಂತದ ವಾಸ್ತವ ಸನ್ನಿವೇಶವನ್ನು ಹೃದಯಂಗಮವಾಗಿ ಚಿತ್ರಸಲ್ಪಟ್ಟಿದೆ. ಈಗ ಬರ್ಲಿನ್ ಡೆಹೆಲಮ್‌ದ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲ್ಪಟ್ಟಿದೆ. ರೂಬಿನ್ಸ್‌ನು ನಿಸರ್ಗ ಚಿತ್ರ (ಲ್ಯಾಂಡಸ್ಕೇಪ್)ದ ಸುಪ್ರಿಮ್ ಮಾಸ್ಟರ್ ಎಂದು ಈ ಚಿತ್ರ ರುಜುವಾತು ಪಡಿಸುತ್ತದೆ. ಈ ಕೃತಿ ತೈಲವರ್ಣದಲ್ಲಿ ನಿರ್ಮಾಣಗೊಂಡು, ಪ್ರಕೃತಿಯ ಸಹಜ ಸೌಂದರ್ಯವನ್ನು, ನಿರ್ಜೀವತೆಯಲ್ಲಿಯೂ ಇಲ್ಲಿ ರೂಬಿನ್ಸ್ ಸಜೀವಗೊಳಿಸಿದ್ದಾನೆ. ಈ ಕೃತಿಯೂ ರೂಬಿನ್ಸ್‌ನ ನುರಿತ ಕೈಚಳಕಕ್ಕೆ ಸಾಕ್ಷಿಯಾಗಿದೆ.

೫. ಸಂಧಿಯ ಅನುಗ್ರಹಗಳು :

---

೮. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೮

೯. Paul J. Sachs : Great Drawings, Page-67

೧೬೨೯ರಲ್ಲಿ ಸ್ಪೈನ್ನಿನ ದೊರೆಯು ತನ್ನ ರಾಯಭಾರಿಯಾಗಿ ಈತನನ್ನು ಇಂಗ್ಲೆಂಡಿನ ರಾಜನ ಆಸ್ಥಾನಕ್ಕೆ ಕಳುಹಿಸಿದ. ರೂಬಿನ್ಸ್‌ನ 'ಸಂಧಿಯ ಅನುಗ್ರಹಗಳು' ಎಂಬ ತನ್ನ ಕೃತಿಯನ್ನು ಇಂಗ್ಲೆಂಡಿನ ರಾಜನಿಗೆ ಕಾಣಿಕೆಯಾಗಿ ಕೊಟ್ಟ. ಅದರಲ್ಲಿ ಜ್ಞಾನದೇವತೆಯು ಸುಖ ಸಮೃದ್ಧಿ, ಮತ್ತು ನಗುತ್ತಿರುವ ಮಕ್ಕಳನ್ನು ಆಹ್ವಾನಿಸುತ್ತಿರುವಂತೆಯೂ ಚಿತ್ರಿಸಿದ್ದು, ಅದು ಸ್ನೇಹಪೂರ್ಣ ಬಾಳ್ವೆಯಿಂದ ಉಭಯ ರಾಷ್ಟ್ರಗಳಿಗೂ ಸುಖ ಶಾಂತಿ ಲಭಿಸುವುದೆಂಬ ಸಂದೇಶವನ್ನು ಸಾರುತ್ತಿತ್ತು.[೧೦] ಈ ಕೃತಿಯಿಂದ ರೂಬಿನ್ಸ್‌ನ ಕೀರ್ತಿ ದೇಶದಾದ್ಯಂತ ಹರಡಿತಲ್ಲದೇ ಅವನೊಬ್ಬ ಸಮರ್ಥ ಚಿತ್ರಕಾರನೆಂಬ ಅಗ್ಗಳಿಕೆಯು ಪ್ರಾಪ್ತವಾಯಿತು.

೬. ಆಪೋಥೆಸಿಸ್ ಆಫ್ ಜೇಮ್ಸ್ : (Apotheses of Jemes)

೧೬೨೯ರಲ್ಲಿ ಚಿತ್ರಣಗೊಂಡ ಈ ಕೃತಿ ಸಸೆಕ್ಸ್ ಪ್ರದೇಶದ ಗ್ಲಾಂಡ ಅರಮನೆಯಲ್ಲಿ ಸಂಗ್ರಹಿಸಲ್ಪಟ್ಟಿದೆ. ಸ್ಟೂರ್ಟದ ರಾಜರ ಆಮಂತ್ರಣದ ಮೇರೆಗೆ ರಚಿಸಿದ ಈ ಚಿತ್ರ ಮೊದಲನೆಯ ಚಾರ್ಲ್ಸ್‌ನ ತಂದೆಯ ನೆನಪಿಗಾಗಿ, ಸೃಷ್ಟಿಗೊಂಡ ಅನೇಕ ಚಿತ್ರಗಳಲ್ಲಿ ಅತ್ಯುತ್ತಮ ಚಿತ್ರವೆಂದು ಪರಿಗಣಿಸಲ್ಪಟ್ಟಿದೆ. ಶ್ರೀಮಂತವಾದ ವರ್ಣಗಳ ಲಾಲಿತ್ಯದಿಂದ ಈ ವರ್ಣಕಲಾಕೃತಿ ಆಕರ್ಷಣೀಯವಾಗಿದೆ.

೭. ದಿ ಆಡೋರೇಶನ್ ಆಫ್ ದಿ ಕಿಂಗ್ಸ್ : (The Adoration of the kings)

೧೬೩೪ರಲ್ಲಿ ರಚನೆಗೊಂಡ ಈ ಚಿತ್ರವು ಕೂಡ ಆಳರಸರ ವತ್ತಾಸೆಗಾಗಿ ಸೃಷ್ಟಿಗೊಂಡಿರುವಂತಹದು. ಭೂಲೋಕ ಸ್ವರ್ಗಲೋಕದ ಕಲ್ಪನೆಯ ಹಿನ್ನೆಲೆಯಲ್ಲಿ ಸ್ವರ್ಗದಿಂದ ಆಗಮಿಸುತ್ತಿರುವ ಮಗುವಿನ ಚಿತ್ರವನ್ನು ರಾಜರುಗಳು ಆಹ್ವಾನಿಸುವ ಭಂಗಿಯಲ್ಲಿ ಇಲ್ಲಿ ಚಿತ್ರಿಸಲ್ಪಟ್ಟಿದೆ. ಈ ಚಿತ್ರದಲ್ಲಿ ರೆಕ್ಕೆ ಇರುವ ಮಕ್ಕಳು ಆಕಾಶದಲ್ಲಿ ಹಾರಾಡುವ ದೃಶ್ಯ ಮುಂತಾದ ಜಾನಪದೀಯ ಅಂಶಗಳು, ಕಾಲ್ಪನಿಕ ಸನ್ನಿವೇಶದಿಂದ ಮುಗುಳುನಗೆಯ ಮುಗ್ದಮಕ್ಕಳಿಂದ ಕೂಡಿದ ಈ ಕೃತಿ ಜನಪ್ರಿಯತೆಯನ್ನು ಗಳಿಸಿದೆ.

೮. ದಿ ಟೂರ್ನಾಮೆಂಟ್ : (The Tournament)

೧೬೩೫-೪೦ರ ಅವಧಿಯಲ್ಲಿ ತೈಲವರ್ಣ ಮಾಧ್ಯಮದಿಂದ ರಚಿಸಿದ ರೂಬಿನ್ಸ್‌ನ ಈ ಚಿತ್ರವು ಪ್ಯಾರಿಸ್‌ದ 'ಲೋರ' ಮ್ಯುಜಿಯಂದಲ್ಲಿ ಸಂಗ್ರಹವಾಗಿದೆ. ಅದ್ಭುತ ಗಾತ್ರದ ದೃಶ್ಯ ಹಾಗೂ ಭ್ರಮೆಯನ್ನುಂಟು ಮಾಡುವ ಬಾರೋಕ್ ಶೈಲಿಯ ಈ ಚಿತ್ರ ನೆದರ್‌ಲ್ಯಾಂಡ್ ಪ್ರದೇಶದ ನಿಸರ್ಗದ ರಮಣೀಯ ಚಿತ್ರವಾಗಿದೆ. ಇದು ಹೊಸ ರೂಪದ ಭಾವಪ್ರಚೋದನ ದೃಶ್ಯವಾಗಿದೆಯಲ್ಲದೆ ಇಲ್ಲಿ ಬಹು ವೇಗದಲ್ಲಿ ಓಡುತ್ತಿರುವ ಕುದುರೆ ಸವಾರಿಗಳ ಶೈಲಿಯನ್ನು ರೂಬಿನ್ಸ್ ಸೊಗಸಾಗಿ ಚಿತ್ರಿಸಿದ್ದಾನೆ.[೧೧] ಅತ್ಯಂತ ದೂರದ ದೃಶ್ಯಗಳನ್ನು ವಿಕ್ಷೀಸಿದಾಗ ನಿರೀಕ್ಷಿಕನನ್ನು ವಿಸ್ಮಿತರನ್ನಾಗಿಸುವ ಕಲಾಕೃತಿಯಿದಾಗಿದೆ.

---

೧೦. ಬಿ.ಪಿ. ಬಾಯರಿ : ನವ್ಯಕಲೆ ಹಾಗೂ ಕಲೆಗಾರರು, ಪುಟ-೬೭

೧೧. ಅಶೋಕ, ಟಿ. ಅಕ್ಕಿ : ಕಲಾಚರಿತ್ರೆ, ಪುಟ-೮೬

೯. ಕ್ರಿಸ್ತನ ಚಿತ್ರಗಳು :

ಕ್ರಿಸ್ತನನ್ನು ರೂಬಿನ್ಸ್‌ನಷ್ಟು ಕೋಮಲವಾಗಿ ಬೇರಾರೂ ಚಿತ್ರಿಸಿಲ್ಲ. ಶಿಲುಬೆಯ ಮೇಲಿನ ಕ್ರಿಸ್ತನ ಚಿತ್ರವನ್ನು, ಕ್ರಿಸ್ತನ ಮೃತದೇಹವನ್ನು ಶಿಲುಬೆಯಿಂದ ಇಳಿಸುತ್ತಿರುವ ದೃಶ್ಯವನ್ನು ಇಲ್ಲಿ ಉದಾಹರಿಸಬಹುದು. ದೇಹದ ವಿನ್ಯಾಸದಲ್ಲಿಯೇ ನೋಟಕನಿಗೆ ಕ್ರಿಸ್ತ ಅನುಭವಿಸುತ್ತಿರುವ ವೇದನೆಯ ಆಳ ಮನಸ್ಸಿಗೆ ತಟ್ಟುತ್ತದೆ ಕ್ರಿಸ್ತ ತಲೆ ಇಟ್ಟುಕೊಂಡಿರುವ ರೀತಿ ಕುಸಿದಿರುವ ದೇಹ ಎಲ್ಲಾ ಅದೇ ಪರಿಣಾಮ ಬೀರುತ್ತದೆ. ಚರ್ಚಿನ ವೇದಿಕೆಯ ಬೃಹತ್ ಚಿತ್ರಗಳ ರಚನೆಯಲ್ಲಿ ರೂಬಿನ್ಸ್ ಸಿದ್ಧಹಸ್ತನಾಗಿದ್ದ[೧೨]ನೆಂದು ಇದರಿಂದ ಸ್ಪಷ್ಟವಾಗುತ್ತದೆ. ರೂಬಿನ್ಸ್‌ನ ಕಲಾಕೃತಿಗಳು[೧೩] ಪಾಶ್ಚಿಮಾತ್ಯ ದೇಶಗಳ ಪ್ರಸಿದ್ಧ ಚಿತ್ರಸಂಗ್ರಹಾಲಯಗಳಲ್ಲಿ ಸಂಗ್ರಹಿಸಿರುವುದನ್ನು ಕಾಣಬಹುದಾಗಿದೆ.

ರೂಬಿನ್ಸ್‌ನ ಶೈಲಿ :

ಇವನು "ರೂಬಿನ್ಸ್ ದಂಪತಿಗಳು" ಎಂಬ ವರ್ಣಚಿತ್ರ ರಚಿಸಿದ ಅದು ಆತನ ಪ್ರಥಮ ಶೈಲಿಯ ಒಂದು ಕೃತಿಯೆನ್ನುತ್ತಾರೆ. ಆತನು ರಚಿಸಿದ "ಶಿಲುಬೆನ್ನೇರಿಸುವುದು" ಎಂಬ ಚಿತ್ರವು ಆತನ 'ಇಟಾಲಿಯನ್' ಶೈಲಿಯದು ಎಂದು ವರ್ಗೀಕರಿಸುತ್ತಾರೆ 'ಯೇಸುವನ್ನು ಶಿಲುಬೆಯಿಂದ ಕೆಳಗಿಳಿಸುವುದು' ಎಂಬ ಚಿತ್ರದಲ್ಲಿ ಉಜ್ವಲವರ್ಣ ಲಲಿತವಾದ ವಿನ್ಯಾಸಗಳ ದೆಸೆಯಿಂದ ಅದನ್ನು ಎರಡನೆಯ ಶೈಲಿಯ ಒಂದು ಉದಾಹರಣೆ ಎನ್ನುತ್ತಾರೆ. ತನ್ನ ದ್ವಿತೀಯ ಪತ್ನಿಯ ಸಹೋದರಿ ಸೊಸನ್ನಾ ಪಾರ್ಮೆಂಟಾ ಎಂಬುವಳ ಚಿತ್ರ ಮಾಡಿದ್ದ. ಅದರಲ್ಲಿ ಬಟ್ಟೆಯ ನಿರಿಗೆಗಳು ಪರಿಷ್ಕೃತವಾಗಿಲ್ಲ; ತಲೆಯ ಮೇಲಿನ ಉಡುಗೆಯ ಗರಿಯಲ್ಲಿ ಭಾರಿ ನಯಗಾರಿಕೆಯ ಸೂಕ್ಷ್ಮ ಕೆಲಸಗಳು ಕಾಣುತ್ತವೆ. ಇದು ಆತನ ಮೂರನೆಯ ಶೈಲಿಯ ಆರಂಭದ ನಮೂನೆಯವೆಂದು ಭಾವಿಸಲ್ಪಟ್ಟಿವೆ.[೧೪] ಹೀಗೆ ಆತನ ಕೃತಿಗಳಲ್ಲಿ ಕಾಲ ಕಳೆದಂತೆ ಸೂಕ್ಷ್ಮವಾಗಿ ಶೈಲಿಗಳು ಮಾರ್ಪಟ್ಟಿರುವುದನ್ನು ತಜ್ಞರು ಗುರುತಿಸುತ್ತಾರೆ.

"ಬಣ್ಣ ಬೆಳಕುಗಳನ್ನು ಚಲ್ಲಿ ಹಾರಿಸುವುದರಲ್ಲಿ ಈತನ ದುಂದುಗಾರಿಕೆ, ಮನಸ್ಸಿನಲ್ಲಿ ತುಂಬಿಕೊಂಡ ಭಾವಾವೇಶದ ಹುಚ್ಚು ಹೊಳೆಯ ಪರಿಣಾಮವೇ ಹೊರತು, ತನ್ನ ತಂತ್ರದಿಂದ ಯಾರನ್ನೋ ಯಾತಕ್ಕೋ ಕಣ್ಣು ಸೆಳೆಯುತ್ತಿದ್ದೇನೆ, ಅಥವಾ ಸೆಳೆಯಬೇಕು ಎನ್ನುವ ಲೆಕ್ಕಾಚಾರದಿಂದ ಬರೆದುವಲ್ಲ."[೧೫] ಎಂದು ಅಭಿಪ್ರಾಯ ಪಡುವ ಕಾರಂತರ ಈ ಮೇಲಿನ ಮಾತು ವಿಚಾರಣೀಯವಾಗಿದೆ. ರೂಬಿನ್ಸ್‌ನನ್ನು ನಾವು ಬಾರೋಕ್ ಯುಗದ ಕಲಾಕಾರನೆಂಬುದನ್ನು ಮರೆಯುವಂತಿಲ್ಲ. ಬಾರೋಕ್ ಕಲೆಯ ಲಕ್ಷಣಗಳು ಅವನ ಎಲ್ಲ ಕಲಾಕೃತಿಗಳಲ್ಲಿ

---

೧೨. ಜ್ಞಾನಗಂಗೋತ್ರಿ : ಕಲೆ ಮತ್ತು ಸಾಹಿತ್ಯ, ಸಂಪುಟ-೫ ಪುಟ-೫೩೭

೧೩. "All most all the older galleries, and most of the more recent ones, contain works attributed to Rubens. Which may be entirely autograph or more or less autograph workshop production. " (Peter and Linda Murray : A Dictionery of Art and Artists. Page-286)

೧೪. ಬಿ.ಪಿ. ಬಾಯರಿ : ನವ್ಯಕಲೆ ಹಾಗೂ ಕಲೆಗಾರರು, ಪುಟ-೬೯

೧೫. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೮

ಸ್ಪಷ್ಟವಾಗಿ ಇರುವದರಿಂದ ಭಾವಾವೇಶದ ದುಂದುಗಾರಿಕೆ, ಬೆಡಗು, ವೈಭವ, ಬಣ್ಣಗಳ ವಿನ್ಯಾಸದ ನೆರಳು ಬೆಳಕು ಕೆಲವು ಸಲ ಕೃತ್ರಿಮ ಎನ್ನಿಸುವಷ್ಟರ ಮಟ್ಟಿಗೆ ಕಲಾಕೃತಿಯಲ್ಲಿ ಬರುವುದು ಸಹಜವಾಗಿದೆ. ರೂಬಿನ್ಸ್‌ನ ಜೀವನ ಚರಿತ್ರೆಯಿಂದ ಅವನು ಜನಪ್ರಿಯ ಚಿತ್ರಕಾರನೆಂದು ನೂರಾರು ಕಲಾಕೃತಿಗಳು ಜನರಿಗೆ ಹಿಡಿಸುವ ರೀತಿಯಲ್ಲಿ ರಚಿಸಿಕೊಟ್ಟು ಅದರಿಂದ ಶ್ರೀಮಂತನಾಗುವದರೊಂದಿಗೆ ಒಳ್ಳೆಯ ಹೆಸರನ್ನು ಗಳಿಸುತ್ತಾನೆ. ಅಂದ ಮೇಲೆ ಅವನು "ಯಾರನ್ನು ಯಾತಕ್ಕೂ ಕಣ್ಣು ಸೆಳೆಯಬೇಕು ಎನ್ನುವ ಲೆಕ್ಕಾಚಾರದಿಂದ ಬರೆದುದಲ್ಲ" ಎಂಬ ಕಾರಂತರ ಮಾತು ಅಷ್ಟೊಂದು ಸಮಂಜಸವೆನಿಸಲಾರದು. ಕಾರಂತರ ಮಾತಿನಂತೆ ನಿಜವಾಗಿ ರೂಬಿನ್ಸ್ ಇದ್ದಿದ್ದರೆ ಅವನು ಶ್ರೀಮಂತನಾಗುವುದು ಒತ್ತಟ್ಟಿಗಿರಲಿ ಆಗಿನ ಪರಿಸರದಲ್ಲಿ ಆತ ಅಷ್ಟೊಂದು ದೊಡ್ಡ ಹೆಸರು ಮಾಡಲು ಸಾಧ್ಯವೆ ಇರುತ್ತಿರಲಿಲ್ಲ. ಇನ್ನೂ ಪ್ರತಿಯೊಬ್ಬ ಕಲಾವಿದನಿಗೆ ಯಾರೊಬ್ಬರ ಪ್ರಭಾವವಿರಲಿ ಇಲ್ಲದಿರಲಿ, ಕೆಲವು ಸಲ ಅನುಕರಣೆಯಿಂದ ಮಾಡಿದ ಕೃತಿಗಳಲ್ಲಿ ಸಹ ತನ್ನದೇ ಆದ ಒಂದು ವಿಶಿಷ್ಟತೆ ಅವನು ರಚಿಸಿದ ಕಲಾಕೃತಿಗಳಲ್ಲಿ ಇದ್ದೇ ಇರುತ್ತದೆ. ಆ ವಿಶಿಷ್ಟತೆಯನ್ನೇ ನಾವು ಶೈಲಿ ಅಥವಾ ತಂತ್ರವೆನ್ನಲೂಬಹುದು. ವಿಮರ್ಶಕರು ಕಲಾಕಾರನ ಈ ವಿಶಿಷ್ಟತೆಯನ್ನು ಗುರುತಿಸಬೇಕಾಗುತ್ತದೆ.

ರೂಬಿನ್ಸ್‌ನಿಗೆ ತನ್ನದೆ ಆದ ಕಲಾತಂತ್ರವಿದೆ; ಅವನು ರಚಿಸಿದ ಕಲಾಕೃತಿಗಳು ಜನರಿಗೆ ಪ್ರಿಯವೆನಿಸುವ ರೀತಿಯಲ್ಲಿ ರಚನೆಗೊಂಡಿವೆ. ಜನರು ಇಚ್ಛೆಪಟ್ಟಂತೆಯೂ ಆತ ಚಿತ್ರ ರಚಿಸಿದ್ದಾನೆ ಎಂಬುದನ್ನು ಗಮನಿಸಬೇಕಾಗುತ್ತದೆ.

"Rubins paintings deal with all kinds of subjects religious mythological and folk thems. They also included portriaits and landscapes his early style was a combination of carefully chosen elements fromthe old masters such as michelangelo, Raphael. Titian, Tintoerto, Veronese correvggio, Barocci, and his contmoraries.[೧೬] ತನ್ನ ಸಮಕಾಲೀನ ಕಲಾಕಾರರ ದಟ್ಟ ಪ್ರಭಾವವು ರೂಬಿನ್ಸ್ ಕಲಾಕೃತಿಗಳಲ್ಲಿ ಎದ್ದು ಕಾಣುತ್ತದೆ. "ರೂಬಿನ್ಸ್‌ನು ಮಾನವಾಕೃತಿಯ ಚಿತ್ರಗಳಲ್ಲಿ ಟಿಟಿನ್‌ನ ಪ್ರಖರವರ್ಣಗಳು ಮೈಕೆಲ್ ಎಂಜಿಲೋನ ಅಭಿವ್ಯಕ್ತಿಯ ವೇಗ ಮತ್ತು ಮೋಡಗಳ ವಿನ್ಯಾಸದ ಛಾಯೆ ಹಾಗೂ ಹಾರಾಡುವ ಹಿನ್ನೆಲೆಯ ಅರಿವೆಗಳು, ವೇರ್ನಿಜ ಕಲಾವಿದನ ತಂಪು ವರ್ಣಗಳು"[೧೭] ಹೀಗೆ ಅವನ ಶೈಲಿ ಹದಿನಾರು ಮತ್ತು ಹದಿನೇಳನೆಯ ಶತಮಾನದ ಕಲಾವಿದರ ಸಮ್ಮಿಶ್ರಣದ ಶೈಲಿಯೆನ್ನಬಹುದು.

ಆತ ಚಿತ್ರಿಸಿದ ಪೌರಾಣಿಕ ಕಥಾನಕದ ವ್ಯಕ್ತಿಗಳೇ ಆಗಲಿ ಚಾರಿತ್ರಿಕ ವ್ಯಕ್ತಿಗಳೇ ಆಗಿರಲಿ ದೇಹ ಸೌಷ್ಟವದಲ್ಲಿ, ಅಂಗಸೌಂದರ್ಯದಲ್ಲಿ, ಮತ್ತು ಉಡಿಗೆ ತೊಡಿಗೆಗಳ ಬೆಡಗಿನಲ್ಲಿ,

---

೧೬. Edith Tomory : Introduction to the History of Fine Arts in India and the West, Page-158

೧೭. Erwin O.Christensen:The History of Western Art, page-254.

ಒಂದು ಸಮುದ್ರ ಲೋಕದ ಆಕರ್ಷಣೀಯ ವ್ಯಕ್ತಿಗಳಾಗಿ ಕಾಣಿಸುತ್ತಾರೆ. ಪ್ರಾಯಶಃ ಇವನ ಚಿತ್ರಗಳಲ್ಲಿ ಕಂಡುಬರುವಷ್ಟು ವಿಭಿನ್ನ ರೀತಿಯ ಅಂಗಭಂಗಿಗಳೋ, ತುಮುಲಗಳೋ, ಭಾವೋನ್ಮಾದಗಳೋ, ಬಣ್ಣಗಳ ಬೆಡಗೋ ಇನ್ನಾರಲ್ಲೂ ಕಾಣಿಸುವುದಿಲ್ಲ ಎಂದರೆ ತಪ್ಪಾಗಲಾರದು.[೧೮] ಅಂತಹ ಮೋಹಕತೆ ಇವನ ಕಲಾಕೃತಿಗಳಲ್ಲಿ ಅಡಕವಾಗಿದೆ. ಇದನ್ನೇ ನಾವು ರೂಬಿನ್ಸ್‌ನ ವಿಶಿಷ್ಟತನವೆನ್ನಬಹುದು.

"ಕೆಲವರಿಗೆ ಆತನು ಬೈಬಲ್ ಮತ್ತು ಇತಿಹಾಸಗಳ ಘಟನೆಗಳನ್ನು ಚಿತ್ರಿಸಿದವನೆಂದೂ, ಇನ್ನೂ ಕೆಲವರಿಗೆ ಇತನು ಯುದ್ಧ, ಬೇಟೆ ಮತ್ತು ಪ್ರಕೃತಿ ದೃಶ್ಯಗಳ ಚಿತ್ರಗಾರ ಎಂದೂ, ಆತನ ಹೆಸರು ಕಿವಿಗೆ ಬಿದ್ದೊಡನೆ ಹೆಚ್ಚಾಗಿ ಜನ ಇಂದಿಗೂ ಓಹ್! ಆ ಗುಲಾಬಿ ವರ್ಣದ ಪುಷ್ಪ ಶರೀರದ ನಗ್ನ ಸುಂದರಿಯರ ಚಿತ್ರಗಾರ"[೧೯] ಎಂದು ತಕ್ಷಣ ಗುರುತಿಸುವಷ್ಟರಮಟ್ಟಿಗೆ ಅವನ ಕಲಾಕೃತಿಗಳ ಪ್ರಭಾವ ಜನರ ಮೇಲಾಗಿದೆ.


ರೂಬಿನ್ಸ್ 'He is called the kind of painters and the painters of kings each of Rubens paintings seems to mirror his happy red bloded active life. Everything his brush touched bagan to flow with sap and blossomed.[೨೦] ರೂಬಿನ್ಸ್ ಇಂಗ್ಲೆಂಡ್ ಮತ್ತು ಸ್ಪೇನ್ ನಡುವೆ ರಾಜಕೀಯ ಒಪ್ಪಂದ ಮಾಡಿಸಿ ಇಂಗ್ಲಂಡದ ಅರಸನ ಪೂರ್ಣ ಕೃಪೆಗೆ ಪಾತ್ರನಾರಿಂದ ಅರಸನು ಇವನಿಗೆ 'ಸರ್' (Sir) ಪದವಿ ಕೊಟ್ಟು ಸರದಾರನನ್ನಾಗಿ ಮಾಡಿ ಗೌರವಿಸಿದನು.[೨೧] ರೂಬಿನ್ಸ್‌ನ ಗೌರವಾರ್ಥ ಭಾರತ ಸರಕಾರದವರು ೧೯೭೮ರ ಏಪ್ರಿಲ್ ತಿಂಗಳಲ್ಲಿ ಆತನ ಚಿತ್ರವನ್ನು ಮುದ್ರಿಸಿದ ಅಂಚೆಯ ಚೀಟಿಯನ್ನು ಬಿಡುಗಡೆ ಮಾಡಿದರು.[೨೨] ರೂಬಿನ್ಸ್ ಬಾರೋಕ್ ಯುಗದ ಅದ್ವಿತೀಸಯ ಚಿತ್ರಕಲಾವಿದನಾಗಿ ಕಂಗೊಳಿಸಿದ್ದಾನೆ ಎನ್ನುವುದರಲ್ಲಿ ಎರಡು ಮಾತಿಲ್ಲ.

"ದೊಡ್ಡ ಕಲಾವಿದ, ಒಳ್ಳೆಯ ಸಂಸಾರಿಗ, ನಂಬಿಗಸ್ಥ ಗೆಳೆಯ, ಉದಾತ್ತ ಪ್ರತಿಸ್ಪರ್ಧಿ"[೨೩] ಎಂಬ ಮೊದಲಾದ ಹೆಸರುಗಳಿಂದ ಪ್ರಖ್ಯಾತನಾಗಿದ್ದ ರೂಬಿನ್ಸ್ ೧೬೪೦ ಮೇ ೩೦ನೇ ದಿನಾಂಕದಂದು ಈ ಲೋಕದಿಂದ ದೂರವಾದನು.

❑

---

೧೮. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೮೮
೧೯. ಬಿ.ಪಿ.ಬಾಯರಿ : ನವ್ಯಕಲೆ ಹಾಗೂ ಕಲೆಗಾರರು, ಪುಟ-೬೮
೨೦. Leonid Volynsky : Seven Days, Page-49
೨೧. ಕಲಮದಾನಿ ಗುರುರಾಯ : ಪಾಶ್ಚಿಮಾತ್ಯ ಕಲಾವಿದರು, ಪುಟ-೩೫
೨೨. ಬಿ.ಪಿ.ಬಾಯರಿ : ನವ್ಯಕಲೆ ಹಾಗೂ ಕಲೆಗಾರರು, ಪುಟ-೭೧
೨೩. Rubens remains one of the truly extrordinary figures in the history of painting : artist, diploma t man of letters. and collector of Art he is the sole credit for creating the northern baroque style, - Bernard Myers : 50 Great Artists, Page-94.



ii ರೆಂಬ್ರಾಂಟ್

೧೬೦೬–೧೬೬೯

ಹಾಲೆಂಡಿನ ಡಚ್ ಜನಾಂಗ ಕಲಾಜಗತ್ತಿಗೆ ತನ್ನದೇ ಆದ ಶೈಲಿಯನ್ನು ಧೀಮಂತ ಕಲಾವಿದರನ್ನು ನೀಡಿದೆ. ಕಲೆಯ ವಿವಿಧ ರಂಗಗಳಿಗೆ ಡಚ್‌ರು ಸಲ್ಲಿಸಿರುವ ಕಾಣಿಕೆ ಗಮನಾರ್ಹ, ಡಚ್ ಚಿತ್ರಕಲೆಯ ಇತಿಹಾಸವು ದೀರ್ಘವಾದದ್ದಲ್ಲ. ಆ ಚಿತ್ರಕಲೆ ಹಠಾತ್ತನೆ ಮೈದಳೆದು ಸುಮಾರು ನೂರುವರ್ಷಗಳ ಕಾಲ ಬಾಳಿ ಇದ್ದಕ್ಕಿದ್ದಂತೆಯೇ ಮರೆಯಾಯಿತು.[೧] ಹದಿನೇಳನೆಯ ಶತಮಾನದಲ್ಲಿ ಅನೇಕ ಮಂದಿ ಡಚ್ ಚಿತ್ರಕಾರರು ತಮ್ಮ ವಿಶಿಷ್ಟವಾದ ಕಾಣಿಕೆಯಿಂದ ಚಿತ್ರಕಲೆಯನ್ನು ಪುಷ್ಟೀಕರಿಸಿದ್ದಾರೆ. ಅವರಲ್ಲಿ ರೆಂಬ್ರಾಂಟ್ ಸುಪ್ರಸಿದ್ಧ, ಜಗದ್ವಿಖ್ಯಾತ ಈತನನ್ನು ಕುರಿತು ತಿಳಿದುಬರುವ ಸಂಗತಿಗಳನ್ನು ಹೀಗೆ ವಿವರಿಸಬಹುದು.

ಬಾಲ್ಯ ಜೀವನ : ಹಾಲೆಂಡಿನ ಲೆಡಿನ್ ನಗರದಲ್ಲಿ ಹಾರ್ಮೆನ್‌ಗ್ಯಾರಿಯಾನ್ ವ್ಯಾನ್‌ರಿನ್ ಹಾಗೂ ಕಾರ್ನೇಲಿಯಾ ದಂಪತಿಗಳಿಗೆ ೧೬೦೬ ಜುಲೈ ೧೫ರಂದು ರೆಂಬ್ರಾಂಟ್ ಜನಿಸಿದ. ನಾಲ್ಕು ಜನ ಸಹೋದರರು, ಒಬ್ಬಳು ಸಹೋದರಿ. ಎಲ್ಲರಿಗಿಂತ ಚಿಕ್ಕವನಾಗಿದ್ದ ರೆಂಬ್ರಾಂಟ್ ಹಿರಿಯರೆಲ್ಲರ ವಾತ್ಸಲ್ಯದಲ್ಲಿ ಬೆಳೆದನು. ತಂದೆ ಮಿಲ್ಲೊಂದರ (ಗಿರಣಿ) ಮಾಲಿಕ. ತನ್ನ ಮಗನನ್ನು ಚೆನ್ನಾಗಿ ಓದಿಸಿ ಉನ್ನತ ಮಟ್ಟದ ವ್ಯಕ್ತಿಯನ್ನಾಗಿ ಮಾಡಬೇಕೆಂದು ಬಯಸಿ, ರೆಂಬ್ರಾಂಟ್‌ನ ಶಿಕ್ಷಣಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಾನೆ. ರೆಂಬ್ರಾಂಟ್‌ನನ್ನು ಅವನ ಹದಿನಾಲ್ಕನೆಯ ವಯಸ್ಸಿನಲ್ಲಿ ಲೈಡನ್ನಿನ ವಿಶ್ವವಿದ್ಯಾಲಯದಲ್ಲಿ ಕಾಯ್ದೆ (law) ಅಭ್ಯಾಸಮಾಡಲು ಪ್ರವೇಶವನ್ನು ಕೊಡಿಸಿದ. ರೆಂಬ್ರಾಂಟ್‌ನಿಗೆ ಈ ಓದುವಿಕೆಯಲ್ಲಿ ಅಭಿರುಚಿ ಬೆಳೆಯಲಿಲ್ಲ ಅದಕ್ಕೆ ಬದಲಾಗಿ ಚಿತ್ರರಚನೆಯ ಕಡೆಗೆ ಆಸಕ್ತಿ ಹೆಚ್ಚಾಗಿದ್ದುದರಿಂದ ವಿಶ್ವವಿದ್ಯಾಲಯದ ಕಾಯಿದೆ ಶಿಕ್ಷಣಕ್ಕೆ ವಿದಾಯ ಹೇಳಿ ಕಲಾಶಿಕ್ಷಣಕ್ಕೆ ತಿರುಗಿದ. ಇದರಿಂದ ರೆಂಬ್ರಾಂಟ್‌ನ ತಂದೆ ಇವನ ಬಗ್ಗೆ ಕಂಡಿದ್ದ ಕನಸು ನುಚ್ಚುನೂರಾಯಿತು. ಈ ಸಂದರ್ಭದಲ್ಲಿ ತಂದೆ ಮಗನಿಗೆ ಸರಿಯಾದ ಬಾಂಧವ್ಯ ಉಳಿಯಲಿಲ್ಲ. ಹಟಬಿಡದ ರೆಂಬ್ರಾಂಟ್‌ನ ಛಲವಾದಿ ವ್ಯಕ್ತಿತ್ವಕ್ಕೆ ತಂದೆಯ ಮನಸ್ಸು ಕರಗಿತು. ಮತ್ತೆ ತಂದೆಯ ಪ್ರೀತಿ

೧. ಜ್ಞಾನಗಂಗೊತ್ರಿ : ಸಂಪುಟ-೫, ಪುಟ-೨೮೨

ಗಳಿಸಿ ಚಿತ್ರಕಲಾ ಅಧ್ಯಯನಕ್ಕೆ ಹೋಗಲು ಅನುಮತಿ ಪಡೆದು 'ಜಾಕೋಬ್ ವ್ಯಾನ್ ಸ್ವಾನೆನ್ನಬರ್ಗ್' ಎಂಬ ಕಲಾವಿದನಲ್ಲಿ ಆರು ತಿಂಗಳು ಶಿಷ್ಯವೃತ್ತಿಯನ್ನು ಕೈಕೊಂಡು ಚಿತ್ರ ರಚನೆಯ ಅಭ್ಯಾಸ ಮಾಡಿದ. ಹೆಚ್ಚಿನ ಕಲಾ ಶಿಕ್ಷಣಕ್ಕಾಗಿ ಹಾಲೆಂಡಿನ ದೊಡ್ಡ ನಗರವಾದ ಅಮ್‌ಸ್ಟರ್‌ಡ್ಯಂನಲ್ಲಿ ಖ್ಯಾತ ಚಿತ್ರಕಾರ 'ಪೀಟರ್ ಲಾಸ್ಟಮನ್' ಎಂಬ ಕಲಾಕಾರನಲ್ಲಿ ಮಾರ್ಗದರ್ಶನ ಪಡೆದನು. ಇಲ್ಲಿ ಉತ್ತಮ ಮಾರ್ಗದರ್ಶನ ಸಿಕ್ಕಿದುದರಿಂದ ಚಿತ್ರಕಲೆಯ ಒಳ್ಳೆಯ ಸಂಸ್ಕಾರವನ್ನು ಪಡೆಯುತ್ತಾನೆ.

ರೆಂಬ್ರಾಂಟ್ ವಿದ್ಯಾರ್ಥಿ ದೆಸೆಯಲ್ಲಿಯೇ ಚಿತ್ರರಚನೆಗೈಯಲು ಸುರುಮಾಡುತ್ತಾನೆ. ವಿಶಿಷ್ಟವಾದ ವರ್ಣವಿನ್ಯಾಸ ನೆರಳು ಬೆಳಕಿನ ಆಕರ್ಷಕ ಶೈಲಿಯಿಂದಾಗಿ ರೆಂಬ್ರಾಂಟ್‌ನ ಚಿತ್ರಗಳು ಶಾಸ್ತ್ರೀಯವಾದ ಅಧ್ಯಯನ ಮುಗಿಸುವಹೊತ್ತಿಗೆ ರೆಂಬ್ರಾಂಟ್‌ನನ್ನು ಕಲಾತಜ್ಞರು ಗುರುತಿಸಿದ್ದರು. ೧೬೨೫ರಲ್ಲಿ ತನ್ನೂರಾದ ಲೈಡನ್‌ಗೆ ಹಿಂತಿರುಗಿ ಬಂದು ಸ್ವತಂತ್ರವಾದ ರೀತಿಯಲ್ಲಿ ಕಲೆಯ ಕಾಯಕ ಕೈಕೊಂಡನು.

೧೬೩೧ರಲ್ಲಿ ರೆಂಬ್ರಾಂಟ್ ಮತ್ತೆ ಅಮ್‌ಸ್ಟಡ್ಯಾಮ್‌ಗೆ ಬಂದ. ಈ ವೇಳೆಯಲ್ಲಿ ಆತನ ಮನೆತನದ ಸ್ಥಿತಿ ಸರಿಯಿಲ್ಲದ್ದರಿಂದ ಆಮ್‌ಸ್ಟರ್ಡಮ್‌ನಲ್ಲಿ ತನಗೆ ಹೆಚ್ಚು ಜನ ಆಶ್ರಯದಾತರು ಸಿಗುವ ಭರವಸೆ ಹೊತ್ತು ಬಂದ ಅವನ ಆಶೆ ಇಲ್ಲಿ ನಿಜವಾಯಿತು. 'ಹೆಂಡ್ರಿಕ್ ವ್ಯಾನ್ ಎಲನ್ ಬೋರ್ಚ' ಎಂಬವನು ರೆಂಬ್ರಾಂಟ್‌ನಿಗೆ ಎಲ್ಲ ರೀತಿಯ ಸಹಾಯಸೌಲಭ್ಯಗಳನ್ನು ಒದಗಿಸಿಕೊಡುತ್ತಾನೆ. ರೆಂಬ್ರಾಂಟ್‌ನಿಗೆ ರೂಪದರ್ಶಿಯಾಗಿ ತನ್ನ ಸಂಬಂಧಿಕಳಾದ 'ಸಾಸ್ಕಿಯಾ' ಎಂಬ ಸುಂದರ ಹುಡುಗಿಯನ್ನು ಗೊತ್ತುಮಾಡಿದ. ಸುಂದರಿಯಾದ ಸಾಸ್ಕಿಯಾಳನ್ನು ರೆಂಬ್ರಾಂಟ್ ಪ್ರೀತಿಸಿ ೧೬೩೪ರಲ್ಲಿ ಮದುವೆಯಾದ. 'ಸಾಸ್ಕಿಯಾ' ತುಂಬಾ ಶ್ರೀಮಂತ ಮನೆತನದವಳಾದ್ದರಿಂದ ಅಪಾರವಾದ ಅವಳ ಆಸ್ತಿಯೂ ರೆಂಬ್ರಾಂಟ್‌ನಿಗೆ ಬಳುವಳಿಯಾಗಿ ಬಂದಿತು. ತನ್ನ ಚಿತ್ರಗಳ ಬೇಡಿಕೆಯೂ ಈಗ ಹೆಚ್ಚಾಯಿತು. ಹೀಗಾಗಿ ರೆಂಬ್ರಾಂಟ್‌ನಿಗೆ ಶ್ರೀಮಂತಿಕೆ ಬಹುಬೇಗನೆ ಬಂದುಬಿಟ್ಟಿತು. ಆಗ ಭವ್ಯವಾದ ಮನೆಯನ್ನು ಕೊಂಡುಕೊಂಡ. ತುಂಬಾ ದುಬಾರಿಯಾದ ವಸ್ತುಗಳನ್ನು ಖರೀದಿಸಿದ ಸಮಾಜದಲ್ಲಿ ಉನ್ನತಸ್ಥಾನ, ಗೌರವ, ಪ್ರತಿಷ್ಠೆಗಳು ಬರಲಾರಂಭಿಸಿದವು. ೧೬೩೪ರಿಂದ ೧೬೪೨ರ ವರೆಗಿನ ಎಂಟು ವರ್ಷಗಳು ರೆಂಬ್ರಾಂಟ್‌ನ ಬದುಕಿನಲ್ಲಿ ಸಂತೋಷದ ಕ್ಷಣಗಳು. ಈ ಅವಧಿಯಲ್ಲಿ ಒಂದಕ್ಕಿಂತ ಒಂದು ಕಲಾಕೃತಿಗಳು ಶ್ರೇಷ್ಠಮಟ್ಟದಲ್ಲಿ ನಿರ್ಮಾಣಗೊಂಡವು. ಈ ಅವಧಿ ರೆಂಬ್ರಾಂಟ್‌ನ ಜೀವನದಲ್ಲಿ ಅತ್ಯಂತ ಮಹತ್ವದ ಮತ್ತು ಸಂಕ್ರಮಣದ ಕಾಲವೆನ್ನಬಹುದು.

ರೆಂಬ್ರಾಂಟ್‌ನ ಕೀರ್ತಿ ಪಸರಿಸಿದಂತೆಲ್ಲ ಅವನ ಶಿಷ್ಯತ್ವ ವಹಿಸಲು ಕಲಾವಿದ್ಯಾರ್ಥಿಗಳು ಮುಗಿಬೀಳತೊಡಗಿದರು. ರೆಂಬ್ರಾಂಟ್ ತನ್ನ ಅನುಭವವನ್ನೆಲ್ಲ ಶಿಷ್ಯರಿಗೆ ಧಾರೆಯೆರೆದ. ಅವರಿಗೆ ಪಾಠ ಹೇಳುವಾಗ ರೆಂಬ್ರಾಂಟ್ ಸ್ವಂತಿಕೆಯನ್ನು ಮೈಗೂಡಿಸಿಕೊಳ್ಳಲು ಬೇರೆ ಬೇರೆ ಸ್ಥಳಗಳಲ್ಲಿ ಕುಳ್ಳಿರಿಸಿ ಸ್ವತಂತ್ರವಾಗಿ ಚಿತ್ರ ರಚಿಸಲು ಹೇಳುತ್ತಿದ್ದನಂತೆ. ಹೀಗೆ ಮಾಡುವುದರಿಂದ ಅವರವರ ವ್ಯಕ್ತಿತ್ವವನ್ನು ಕಾಯ್ದುಕೊಂಡು, ಬಂದು ತಮ್ಮ ಬುದ್ಧಿಗೆ ಚೈತನ್ಯ ತಂದು ಸ್ವತಂತ್ರರಾಗಿ ಯಾರನ್ನೂ ಅನುಸರಿಸದೇ ಚಿತ್ರ ಕಲೆಯಲ್ಲಿ ಪಾಂಡಿತ್ಯ

ಗಳಿಸುವರೆಂದು ರೆಂಬ್ರಾಂಟ್ ನಂಬಿದ್ದನು.[೨] ಇದರಿಂದ ರೆಂಬ್ರಾಂಟ್‌ನ ಅನೇಕ ಶಿಷ್ಯರು ಜಗದ್ವಿಖ್ಯಾತರಾದರು. ಇವರಲ್ಲಿ ಫರ್ಡಿನಾಂಡಬಾಲ್, ಗೊವರ್ಟಫ್ಲಿಂಕ್ ಮತ್ತು ಪಿಲಿಫ್‌ಕೊನಿಂಕ್ ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

ಕಷ್ಟದ ಕಾರ್ಮೋಡ : ಈತನ ಆನಂದಮಯ ಜೀವನದಲ್ಲಿ ವಿಧಿಗೆ ತಾಳ್ಮೆ ಇದ್ದಂತೆ ಕಾಣಲಿಲ್ಲ. ಮೂವರು ಮಕ್ಕಳಾದರೂ ಒಬ್ಬೊಬ್ಬರಾಗಿ ತೀರಿಹೋದರು. ೧೬೪೧ರಲ್ಲಿ ನಾಲ್ಕನೆಯ ಮಗು ಜನಿಸಿತು. 'ಟೈಟಸ್' ಎಂದು ಹೆಸರು. ಆದರೆ ಮರುವರ್ಷ ತಾಯಿ ಸಾಸ್ಕಿಯಾಳೇ ಮರಣ ಹೊಂದಿದಳು. ಕಷ್ಟಗಳು ಒಂಟಿಯಾಗಿ ಬರುವದಿಲ್ಲ ಎಂಬ ನಾಣ್ನುಡಿಯು ಈತನ ವಿಷಯದಲ್ಲಿ ನಿಜವಾಯಿತು.[೩] ಮಮತೆಯ ಮಡದಿಯ ನಿಧನದ ತರುವಾಯ ರೆಂಬ್ರಾಂಟ್‌ನ ತಾಯಿಯೂ ಮರಣವನ್ನಪ್ಪಿದಳು. ಈ ಸಂದರ್ಭದಲ್ಲಿಯೇ 'ರಾತ್ರಿಯ ಪಹರೆ' ಎಂಬ ಕೃತಿಯು ಕೂಡ ರೆಂಬ್ರಾಂಟ್‌ನನ್ನು ದುರ್ದೆಸೆಗೆ ಈಡು ಮಾಡಿತು.[೪]

ಸಾಸ್ಕಿಯಾಳ ನಿಧನದ ನಂತರ ಹೆನ್ರಿ ಸ್ಟೋಫಿಲ್ಸ್ ಎಂಬಾಕೆಯನ್ನು ವಿವಾಹವಾದ. ಅವಳು ಆತನ ಮನೆಗೆಲಸದವಳು. ಸೇವಕಿಯೊಡನೆ ಮದುವೆಯಾದುದನ್ನು ಪ್ರಥಮ ಪತ್ನಿಯ ಬಂದುಗಳು ಮೆಚ್ಚಲಿಲ್ಲ. ಆದುದರಿಂದ ಬಾಲಕ 'ಟೈಟಸ್'ನು ತಮ್ಮ ಪೋಷಣೆಯಲ್ಲಿ ಇರತಕ್ಕದ್ದೆಂದು ವಾದಿಸಿ ನ್ಯಾಯಾಲಯದಲ್ಲಿ ದಾವೆಮಾಡಿ ಈತನನ್ನು ಪೀಡಿಸಿದರು. ಆಕೆಯು ಒಳ್ಳೆಯ ಮನೆತನದವಳಲ್ಲವೆಂಬ ಕಾರಣದಿಂದ, ಆತನ ಕೆಲವು ಶ್ರೀಮಂತ ಗ್ರಾಹಕರು ಅವನ ಮೇಲೆ ಅಸಮಾಧಾನಪಟ್ಟರು. ಗಳಿಗೆ ಕ್ಷೀಣಿಸಿತು, ಸಾಲ ವಿಪರೀತವಾಯಿತು.[೫] ಸಮಾಜದ ಪ್ರತಿಷ್ಠಿತ ಜನರ ಅನಾದರದಿಂದಲೂ, ತನ್ನ ಸಂಸಾರದ ತಾಪತ್ರಯಗಳಿಂದಲೂ ರೆಂಬ್ರಾಂಟ್‌ನ ಆರ್ಥಿಕ, ಸ್ಥಿತಿದಿನದಿಂದ ದಿನಕ್ಕೆ ಕೆಡತೊಡಗಿತು. ಶ್ರೀಮಂತರ ಭಾವಚಿತ್ರಗಳನ್ನು ಬರೆಯುವ ಲಾಭದಾಯಕ ಉದ್ಯಮಗಳನ್ನು ಬಿಟ್ಟು ಭಿಕ್ಷುಕರ, ಸ್ಪೇನಿನಿಂದ ಗಡಿಪಾರಾಗಿ ಬಂದ ಬಡಜೀವಿಗಳ ಹಾಗೂ ತನ್ನಂತೆ ಕಷ್ಟಕ್ಕೆ ಈಡಾದವರ ಭಾವಚಿತ್ರಗಳನ್ನು ಕರುಣಾಜನಕವಾಗಿ ಬರೆಯಲಾರಂಭಿಸಿದನು. ಇದರಿಂದ ರೆಂಬ್ರಾಂಟ್‌ನ ಮನಸ್ಸಿಗೆ ತೃಪ್ತಿ ದೊರಕಿದರೂ ಆ ಚಿತ್ರಗಳ ಮಾರಾಟ ಅಷ್ಟಾಗಿ ಆಗಲಿಲ್ಲ. ಹಿದಿನೈದನೆಯ ಶತಮಾನದ ಡಚ್ಚರು ವಿಲಾಸಜೀವನ ವನ್ನು ಮೆಚ್ಚುತ್ತಿದ್ದರು. ಅವರು ಬಡತನವನ್ನು ಕಷ್ಟಕಾರ್ಪಣ್ಯಗಳನ್ನು ಚಿತ್ರಿಸುವ ಕೃತಿಗಳನ್ನು ಕೊಂಡುಕೊಳ್ಳುತ್ತಿರಲಿಲ್ಲ.[೬] ಈ ಗೊಂದಲದಿಂದಾಗಿ ಅವರ ಜನಪ್ರಿಯತೆ ಕುಗ್ಗಿತು. ದೊಡ್ಡಮನೆ, ಸಿರಿವಂತಿಕೆಯ ಬಾಳುವೆಗಳಿಂದಾಗಿ ಹಣ ನೀರಿನಂತೆ ಖರ್ಚಾಗುತ್ತಿದ್ದಿತು. ೧೬೫೦ರಲ್ಲಿ ರೆಂಬ್ರಾಂಟ್‌ನು ದಿವಾಳಿಯಾದ. ಅವನ ಮನೆಮಾರು ಚಿತ್ರಗಳೆಲ್ಲವೂ ಹರಾಜಾದವು.[೭]

---

೨. ಕಲಮದಾನಿ ಗುರುರಾಯ : ಪಾಶ್ಚಾತ್ಯ ಕಲಾವಿದರು, ಪುಟ-೪೭

೩. ಬಿ.ಪಿ. ಬಾಯರಿ : ಕಲೆಗಾರರ ಕತೆಗಳು, ಪುಟ-೨೮

೪. ಈ ಕೃತಿಯ ಕುರಿತು ಮುಂದೆ ವಿವರವಾಗಿ ಚರ್ಚಿಸಲಾಗಿದೆ.

೫. ಬಿ.ಪಿ. ಬಾಯರಿ : ಕಲೆಗಾರರ ಕತೆಗಳು, ಪುಟ-೨೯

೬. ರಜನಿ ಪ್ರಸನ್ : ರೆಂಬ್ರಾಂಡ್, ಪುಟ-೧೫

೭ ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೫೩೯

ದುಂದುಗಾರಿಕೆಯು ಎಲ್ಲ ಕಲಾವಿದರಲ್ಲಿಯಂತೆ ಇವನಲ್ಲೂ ಮನೆಮಾಡಿಕೊಂಡಿದ್ದರಿಂದ ಬಡತನ ಇವನ ಬೆನ್ನು ಬಿಡಲಿಲ್ಲ. ಅಂಧಶ್ರದ್ಧೆ ಪೂರ್ವಾಪರ ಪದ್ಧತಿಗಳು ಅಂಧಾನುಕರಣೆಗಳನ್ನು ರೆಂಬ್ರಾಂಟ್‌ನು ತೀವ್ರವಾಗಿ ಖಂಡಿಸುತ್ತಿದ್ದರಿಂದ ಅವುಗಳ ಅನುಯಾಯಿಗಳಿಗೂ ಇವನು ಬೇಡವಾದನು.[೮] ೧೬೫೭ರ ಒಳಗೆ ಮೂರು ಸಲ ಅವನ ಸ್ವಂತ ಕೃತಿಗಳ ಹರಾಜು ನಡೆಯಿತು. ಆದರೂ ಸಾಲ ತೀರಲಿಲ್ಲ. ಸಾಲಗಾರರು ಅವನಲ್ಲಿದ್ದ ಕೃತಿಗಳನ್ನಷ್ಟೇ ಒಯ್ದುದ್ದಲ್ಲದೆ ಮುಂದೆ ಬರೆಯುವ ಕೃತಿಗಳನ್ನೆಲ್ಲ ಅವರಿಗೆ ಒಪ್ಪಿಸಬೇಕೆಂದು ಕರಾರು ಮಾಡಿಕೊಡಬೇಕೆಂದರು. ಆದರೆ ರೆಂಬ್ರಾಂಟ್ ಸಹಿಹಾಕುವ ಮೊದಲು ಸಾಕ್ಷಿಯಾಳ ಮಾವ ಹೆಂಡ್ರಿಕ್ ಮತ್ತು ಮಗ ಟೈಟಸ್ ಮುಂದೆ ಬಂದು ರೆಂಬ್ರಾಂಟ್‌ನು ಬರೆಯಲಿರುವ ಕೃತಿಗಳನ್ನು ಮಾರುವ ಸಲುವಾಗಿ ಸಂಸ್ಥೆಯೊಂದನ್ನು ಸ್ಥಾಪಿಸಿ ರೆಂಬ್ರಾಂಟ್‌ನನ್ನು ಸಾಲ ತೆತ್ತವರ ಪೀಡೆಯಿಂದ ತಪ್ಪಿಸಿದರು.[೯] ರೆಂಬ್ರಾಂಟ್ ಗೌರವದ ವ್ಯಕ್ತಿಯಾಗಿದ್ದ ಕಾಲದಲ್ಲಿ ಮುಗಿಬೀಳುತ್ತಿದ್ದ ಶಿಷ್ಯಸಮುದಾಯ ಈಗ ರೆಂಬ್ರಾಂಟ್‌ನ ಸ್ಥಾನಮಾನಗಳು ಸೊರಗಿದಂತೆ, ಕರಗುತ್ತ ನಡೆಯಿತು. ಈ ಅಧಿಯಲ್ಲಿಯೇ ರೆಂಬ್ರಾಂಟ್‌ನ ಮನೆತನದ ಸರ್ವಭಾರವನ್ನು ಹೊತ್ತುಕೊಂಡು ಅವನನ್ನು ಚೆನ್ನಾಗಿ ಸಂರಕ್ಷಣೆ ಮಾಡುತ್ತಿದ್ದ ಎರಡನೆಯ ಹೆಂಡತಿಯು ಮರಣವನ್ನಪ್ಪಿದಳು. ೧೬೬೮ರಲ್ಲಿ ಬದುಕಿ ಉಳಿದಿದ್ದ ಒಬ್ಬನೇ ಮಗ 'ಟೈಟಸ್'ನಿಗೆ ಮದುವೆಯಾದ ಸುದ್ದಿ ಕೇಳಿ ರೆಂಬ್ರಾಂಟ್ ಮನದಲ್ಲಿಯೇ ಸಂತೋಷಪಟ್ಟ. ಮಗನ ಸುಂದರ ಸಂಸಾರವನ್ನು ಕೂಡ ಬಹುಕಾಲ ನೋಡುವ ಭಾಗ್ಯ ರೆಂಬ್ರಾಂಟ್‌ನಿಗೆ ಉಳಿಯಲಿಲ್ಲ. ತನ್ನ ಕೊನೆಗಾಲದಲ್ಲಿ ಊರಗೋಲಾಗಬೇಕಾಗಿದ್ದ ಪ್ರೀತಿಯ ಮಗ 'ಟೈಟಸ್' ಮದುವೆಯಾದ ಒಂದು ವರ್ಷದಲ್ಲಿಯೇ ಅಕಾಲ ಮೃತ್ಯುವಿಗೆ ಈಡಾದನು. ಆಗ 'ಟೈಟಸ್‌ನ ಹೆಂಡತಿ ತುಂಬು ಗರ್ಭಿಣಿ. ಸೊಸೆಯ ವೈಧವ್ಯತನ, ಮಗನ ಶೋಕ, ಹೆಂಡತಿಯ ಮರಣ, ಹೀಗೆ ಒಂದರ ಮೇಲೊಂದು ಆಘಾತಗಳನ್ನು ಇಳಿವಯಸ್ಸಿನ ರೆಂಬ್ರಾಂಟ್ ಧೈರ್ಯದಿಂದ ಸಹಿಸಿಕೊಳ್ಳಬೇಕಾಯಿತು.

ರೆಂಬ್ರಾಂಟ್‌ನ ಕಲಾಕೃತಿಗಳು : ರೆಂಬ್ರಾಂಟ್‌ನ ಕಲಾಕೃತಿಗಳ ಸಂಖ್ಯೆ ಅಪಾರವಾದುದಾಗಿದೆ. ಆತ ಬರೆದ ಕೊರೆಚಿತ್ರಗಳು-೩೦೦, ರೇಖಾಚಿತ್ರಗಳು-೨೦೦೦ ವರ್ಣಚಿತ್ರಗಳು-೭೦೦ ಇರುವುದು ಗೊತ್ತಾಗುತ್ತದೆ.[೧೦] ಇವುಗಳಲ್ಲಿ ಕೆಲವು ಕೃತಿಗಳ ಪರಿಚಯವನ್ನು ಮಾತ್ರ ಮಾಡಿಕೊಡಲಾಗಿದೆ.

೧. ಅಂಗರಚನಾ ವಿಜ್ಞಾನ ಪಾಠ (The Anatomy Lesson)

೨. ಬೀಸಣಿಕೆಯ ಜೊತೆ ಇದ್ದ ಹೆಣ್ಣುಮಗಳ ಚಿತ್ರ.

೩. ರಾತ್ರಿ ಪಹರೆ (ಕಾವಲು). (Night watchman)

೪. ಕುಳಿತುಕೊಂಡಿರುವ ಮುದುಕ

೫. ಹೋಮರ ಮತ್ತು ಅರಿಸ್ಟಾಟಲ್

---

೮. ಕಲಮದಾನಿ ಗುರುರಾಯ : ಪಾಶ್ಚಾತ್ಯ ಕಲಾವಿದರು, ಪುಟ-೪೮

೯. ರಜನಿ ಪ್ರಸನ್: ರೆಂಬ್ರಾಂಡ್, ಪುಟ-೧೬

೧೦. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೪೯

೬. ಹೆಣ್ಣುಮಗಳ ಸ್ನಾನದ ದೃಶ್ಯ.

೭. ಜಾನ್ ಶಿವಾಕ್ಸನ್ ಭಾವಚಿತ್ರ (Portrait of Jansiwax)

ಈ ಕೆಲವು ಕೃತಿಗಳ ಪರಿಚಯವನ್ನು ಇಲ್ಲಿ ವಿವರಿಸಲಾಗಿದೆ.

೧. ಅಂಗರಚನಾ ವಿಜ್ಞಾನ ಪಾಠ : ೧೬೩೨ರಲ್ಲಿ ಶಸ್ತ್ರವೈದ್ಯರಿಗಾಗಿ ರಚಿಸಿದ ಸಮೂಹ ಚಿತ್ರವಿದು. ಏಳು ಜನ ವೈದ್ಯರು ಶವದ ಸುತ್ತುವರಿದು ನಿಂತು ಅವಲೋಕಿಸುತ್ತಿದ್ದಾರೆ. ಡಾಕ್ಟರರೊಬ್ಬರು ಶವದ ಶಸ್ತ್ರಚಿಕಿತ್ಸೆಯ ವಿವರಗಳನ್ನು ತಿಳಿಸಿ ಹೇಳುವ ದೃಶ್ಯವನ್ನು ಈ ಚಿತ್ರ ಹೊಂದಿದೆ. ರೆಂಬ್ರಾಂಟ್‌ನು ಪ್ರಾರಂಭಿಕ ಹಂತದಲ್ಲಿ ಈಚಿಸಿದ ಈ ಕೃತಿ, ನಿರೀಕ್ಷೆ ಮೀರಿ ಪ್ರಸಿದ್ಧಿಯನ್ನು ಗಳಿಸಿತು. ರೆಂಬ್ರಾಂಟ್‌ನ ಕೀರ್ತಿ ದೇಶದಲ್ಲೆಲ್ಲಾ ಹಬ್ಬಿ ಮುಂದೆ ಎಂಟು ವರ್ಷಗಳವರೆಗೆ ಬಿಡುವಿಲ್ಲದಷ್ಟು ಗ್ರಾಹಕರು ರೆಂಬ್ರಾಂಟ್‌ನಿಂದ ಚಿತ್ರ ರಚಿಸಿಕೊಳ್ಳುವಂತಾಯಿತು. ಕಲಾಜಗತ್ತಿನಲ್ಲಿ ರೆಂಬ್ರಾಂಟ್‌ನ ಸ್ಥಾನ ಭದ್ರಪಡಿಸಿದ ಶ್ರೇಯಸ್ಸು ಅಂಗರಚನಾ ವಿಜ್ಞಾನದ ಈ ಚಿತ್ರಕ್ಕೆ ಸಲ್ಲುತ್ತದೆ. ಪ್ರತಿಯೊಬ್ಬರ ಮುಖದಲ್ಲಿರುವ ಹಾವಭಾವಗಳು. ವಿಷಯವೊಂದರ ರಹಸ್ಯವನ್ನು ಕುತೂಹಲಭರಿತರಾಗಿ ನೋಡುವ ವಿವಿಧ ಭಂಗಿಗಳು. ಸಜೀವ ವ್ಯಕ್ತಿಗಳ ಮಧ್ಯೆ ಬಿದ್ದಿರುವ ನಿರ್ಜೀವ ಶವ ಅದರಲ್ಲೂ ಪ್ರಮುಖವಾಗಿರುವ ವ್ಯಕ್ತಿಯ ಭಾವನಿರೂಪಣೆ ಇವು ಈ ಚಿತ್ರದ ಪ್ರಾಮುಖ್ಯತೆಯನ್ನು ಹೆಚ್ಚಿಸಿವೆ.

೨. ಬೀಸಣಿಕೆಯ ಜೊತೆ ಇದ್ದ ಹೆಣ್ಣುಮಗಳು : ೧೭೪೧ರಲ್ಲಿ ರಚನೆಗೊಂಡ ತೈಲವರ್ಣದ ಈ ಕೃತಿ ಆಕರ್ಷಕ ಕಲೆಗಾರಿಕೆಯ ವಾಸ್ತವ ಸನ್ನಿವೇಶದ ಕಲ್ಪನೆಯನ್ನು ಮಾಡಿಕೊಡುತ್ತದೆ. ಇದು ಬೀಸಣಿಕೆಯ ಜೊತೆಗಿರುವ ಡಚ್ಚ್‌ದ ರಾಜಕುಮಾರಿಯ ಭಾವಚಿತ್ರ. ಶ್ರೀಮಂತವರ್ಣಗಳಿಂದ ರಾಣಿಯ ಪೋಷಾಕುಗಳ ಕೌಶಲ್ಯ. ಚಮತ್ಕಾರಪೂರ್ವಕವಾದ ವೇಷಭೂಷಣಗಳ ಮಡಿಕೆಗಳು ಚಿತ್ರದಲ್ಲಿ ವಿಶೇಷ ಕಳೆಯಾಗಿವೆ, ರಾಣಿಯ ಮಂದಸ್ಮಿತವಾದ ಭಾವನೆಗಳು ಇಲ್ಲಿ ನವುರಾದ ರೀತಿಯಲ್ಲಿ ಮೂಡಿಬಂದಿವೆ. ಬೀಸಣಿಕೆಯಲ್ಲಿ ಕಾಣಿಸುವ ನಕ್ಷೆಗಳು, ಸೂಕ್ಷ್ಮವಾದ ವಿನ್ಯಾಸಗಳು ಕಲಾಕೃತಿಯಲ್ಲಿ ಕಲಾತ್ಮಕವಾಗಿ ಕಂಗೊಳಿಸುತ್ತವೆ.

೩. ರಾತ್ರಿ ಪಹರೆಯ ಕಾವಲುಗಾರ : ಪ್ರಸಿದ್ಧವಾದ ಈ ಕಲಾಕೃತಿಯೂ ೧೪.೫ ಅಡಿ ಉದ್ದ ೧೨ ಅಡಿ ಅಗಲದಲ್ಲಿ, ೧೬೪೨ರಲ್ಲಿ ಸೈನ್ಯಪಡೆಯ ಕ್ಯಾಪ್ಟನ್‌ನಾಗಿದ್ದ ಫ್ರಾನ್ಸ್‌ದ ಬ್ಯೂನಿಂಗ್‌ಕಾಖ್‌ನನ್ನು ಕುರಿತು ಕ್ಯಾನ್‌ವಾಸಿನಲ್ಲಿ ತೆಗೆದ ತೈಲವರ್ಣ ಚಿತ್ರವಿದು. ಈ ಚಿತ್ರ ಮುಂದೆ 'ನೈಟ್ ವಾಚ್' ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆಯಿತು. ರಾತ್ರಿ ಕಾವಲಿನ ಹದಿನೇಳು ಜನ ಸೈನ್ಯಾಧಿಕಾರಿಗಳು ಕೂಡಿ ತಮ್ಮೆಲ್ಲರ ಸಮೂಹ ಚಿತ್ರರಚನೆಗಾಗಿ ರೆಂಬ್ರಾಂಟ್‌ನಿಗೆ ಒಪ್ಪಿಸುತ್ತಾರೆ. ಅವರೆಲ್ಲರು ಸಮನಾಗಿ ಆ ಕಲಾಕೃತಿಯ ಮೊತ್ತವನ್ನು ಕೊಡಲು ನಿರ್ಧರಿಸುತ್ತಾರೆ. ಅದರಂತೆ ಸ್ವಲ್ಪ ಹಣವನ್ನು ಮುಂಗಡವಾಗಿ ಕೂಡಿಸಿ ಕೊಡುತ್ತಾರೆ.

ರೆಂಬ್ರಾಂಟ್‌ನಿಂದ ತುಂಬ ವೈಶಿಷ್ಟ್ಯಪೂರ್ಣವಾಗಿ ರಚನೆಗೊಂಡು ಬಂದ ಈ ಕೃತಿಯಲ್ಲಿ ಕ್ಯಾಪ್ಟನ್ ಮತ್ತು ಅವನ ಲೆಫ್ಟಿನೆಂಟರಿಗೆ ಮೊದಲಸ್ಥಾನ ಕೊಟ್ಟಿದ್ದ. ರಾತ್ರಿ ಪಹರೆಗೆ ಹೊರಟಿರುವ ಸೈನ್ಯದಳದ ಸಿದ್ಧತೆಯ ಸನ್ನಿವೇಶದಲ್ಲಿ ಉಳಿದ ಯೋಧರು ನಿರ್ದಿಷ್ಟವಾದ ಸ್ಥಾನಗಳಲ್ಲಿ

ನಿಂತಿರುವಂತೆ ಚಿತ್ರಿಸುತ್ತಾನೆ. ಬೆಳಕು ಕತ್ತಲೆಯ ಛಾಯೆಯ ಕಲಾತ್ಮಕ ವಿನ್ಯಾಸದಿಂದಾಗಿ, ಚಿತ್ರವು ರೆಂಬ್ರಾಂಟ್‌ನ ಕಲ್ಪನೆಯಂತೆ ಕೆಲವರ ಮೇಲೆ, ಉಜ್ವಲವಾದ ಬೆಳಕಿನ ವಿನ್ಯಾಸವಿದ್ದರೆ, ಇನ್ನು ಕೆಲವರ ಮೇಲೆ ಮಂದ ಪ್ರಕಾಶವನ್ನು, ಮತ್ತೆ ಕೆಲವರು ಅಸ್ಪಷ್ಟವಾಗಿ ಕತ್ತಲಲ್ಲಿ ನಿಂತಿರುವಂತೆ ಭಾಸವಾಗುತ್ತದೆ. ಈ ಚಿತ್ರವನ್ನು ನೋಡಿದ ಪಹರೆ ದಳದ ಕ್ಯಾಪ್ಟನ್ ಮತ್ತು ಲೆಫ್ಟಿನೆಂಟ್ ಕ್ಯಾಪ್ಟನ್ನರನ್ನು ಹೊರತುಪಡಿಸಿ ಉಳಿದವರೆಲ್ಲರೂ ತುಂಬಾ ಕೋಪಿತಗೊಂಡಿರುವ. ತಮ್ಮ ಮುಖಗಳು ಚೆನ್ನಾಗಿ ಕಾಣಿಸುತ್ತಿಲ್ಲ, ಕೆಲವರಿಗೆ ಮಾತ್ರ ಚಿತ್ರದಲ್ಲಿ ಪ್ರಾಮುಖ್ಯತೆಯಿದೆ ಎಂದು ಅಸಮಾಧಾನಪಟ್ಟರು. ಅಲ್ಲದೆ ತಮ್ಮ ತಮ್ಮ ಪಾಲಿನ ಹಣವನ್ನು ಕೊಡಲು ನಿರಾಕರಿಸಿದರು; ಬಹುಮೌಲ್ಯದ ಈ ಚಿತ್ರವು ರೆಂಬ್ರಾಂಟ್‌ನಲ್ಲೇ ಉಳಿಯಿತು. ಇದರಿಂದ ರೆಂಬ್ರಾಂಟ್‌ನ ಪ್ರತಿಷ್ಠೆಗೆ ಪೆಟ್ಟುಬಿದ್ದಿತಲ್ಲದೆ ಜನರಲ್ಲಿ ಅಪಪ್ರಚಾರವೂ ಆಯಿತು. ಕೆಲವು ಜನರ ತಿರಸ್ಕಾರದಿಂದ ಇವನ ಪ್ರಮುಖ ಗ್ರಾಹಕರು ಇವನಿಗೆ ವಿರೋಧವಾದರು. ರೆಂಬ್ರಾಂಟ್‌ನ ಗೌರವ ಪ್ರತಿಷ್ಠೆಗಳನ್ನು ಈ ಚಿತ್ರ ಕೆಡಿಸಿತಲ್ಲದೆ ಅವನ ಚಿತ್ರಗಳಿಗೆ ಬೇಡಿಕೆಯೂ ಕುಗ್ಗಿತು ರೆಂಬ್ರಾಂಟ್ ತನ್ನ ಪ್ರತಿಭೆಯನ್ನು ಸಮರ್ಥವಾಗಿ ಉಪಯೋಗಿಸಿಕೊಂಡು ಈ ಚಿತ್ರವನ್ನು ಒಂದು ದೃಶ್ಯಕಾವ್ಯವನ್ನಾಗಿ ನಿರ್ಮಿಸಿದ್ದ, ಆದರೆ ಆ ಕಾಲದಲ್ಲಿ ಅದರ ಮೌಲ್ಯವನ್ನು ಅರಿಯುವ ಜನರಿರಲಿಲ್ಲ. ಮುಂದೆ ಅದೊಂದು ಜಗತ್‌ವಿಖ್ಯಾತ ಚಿತ್ರವಾಗಿ ಪ್ರಸಿದ್ಧಿಯನ್ನು ಪಡೆಯಿತು. ರೆಂಬ್ರಾಂಟ್‌ನ ಜೀವನದಲ್ಲಿ ಈ ಕಲಾಕೃತಿಯಿಂದಾಗಿ ಅವನ ಕೀರ್ತಿ ಗೌರವಗಳು ಕುಗ್ಗುತ್ತ ಬಂದವು.

'ಅಮ್‌ಸ್ಟರಡಾಂ'ನ ರಿಚ್ ಕಲಾಸಂಗ್ರಹಾಲಯದಲ್ಲಿದ್ದ ಈ ಕಲಾಕೃತಿಯನ್ನು ೧೯೭೫ ಸೆಪ್ಟೆಂಬರ್ ೧೪ರಂದು ಒಬ್ಬ ಕುಕರ್ಮಿಯು ಚೂರಿಯಿಂದ ಅದನ್ನು ೧೩ ಚೂರುಗಳನ್ನಾಗಿ ಶೀಳುಮಾಡಿದನಂತೆ[೧೧] ಕಲಾವಿಮರ್ಶಕರು, ವ್ಯಕ್ತಪಡಿಸಿರುವ 'ನೈಟ್‌ವಾಚ್' ಕಲಾಕೃತಿ ಹದಿನೇಳನೆಯ ಶತಮಾನದ ಅಪರೂಪದ ಚಿತ್ರಗಳಲ್ಲಿ ಒಂದಾಗಿದೆ. ಎಂಬ ಅಭಿಪ್ರಾಯ ಈ ಚಿತ್ರದ ಘನತೆಯನ್ನು ಎತ್ತಿತೋರಿಸುತ್ತದೆ.

೪. ಕುಳಿತುಕೊಂಡಿರುವ ಮುದುಕ : ೧೬೫೨ರಲ್ಲಿ ತೈಲವರ್ಣದಲ್ಲಿ ನಿರ್ಮಾಣಗೊಂಡ ಈ ಕೃತಿ ಲಂಡನ್‌ದ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿದೆ. ರೆಂಬ್ರಾಂಟ್‌ನ ವರ್ಣವಿನ್ಯಾಸದ ಪರಿಪೂರ್ಣತೆಯನ್ನು ತೋರಿಸುವ ಚಿತ್ರಗಳಲ್ಲಿ ಈ ಕೃತಿಗೂ ಒಂದು ವಿಶಿಷ್ಟ ಸ್ಥಾನವಿದೆ. ಮುಪ್ಪಾವಸ್ಥೆಯಲ್ಲಿರುವ ಮುದುಕನೋರ್ವನು ತಲೆಗೆ ಕೈಹಚ್ಚಿ ಹತಾಶನಾಗಿ ಕುಳಿತುಕೊಂಡಿರುವ ದೃಶ್ಯ, ಸಹೃದಯನಲ್ಲಿ ಅನುಕಂಪದ ಭಾವನೆಯನ್ನು ಬೆಳೆಯಿಸುತ್ತದೆ. ಕಳೆದು ಹೋದ ತನ್ನ ಸಂತೋಷದ ದಿನಗಳನ್ನು ನೆನಪಿಸಿಕೊಳ್ಳುತ್ತಿರುವಂತಿದೆ. ಕಂದು ವರ್ಣದ ಬೆಂಕಿಯ ಬೆಳಕಿನ ವರ್ಣಗಾರಿಕೆಯಲ್ಲಿ ಮಿಂಚುವ ಮುದುಕನ ತೇಜೋಹೀನ. ಮುಖಕಾಂತಿ ಜೋತುಬಿದ್ದ ಮುಖದ ಚರ್ಮ, ನೆರೆತ ಕೂದಲುಗಳು ವಿಚಾರಮಗ್ನ ವ್ಯಕ್ತಿಯ ಮನದಳಲನ್ನು ಹೃದಯ ಸ್ಪರ್ಶಿಯಾಗಿ ಇಲ್ಲಿ ಪ್ರತಿಬಿಂಬಿಸುವುದನ್ನು ಕಾಣಬಹುದಾಗಿದೆ.

---

೧೧. ಬಿ. ಪಿ. ಬಾಯರಿ : ಕಲೆಗಾರರ ಕತೆಗಳು, ಪುಟ-೬೭

೫. ಹೋಮರ ಮತ್ತು ಅರಿಸ್ಟಾಟಲ್ : ೧೬೫೩ರಲ್ಲಿ ರಚಿಸಿದ ಈ ಚಿತ್ರದಲ್ಲಿ ಅರಿಸ್ಟಾಟಲ್ ಹೋಮರನ ಮೂರ್ತಿಶಿಲ್ಪವನ್ನು ಅಲೋಕಿಸುತ್ತಿರುವ ಹಾಗೆ ಚಿತ್ರಿಸಲಾಗಿದೆ. ರೆಂಬ್ರಾಂಟ್‌ನಿಗೆ ಕೀರ್ತಿ ಗಳಿಸಿಕೊಟ್ಟ ಚಿತ್ರಗಳಲ್ಲಿ ಈ ಚಿತ್ರವೂ ಒಂದು. 'ಅರಿಸ್ಟಾಟಲ್ ಹೋಮರನ ಎದೆಮೊಗದ (bust) ಮುಂದೆ ನಿಂತಂತೆ ಬರೆದ ಆ ಚಿತ್ರ ಪುರಾತನವಾದ ಗ್ರೀಕ್ ಕವಿಗಳನ್ನು, ದಾರ್ಶನಿಕರನ್ನು, ನಮ್ಮ ಮುಂದೆ ನಿಂತಂತೆ ಸಚೇತನವಾಗಿ ತಂದು ನಿಲ್ಲಿಸುತ್ತದೆ. ಆತ ಮಕ್ಕಳ ಭಾವಚಿತ್ರವನ್ನೇ ಬರೆಯಲಿ, ಮಡದಿಯ ಚಿತ್ರವನ್ನೇ ಬರೆಯಲಿ. ಅಲ್ಲಿ ಕಾಣಿಸಲಿರುವ ಒಂದು ಗಾಢಲಕ್ಷಣವೆಂದರೆ ಕೆಂಪು ಪ್ರಧಾನವಾದ ಕಂದು, ಕಡುಗಂದು ಹಿನ್ನೆಲೆಗಳನ್ನು ಬರೆದು ಆ ಹಿನ್ನೆಲೆಯಿಂದಲೇ ಹುಟ್ಟಿಬಂದಂತೆ ಕಾಣಿಸುವ ವ್ಯಕ್ತಿಗಳ ಮೈ ಮುಖಗಳನ್ನು ಉಜ್ವಲಬಣ್ಣ ಬೆಳಕುಗಳಿಂದ ತೋರಿಸುವ ಚಮತ್ಕೃತಿ, ನೆಳಲುಗಳಲ್ಲಿ ಹುದುಗಿಕೊಂಡ ಒಂದೊಂದು ವರ್ಣಛಾಯೆಯನ್ನು ಆತ ಗುರುತಿಸಿ ಬೆಳಕಿನ ವರ್ಣಛಾಯೆಗಳಿಗೆ ಪ್ರತಿಯಾಗಿ ಬಳಸುವ ಬಗೆ ಬೆಳಕು ನೆರಳುಗಳ ಯೋಜನೆಯಲ್ಲಿ ಅವನನ್ನು ಅಪ್ರತಿಮನನ್ನಾಗಿ ಮಾಡಿದೆ.[೧೨]

೧೯೬೧ರಲ್ಲಿ ನ್ಯೂಯಾರ್ಕಿನ ಮೆಟ್ರೊಪಾಲಿಟಿನ್ ಮ್ಯುಜಿಯಮ್ ೨೩,೦೦೦ ಡಾಲರುಗಳಿಗೆ ಈ ಚಿತ್ರವನ್ನು ಕೊಂಡಿತು. ಪ್ರತಿದಿನ ೨೪,೦೦೦ ಜನ ಅದನ್ನು ನೋಡಲು ಬರುತ್ತಾರೆ.[೧೩] ಎಂದರೆ ಅದರ ಪ್ರಸಿದ್ಧಿಯನ್ನು ಊಹಿಸಬಹುದಾಗಿದೆ.

೬. ಹೆಣ್ಣುಮಗಳ ಸ್ನಾನದ ದೃಶ್ಯ : ೧೬೫೪ರಲ್ಲಿ ತೈಲವರ್ಣದಲ್ಲಿ ಸೃಷ್ಟಿಗೊಂಡ ಸುಂದರವಾದ ಈ ಕೃತಿ ಸದ್ಯ ಪ್ಯಾರಿಸಿನಲ್ಲಿ ಲೋರ್ ಮ್ಯುಜಿಯಮ್‌ನಲ್ಲಿ ಸಂಗ್ರಹಗೊಂಡಿದೆ. ಸ್ನಾನಕ್ಕೆ ಹೋಗುವ ಸ್ತ್ರೀಯಳೋರ್ವಳ ನಗ್ನ ರೂಪದ ಈ ಚಿತ್ರದ ಆಕರ್ಷಣೆಯೆಂದರೆ ಬಂಗಾರ ವರ್ಣದ ಬಣ್ಣಗಳ ಹಿತಮಿತವಾದ ಬಳಕೆಯ ಬೆಳಕಿನ ಛಾಯೆಯಲ್ಲಿ ಆಕೆ ತನ್ನ ಅಂತರಂಗದ ಭಾವನೆಗಳನ್ನು ಹೊರಹಾಕುವಂತಿರುವುದು.

೭. ಜಾನ್ ಸಿವಾಕ್ಸನ ಭಾವಚಿತ್ರ : ೧೬೫೪ರಲ್ಲಿ ರಚನೆಗೊಂಡ ಈ ಭಾವಚಿತ್ರ ಅಮ್‌ಸ್ಟರಡಮ್ ಪಟ್ಟಣದ 'ಜಾನ್ ಸಿಕ್ಸ್' ಎಂಬಲ್ಲಿ ಸಂಗ್ರಹಿಸಿಡಲಾಗಿದೆ. ಪಟ್ಟಣ ಶೆಟ್ಟಿಯ (Burgo master) ಈ ಭಾವಚಿತ್ರದಲ್ಲಿ, ಲೌಕಿಕದಲ್ಲಿ ಯಶಸ್ಸನ್ನು ಗಳಿಸಿದ ಈ ಶ್ರೀಮಂತ ನಾಗರಿಕ ಮುಖ ಅಲೌಕಿಕವನ್ನೆಲ್ಲ ಮರೆತು ಅಂತರ್ಮುಖಿಯನ್ನಾಗಿ ಮಾಡಿ ತೋರಿಸುತ್ತದೆ. ವ್ಯಕ್ತಿಗಳ ಬಾಹ್ಯರೂಪ ಅವರ ಅಂತರಂಗವನ್ನು ಬಿಂಬಿಸಿದಾಗಲೇ ಕಲೆಯಾದೀತು[೧೪] ಎಂಬ ಸೂತ್ರವನ್ನು ಈ ಚಿತ್ರ ಸಾರುತ್ತದೆ.

೮. ಕೊರೆ (ಎಚ್ಚಿಂಗ್) ಚಿತ್ರಗಳು : ರೆಂಬ್ರಾಂಟ್ ರೇಖಾ, ವರ್ಣಚಿತ್ರದಂತೆ ಮೂರುನೂರಕ್ಕೂ ಮಿಕ್ಕಿ ಕೊರೆ ಚಿತ್ರಗಳನ್ನು ರಚಿಸಿದ್ದಾನೆ. ಈತ ರೇಖಾವಿನ್ಯಾಸದ ಮರ್ಮವನ್ನು ಕಂಡುಹಿಡಿದಿದ್ದ. ರೆಂಬ್ರಾಂಟ್‌ನ ಕೊರೆ ಚಿತ್ರಗಳು ಹಾಗೂ ತಾಮ್ರದ ತಗಡಿನ ಮೇಲೆ ಮೊನಚಾದ

---

೧೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೯

೧೩. ಜ್ಞಾನಗಂಗೋತ್ರಿ : ಕಲೆ ಮತ್ತು ಸಾಹಿತ್ಯ ಸಂಪುಟ-೫, ಪುಟ-೫೯

೧೪. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೦

ಲೋಹದಕಡ್ಡಿ ಯಿಂದ ಗೀರಿ ಬರೆದ (ಎನ್‌ಗ್ರೇವ್ಹಿಂಗ್) ರೇಖಾಚಿತ್ರಗಳು ಉತ್ಕೃಷ್ಟ ಕೃತಿಗಳಾಗಿವೆ. ಸೂಕ್ಷ್ಮವಾದ ಗೆರೆಗಳಿಂದ ನೆರಳು-ಬೆಳಕುಗಳ ಹಂಚಿಕೆಯನ್ನು ವಿಚಾರಪೂರ್ವಕವಾಗಿ ಯೋಚಿಸಿ ಮುಖ್ಯಭಾಗ ವನ್ನು ಸ್ಪಷ್ಟವಾಗಿಯೂ, ಮಿಕ್ಕುಳಿದ ಜಾಗವನ್ನು ಅಸ್ಪಷ್ಟವಾಗಿಯೂ ತೋರುವಂತೆ ಕೊರೆದು ತಾನೆ ಮುದ್ರಿಸುತ್ತಿದ್ದ. ಉದಾಹರಣೆಗೆ ಏಸುಕ್ರಿಸ್ತ ರೋಗಪೀಡಿತರನ್ನು ಹರಸಿ ಗುಣಪಡಿಸುವ ಒಂದು ದೃಶ್ಯ : ಇಲ್ಲಿ ನೆರೆದ ರೋಗಪೀಡಿತರ ಗೋಳು, ದಯಾಮಯಿಯಾದ ಕ್ರಿಸ್ತನು ವ್ಯಕ್ತಪಡಿಸುವ ಮರುಕ, ಕತ್ತಲು ಕವಿದ ಹಿನ್ನೆಲೆಯಲ್ಲಿ ಸೇರಿದ ಅಸಹಾಯಕ ಜನಸಮುದಾಯ, ಮೇಲೆ ಒಂದೆಡೆ ತೇಲುತ್ತಿರುವ ಆಶಾಜನಕ ಬಿಳಿಮುಗಿಲು, ಇವೆಲ್ಲವನ್ನು ವೀಕ್ಷಿಸಿದಾಗ ಚಿತ್ರಕಾರನು ತಾನೇ ಮೂರ್ತಿವತ್ತಾಗಿ ಕ್ರಿಸ್ತನ ಸ್ಥಾನದಲ್ಲಿ ನಿಂತಂತೆಯೂ ಸರ್ವರ ಗಮನ ಆತನೆಡೆಗೆ ಇರುವಂತೆಯೂ ಭಾಸವಾಗುವುದು.

ರೆಂಬ್ರಾಂಟ್‌ನ ಸೂಕ್ಷ್ಮವಾದ ರೇಖಾಜಾಲಕ್ಕೆ ಸ್ವಚ್ಛಂದವಾದ ಬಣ್ಣಗಾರಿಕೆಯನ್ನು ಅವನ ಕೊರೆ ಚಿತ್ರಗಳಲ್ಲಿ ಕಾಣಬಹುದು. ಈ ಕೊರೆಚಿತ್ರಗಳ ರೇಖೆಗಳು ಅಷ್ಟೊಂದು ಸೂಕ್ಷ್ಮ: ಅವು ತೋರಿಸುವ ಬೆಳಕು ನೆರಳುಗಳ ಹಂಚಿಕೆಯೂ ಕೂಡ ಅಷ್ಟೊಂದು ಸ್ಪಷ್ಟ. ಅಂತಹ ಚಿತ್ರಗಳಲ್ಲಿ ಬರುವ ನೂರಾರು ವ್ಯಕ್ತಿಗಳ ಆಕೃತಿಗಳಲ್ಲಿ ವ್ಯಕ್ತಿಗತ ಬಾಹ್ಯರೇಖೆಗಳನ್ನು ತೋರಿಸಿದರೂ, ತೋರಿಸದಿದ್ದರೂ ಅವುಗಳ ಅಂಗವಿನ್ಯಾಸ ವಿವರಗಳ ಭಾವ ಅಷ್ಟೇ ಸ್ಪಷ್ಟವಾಗಿ ಕಾಣುತ್ತೇವೆ.[೧೬] ಹೀಗಾಗಿ ಒಂದು ರೀತಿ ರೆಂಬ್ರಾಂಟ್‌ನು ರೇಖೆಗಳ ಮಾಯಾಜಾಲದಿಂದ ಪ್ರೇಕ್ಷಕರನ್ನು ಮುಗ್ಧಗೊಳಿಸುವ ತಂತ್ರವನ್ನು ಆತ ಕರಗತಮಾಡಿಕೊಂಡಿದ್ದ, ರೆಂಬ್ರಾಂಟ್‌ನ ಹೊಸ ಹೊಸ ಪ್ರಯೋಗಗಳಿಗೆ ಈ ಕೊರೆಚಿತ್ರಗಳನ್ನು ಉದಾಹರಿಸಬಹುದಾಗಿದೆ.

ಸ್ವಚಿತ್ರಗಳು : ರೆಂಬ್ರಾಂಟ್‌ನು ಚಿತ್ರಿಸಿರುವ ಅನೇಕ ಭಾವಚಿತ್ರಗಳಲ್ಲಿ ಕನ್ನಡಿಯನ್ನು ಮುಂದುವರಿಸಿಕೊಂಡು ಬರೆದ ಸ್ವಚಿತ್ರಗಳು ಸಾಕಷ್ಟಿವೆ. ಬಾಲ್ಯದಿಂದ ವೃದ್ಧಾಪ್ಯದ ತನಕ ಬರೆದ ಸ್ವಚಿತ್ರಗಳಲ್ಲಿ ಕಾಲಕಾಲಕ್ಕೆ ಬದಲಾವಣೆಯಾಗುವ ಮುಖಚರ್ಯೆಯ, ವಿವಿಧ ಹಂತಗಳನ್ನು ಇಲ್ಲಿ ಕಾಣಬಹುದು. ಯಾರದೇ ಭಾವಚಿತ್ರ ಇರಲಿ, ರೆಂಬ್ರಾಂಟ್‌ನು ಅವರವರ ಬಾಹ್ಯರೂಪವನ್ನಷ್ಟೇ ಕ್ಯಾಮರಾ ಕಾಣುವ ರೀತಿಯಲ್ಲಿ ಇದ್ದಕ್ಕಿದ್ದಂತೆ ತೋರಿಸಿ ಸಂತುಷ್ಟ ನಾಗುತ್ತಿರಲಿಲ್ಲ. ಅವನು ಬರೆದ ವ್ಯಕ್ತಿಚಿತ್ರಗಳು ಅವರವರ ಬಾಹ್ಯರೂಪದ ಜೊತೆಗೆ ಅವರವರ ಅಂತರಂಗವನ್ನು ಪ್ರತಿಬಿಂಬಿಸುತ್ತದೆ. ತನ್ನ ಕಲಾಕೌಶಲ್ಯದಿಂದ ಬೆಳಕು ನೆರಳುಗಳ ಸಂಯೋಜನೆ ಯನ್ನು ಲೀಲಾಜಾಲವಾಗಿ ರಚಿಸುವುದು, ಕಂದುಬಣ್ಣದ ಹಿನ್ನೆಲೆಯಿಂದ ತೇಜೋಮಯ ಮುಖಬಿಂಬಗಳು ಮೂಡಿಬರುವಂತೆ ತೋರಿಸುವುದು; ಹಾಗೂ ತನ್ನ ಕೃತಿಗಳು ಜೀವಕಳೆಯಿಂದ ಪ್ರಭಾವಿತವಾಗುವಂತೆ ರಚಿಸುವುದು ರೆಂಬ್ರಾಂಟ್‌ನ ವೈಯಕ್ತಿಕ ಹಿರಿಮೆಯಾಗಿದೆ.[೧೭] ರೆಂಬ್ರಾಂಟ್ ತನ್ನ ಚಿಕ್ಕವಯಸ್ಸಿನಿಂದ ಮುಪ್ಪಾವಸ್ಥೆಯವರೆಗೆ ರಚಿಸಿದ ಸ್ವಚಿತ್ರಗಳ ಸಂಖ್ಯೆ ಸುಮಾರು ನೂರರಷ್ಟಿರುವುದು. ಜಗತ್ತಿನ ಬಹುಶಃ ಯಾವ ಪ್ರಸಿದ್ಧ ಚಿತಕಾರನೂ ಇಷ್ಟು ದೊಡ್ಡ

---

೧೫. ರಜನಿ ಪ್ರಸನ್ನ : ರೆಂಬ್ರಾಂಟ್, ಪುಟ-೧೭

೧೬. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೦

೧೭. ರಜನಿ ಪ್ರಸನ್ನ : ರೆಂಬ್ರಾಂಡ್, ಪುಟ-೮-೧೦

ಪ್ರಮಾಣದಲ್ಲಿ ಸ್ವಚಿತ್ರಗಳನ್ನು ರಚಿಸಿರಲಾರರು ಎಂದರೆ ತಪ್ಪಾಗಲಾರದು. ಕೆಲವು ಸಲ ಅವನು ಚಿತ್ರ ಬಿಡಿಸುವ ಆಕಾಂಕ್ಷೆಯಾದಾಗ, ರೂಪದರ್ಶಿಗಳು ಲಭ್ಯವಾಗದಿದ್ದರೆ ಅನಿವಾರ್ಯವಾಗಿ ತನ್ನನ್ನೇ ತಾನು ಚಿತ್ರಿಸಿಕೊಂಡಿದ್ದಾನೆ. ರೆಂಬ್ರಾಂಟ್‌ನ ಜೀವನದಲ್ಲಾದ ಬದಲಾವಣೆಗಳನ್ನು ಅವನ ಸ್ವಚಿತ್ರಗಳ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ.

Rembrandt's keen eye penetrates deeper and deeper into life, distinguishing with greater and grater clarity what is primary from what is secondary, what is true from what is merely the appearance of truth.[೧೮] ಎಂಬುದನ್ನು ರೆಂಬ್ರಾಂಟ್ ಚೆನ್ನಾಗಿ ತಿಳಿದುಕೊಂಡಿದ್ದನಾದರೂ ಆತ ಸೋಲನ್ನು ಅನುಭವಿಸಿದ. ಕಾರಣ ತನ್ನ ಕಾಲದ ಜನರ ಅಭಿರುಚಿಗನುಗುಣವಾಗಿ ಚಿತ್ರ ರಚಿಸಿಲ್ಲವೆಂಬ ವಿಮರ್ಶಕರ ಟೀಕೆಗೂ ಗುರಿಯಾಗಿದ್ದಾನೆ.[೧೯] ರೆಂಬ್ರಾಂಟ್‌ನ ಕೃತಿಗಳಲ್ಲಿ ಗಮನ ಸೆಳೆಯುವ ಅಂಶವೆಂದರೆ ಮಾನವರ ಬಗೆಗೆ ಅವನ ಕರುಣೆ. ಮಾನಸಿಕ ಹೊಯ್ದಾಟಗಳ ಬಗೆಗೆ ಅಪಾರ ತಿಳಿವಳಿಕೆ ಅವನ ಚಿತ್ರಗಳನ್ನು ನೋಡಿದರೆ ಶೇಕ್ಸ್‌ಪೀಯರನ ನಾಟಕವನ್ನು ನೋಡಿದಂತೆ. ಅವುಗಳಲ್ಲಿ ಮನುಷ್ಯನಿಗೆ ಸಹಜವಾದ ದುರ್ಬಲತೆ, ಆಸೆ, ನಿರಾಸೆಗಳು, ತಲ್ಲಣ-ಧೈರ್ಯೋತ್ಪನ್ನಗಳು, ಮೊದಲಾದ ನಾನಾ ಭಾವಗಳ ಚಿತ್ರಣವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮಾನವ ಬದುಕಿನ ಹಿರಿಮೆಯ ಸಂದೇಶ ಆ ಚಿತ್ರಗಳಲ್ಲಿ ಅಡಕವಾಗಿದೆ.[೨೦] His personal misfortunes and the depressing awarness of his isolation in the field of art, which canbe traced in some of his self-portraits, must have seriously affected Rembrondt, since the subjectivge, emotional element has always been of tremendous importance in his work. INaddition, the social history of Halland and certain changes in the spirtual climate of the mid seventeenth century had deply infuenced his art, although his personages and their fates show ho direct affinity with Dutch social realites.[೨೧] ಇವನ ಕೃತಿಗಳಲ್ಲಿ ಆದ ಬದಲಾವಣೆಯನ್ನು ಇಲ್ಲಿ ಕಾಣಬಹುದು.

ಡಚ್ ಕಲಾವಿದರು ಹೆಚ್ಚಾಗಿ ಒಂದೊಂದು ಬಗೆಯ ವರ್ಣಗಾರಿಕೆಯಲ್ಲಿ ವಿಶೇಷ ನೈಪುಣ್ಯತೆಯನ್ನು ಹೊಂದಿರುತ್ತಿದ್ದರು. ಆದರೆ ರೆಂಬ್ರಾಂಟ್ ಹಲವಾರು ವಿಧದ ವಿಷಯ

---

೧೮. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೩೭

೧೯. (Rembrand imbued his paintings with such drama "says conelius kelk" That the city fathers soon removed the panedl from the town hall : it was an impassioned qripping work and did not in the least conform to current raste" - Lenonid Volysky : Sevendays, Page-44.

೨೦. ಜ್ಞಾನಗಂಗೋತ್ರಿ : ಕಲೆ ಮತ್ತು ಸಾಹಿತ್ಯ : ಸಂಪುಟ-೫, ಪುಟ-೫೩೮

೨೧. Xenia Yegorova : Master of world painting Rembrandt, Page-10

ವೈವಿಧ್ಯತೆಯನ್ನು ಹೊಂದಿದ ಕಲಾವಿದ. ಪ್ರಕೃತಿಯ ದೃಶ್ಯಗಳು, ಧಾರ್ಮಿಕ ದೃಶ್ಯಗಳು, ಸಾಮಾನ್ಯ, ಜನಜೀವನ ಪೌರಾಣಿಕ ಸನ್ನಿವೇಶಗಳು, ಗ್ರೀಕ್ ರೋಮ್‌ನ ವ್ಯಕ್ತಿಗಳ ಚಿತ್ರಗಳು ಹೀಗೆ ಎಲ್ಲ ಬಗೆಯ ಚಿತ್ರಣಗಳಲ್ಲಿ ರೆಂಬ್ರಾಂಟ್ ಸಿದ್ಧಹಸ್ತನಾಗಿದ್ದನೆಂದು ಹೇಳಬಹುದು.

ರೆಂಬ್ರಾಂಟ್‌ನ ಶೈಲಿ : ಈತನು ಕೃತಿರಚನೆಗಳಲ್ಲಿ ಅನುಸರಿಸಿದ ಶೈಲಿಯೇ ಚಮತ್ಕಾರದ್ದು. ಮೈಕೆಲ್ ಎಂಜಿಲೋ ಮೊದಲಾದ ಕಲಾವಿದರ ಚಿತ್ರಗಳಲ್ಲಿ ತೋರುವಂತೆ ಈತನ ಕೃತಿಗಳಲ್ಲಿ ಗೆರೆಗಳು ಇದ್ದಂತೆಯೇ ಕಾಣಿಸುವುದಿಲ್ಲ. ಪದಾರ್ಥಗಳ ದಪ್ಪ ಗಾತ್ರಗಳನ್ನು ತಿಳಿಯಪಡಿಸಲು ಕಲಾವಿದರು ಬೆಳಕು ನೆರಳುಗಳನ್ನು ಬಳಸುತ್ತಾರೆ. ರೆಂಬ್ರಾಂಟ್‌ನು ಬೆಳಕನ್ನು ಅಷ್ಟಕ್ಕಾಗಿ ಮಾತ್ರ ಉಪಯೋಗಿಸಲಿಲ್ಲ. ಕೃತಿಗಳಲ್ಲಿ ಲಾವಣ್ಯವನ್ನು ಹೆಚ್ಚಿಸಲು ಬೆಳಕನ್ನು ಒಂದು ಉಪಕರಣವನ್ನಾಗಿ ಬುದ್ಧಿವಂತಿಕೆಯಿಂದ ಮನಮೋಹಿಸುವಂತೆ ಉಪಯೋಗಿಸಿದ.[೨೨] It is hear, in circumstances of unrelieyed want, that Rembrandt's Paintings which seem already to have achieved the light of perfection. acquire still greater force.The previously smooth surface of his canvases becomes more and more rough, restiess hilly, as thought his paintings were now born of a seething mixture of dark gold, bronze and preciouse stones.[೨೩] ರೆಂಬ್ರಾಂಟ್‌ನ ಯಾವುದೇ ಚಿತ್ರಗಳನ್ನು ತೆಗೆದುಕೊಂಡರೂ ಸ್ಪಷ್ಟವಾಗಿ ಎದ್ದುಕಾಣುವ ಅಂಶ.

ಮುಖ್ಯವಾದ ವಿಷಯಕ್ಕೆ ಪ್ರಥಮ ಸ್ಥಾನ. ನಂತರದ ವಿಷಯಗಳಿಗೆ ಗೌಣವಾದ ಸ್ಥಾನ ಇದನ್ನು ನೆರಳು ಬೆಳಕುಗಳ ವಿಶಿಷ್ಟತೆಯಿಂದ ಕಲಾತ್ಮಕವಾಗಿ ಸ್ಪಷ್ಟಪಡಿಸುತ್ತಾನೆ, ರೆಂಬ್ರಾಂಟ್‌ನು ಬಳಸಿದ ವರ್ಣಗಳು ಕೂಡ ಆ ಒಂದೇ ಬಗೆಯವು. ಕೆಂಪು ಮಿಶ್ರಿತ ಬಂಗಾರವರ್ಣ, ಇಂತಹ ಕೆಲವು ವಿಶಿಷ್ಟ ಅಂಶಗಳಿಂದ ರೆಂಬ್ರಾಂಟ್ ತನ್ನತನವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದನು.

Although the painter here displays general Baroque techniques, he is not trying to arouse pity or fear through the violent projection of a three-dimensional figure or thought agonies of body and lighting all of Rembrandt's pictures in this culmination of his career poses a psychological or philosophical problem.[೨೪] ರೆಂಬ್ರಾಂಟ್‌ನು ಬಾರೋಕ್

---

೨೨. ಬಿ.ಪಿ. ಬಾಯರಿ : ಕಲೆಗಾರರ ಕತೆಗಳು, ಪುಟ-೩೧-೩೨.

೨೩. Leonid Volynsky : Seven days, Page-44

೨೪. Bernard Myers : 50 Great Artists, Page -199

ಯಶದ[೨೫] ಪರಿಸರದಲ್ಲಿ ಬೆಳೆದ ಕಲಾವಿದನಾದ್ದರಿಂದ ಸಹಜವಾಗಿಯೇ ಬಾರೋಕ್ ಕಲೆಯ ತಂತ್ರಗಳು ಅವನ ಕೃತಿಗಳಲ್ಲಿ ಒಡಮೂಡಿ ಬಂದಿವೆ.

ಕೆಂಬ್ರಾಂಟ್‌ನ ಕೊನೆಯ ದಿನಗಳು : ರೆಂಬ್ರಾಂಟ್‌ನ ಜೀವಿತದ ಕೊನೆಯ ದಿನಗಳು ಕಷ್ಟಗಳ ರಾಶಿಯನ್ನೇ ಹೊತ್ತುಕೊಂಡು ಬಂದಂಥವುಗಳು. ಅನುಕೂಲದ ವಾತಾವರಣದಿಂದ ವಂಚಿತನಾದ ರೆಂಬ್ರಾಂಟ್ ಕಡುಬಡವನಾಗಿ ದುಃಖದಾರಿದ್ರ್ಯಗಳಿಂದ ಭಿಕ್ಷುಕರ ತರಹ ಬದುಕನ್ನು ಸವೆಸಬೇಕಾಯಿತು. ಸಾಯುವವರೆಗೂ ಚಿತ್ರ ಬಿಡಿಸುತ್ತಲೇ ಇದ್ದ ರೆಂಬ್ರಾಂಟ್ ೧೬೬೯ ಅಕ್ಟೋಬರ ೮ರಂದು ಈ ಲೋಕದಿಂದ ದೂರವಾದ. it goes without saying that a good knowledge of history helps in understanding a great deal of Rembrandt's work. However, it is still more important that we should be capable of direct perception and sympathetic reaction when viewing his works thates. That Rembrandt's art can still ofter a lapse of three centuries directly affect us is a pledge that it will continue to live.[೨೬]

ಬಾರೋಕ್ ಕಲಾ ಸಂಪ್ರದಾಯದ ರೂವಾರಿಗಳಲ್ಲಿ ರೆಂಬ್ರಾಂಟ್‌ನ ಪಾತ್ರ ಮೌಲಿಕ ವಾದುದಾಗಿದೆ. ಅಪಾರ ಸಂಖ್ಯೆಯಲ್ಲಿ ಕಲಾಕೃತಿ ನಿರ್ಮಾಣಮಾಡಿದ ಶ್ರೇಯಸ್ಸು ಇವನದು. ಇವನ ಕಲಾಕೃತಿಗಳಲ್ಲಿ ಮಾನವ ಸಹಜವಾದ ಅನೇಕ ದೌರ್ಬಲ್ಯಗಳು ಇವೆಯಾದರೂ ಅವೆಲ್ಲ ರೆಂಬ್ರಾಂಟ್‌ನ ಅದ್ಭುತವಾದ ಕ್ರಿಯಾಶೀಲತೆಯಿಂದ ಮರೆಯಾಗಿ ಕಲಾಕೃತಿಗಳು ಭವ್ಯತೆಯಿಂದ ಕಂಗೊಳಿಸುತ್ತವೆ. ರಂಬ್ರಾಂಟ್‌ನ ಕೃತಿಗಳಲ್ಲಿ ಪ್ರೀತಿ ಕರುಣೆ, ವಾತ್ಸಲ್ಯ, ದುಃಖ, ಮನಸ್ಸಿನ ದ್ವಂದ್ವ ಹೊಯ್ದಾಟ ಸೋಲು ಗೆಲುವು ಸಂತೋಷ ಹೀಗೆ ಅವನ ಕಲಾಕೃತಿಗಳು ಐತಿಹಾಸಿಕ, ಧಾರ್ಮಿಕ ಸಾಮಾಜಿಕ ರಾಜಕೀಯ ಅಂಶಗಳಿಂದ ಸಹೃದಯರಿಗೆ ನವರಸಗಳ ರಸದೂಟವನ್ನು ಮಾಡಿಸುತ್ತವೆ, ರೆಂಬ್ರಾಂಟ್ ಒಬ್ಬ ಪ್ರಯೋಗಶೀಲ ಕಲಾವಿದನಾಗಿ, ಹೋರಾಟ ಗಾರನಾಗಿ ಛಲದಿಂದ ಬದುಕನ್ನು ಸವೆಸಿದ ಧೀಮಂತ ವ್ಯಕ್ತಿಯೆಂದರೆ ಅತಿಶಯೋಕ್ತಿ ಯಾಗಲಾರದು.

ವಿಶ್ವದ ಮಹಾಕಲಾವಿದರ ಸಾಲಿನಲ್ಲಿ ಇಂದು ರೆಂಬ್ರಾಂಟ್‌ನನ್ನು ಗೌರವದಿಂದ ಕಾಣಲಾಗುತ್ತಿದೆ. ಬದುಕಿದ್ದಾಗ ಆತ ಯಾವ ಪುರಸ್ಕಾರಗಳನ್ನೂ ಪಡೆಯಲಿಲ್ಲ. ಸತ್ತಾಗ ಅವನ ಶವಸಂಸ್ಕಾರ ಮಾಡಿದವರು ಭಿಕ್ಷುಕರು, ಬಡಕೂಲಿಕಾರರು, ರೆಂಬ್ರಾಂಟ್‌ನ ಬದುಕಿನಲ್ಲಿ ವಿಧಿಯ ಕೈವಾಡ ವಿಚಿತ್ರವಾದುದಾಗಿದೆ. ಜಗತ್ತಿನ ಪ್ರಸಿದ್ಧ ವಸ್ತುಸಂಗ್ರಹಾಲಯಗಳಲ್ಲಿ ಈಗ ರೆಂಬ್ರಾಂಟ್‌ನ ಚಿತ್ರಗಳಿಗೆ ವಿಶಿಷ್ಟ ಸ್ಥಾನವಿದೆ ಇವನು ಕಲಾಪ್ರಪಂಚಕ್ಕೆ ಕೊಟ್ಟ ಉಡುಗೊರೆಗಳು, ಬೆಲೆಯುಳ್ಳವುಗಳಾಗಿವೆ, ಮತ್ತು ನಿತ್ಯನೂತನವಾದವುಗಳಾಗಿವೆ. ❑

---

೨೫. During the 1640's Rembrandt gradually abandoned the more explosive and extravagent aspects of Baroque art and sought ways of making colour, chiaroscuro, and atmospheric effects express tenderness and compassion (-edt, Harold Osborne : The oxford companionto to Art, Page-964)

೨೬. Xeniz yegorova : Master of world painting, Rembrandt, Page-10



iii ವೆರ್ಮೀರ್

೧೬೩೨–೧೬೭೫

ಹದಿನೇಳನೆಯ ಶತಮಾನ ಡಚ್ಚರ ಕಲೆಯ ಇತಿಹಾಸದಲ್ಲಿ ಹೊಸ ಮನ್ವಂತರದ ಯುಗವಾಗಿದೆ. ಡಚ್ ಚಿತ್ರಕಲಾ ಪಂಥ ಪ್ರಪಂಚದ ಚಿತ್ರಕಲೆಗೆ ಭೂದೃಶ್ ಚಿತ್ರ, ವ್ಯಕ್ತಿಚಿತ್ರ, ಜೀವನದ ಚಿತ್ರಗಳನ್ನು ಕೊಟ್ಟಿದೆ. ಈ ಕೊಡುಗೆಯಲ್ಲೂ ಹಾಲೆಂಡ್ ತನ್ನದೇ ಆದ ವೈಶಿಷ್ಟವನ್ನು ಮೆರೆದಿದೆ. ಬೆಳಕು ನೆಳಲುಗಳ ಆಟಕ್ಕೆ ಇವರ ಚಿತ್ರಗಳಲ್ಲಿ ಪ್ರಾಧಾನ್ಯ, ಭೂದೃಶ್ಯ ಚಿತ್ರಗಳಲ್ಲೂ ಅಷ್ಟೇ ಬೆಳಕು ಪ್ರಮುಖ. ಬಹುಶಃ ಬೆಳಕು ಕತ್ತಲೆಗಳ ನೈಜ ಜೋಡಣೆಯ ಬಗೆಗೆ ಚಿಂತಿಸಿದವರಲ್ಲಿ ಡಚ್ಚರೇ ಮೊದಲಿಗರು[1] It is only rerely inthe history of Art that a moment of vision... is matched by a perfect skill in rendering the vision, vermeer is such a rare instance.[2] ಡಚ್ ಬಾರೋಕ್ ಚಿತ್ರಕಲಾ ಸಂಪ್ರದಾಯದಲ್ಲಿ ವೆರ್ಮೀರನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಇಲ್ಲಿ ಅವನ ಜೀವನ, ಹಾಗೂ ಕಲಾಕೃತಿಗಳ ಪರಿಚಯ ಮಾಡಿಕೊಡಲಾಗಿದೆ.

ಬಾಲ್ಯಜೀವನ : ನೆದರ್‌ಲೆಂಡ್ಸ್ ಪ್ರದೇಶದ ಒಂದು ಸಣ್ಣಪಟ್ಟಣ 'ಡೆಲ್ಫ್'ನಲ್ಲಿ ೧೬೩೨ರ ಅಕ್ಟೋಬರ್ ೩೧ ರಂದು ವೆರ್ಮೀರ್ ಹುಟ್ಟಿದ. ತಂದೆ ರೇನಿಯರ್ (ಇವನ ತಂದೆ ಜಾನ್) ತಾಯಿ ಡೆಂಜಿಮಿನ್ (ಇವಳ ತಂದೆ ಬಲುತ್‌ಸರ್) ಮಧ್ಯಮ ವರ್ಗವೆರ್ಮೀಶನ ಜೀವನ ಇವರದಾಗಿತ್ತು. ತಂದೆ ಪಾನಗ್ರಹವನ್ನು ಇಟ್ಟುಕೊಂಡು ಸಣ್ಣ ವ್ಯಾಪಾರವನ್ನು ಮಾಡುತ್ತ ಜೊತೆಗೆ ರೇಷ್ಮೆಯ ಬಟ್ಟೆಗಳನ್ನು ನೇಯ್ದು ಉಪಜೀವನ ನಡೆಸುತ್ತಿದ್ದನು. ಇವನಿಗಿರುವ ಇನ್ನೊಂದು ಹವ್ಯಾಸವೆಂದರೆ ಚಿತ್ರಗಳನ್ನು ಸಂಗ್ರಹಿಸುವುದು ಮತ್ತು ಅವುಗಳಿಗೆ ಒಳ್ಳೆಯ ಬೇಡಿಕೆ ಬಂದರೆ ಮಾರಾಟ ಮಾಡುವುದನ್ನು ಮಾಡುತ್ತಿದ್ದನು. ವೆರ್ಮೀರ್‌ನಿಗೆ ಚಿಕ್ಕಂದಿನಲ್ಲಿ ತಂದೆ ಸಂಗ್ರಹಿಸಿದ ಅನೇಕ ಕಲಾಕಾರರ ಚಿತ್ರಗಳನ್ನು ಕುತೂಹಲದಿಂದ ನೋಡುವ ಹವ್ಯಾಸ ಬೆಳೆಯಿತು. ಜೊತೆಗೆ ಚಿತ್ರ ಬಿಡಿಸುವ ಆಸೆಯೂ ಅಂಕುರಿಸಿತು. ಇದರ ಫಲವಾಗಿ ಚಿತ್ರ

---

೧. ಜ್ಞಾನಗಂಗೋತ್ರಿ : ಕಲೆ ಮತ್ತು ಸಾಹಿತ್ಯ ಸಂಪುಟ-೫, ಪುಟ-೨೮೨

೨. Sir Herbert Read : The Great Artists. Book-19 Page-2

ರಚನೆಗೆ ಪ್ರಾರಂಭವಾಗುತ್ತದೆ. ತಂದೆಯ ವ್ಯಾಪಾರದಲ್ಲಿಯೂ ಸಹಾಯಕನಾಗಿ ದುಡಿಯುತ್ತಾನೆ. ವೆರ್ಮೀರ್ ದೊಡ್ಡವನಾಗುತ್ತಿದ್ದಂತೆ ವ್ಯಾಪಾರದ ಎಲ್ಲ ಜವಾಬ್ದಾರಿಯನ್ನು ಹೊರುತ್ತಾನೆ. ಮುಂದೆ ಸ್ವಲ್ಪ ದಿವಸಗಳಲ್ಲಿ ೧೬೫೫ರಲ್ಲಿ ವೆರ್ಮೀರನ ತಂದೆ ಆಕಸ್ಮಿಕವಾಗಿ ಮರಣವನ್ನಪ್ಪುತ್ತಾನೆ. ವೆರ್ಮೀರ್ ಆಗ ಮನೆತನದ ಎಲ್ಲ ಭಾರವನ್ನು ವಹಿಸಬೇಕಾಗುತ್ತದೆ.

೧೫ ಡಿಶೆಂಬರ ೧೬೫೩ರಲ್ಲಿ ವೆರ್ಮೀರ್ ಡೆಲ್ಪನ 'ಗೀಲ್ಡ ಆಫ್ ಸೈಂಟ್' ಎಂಬ ಪ್ರಖ್ಯಾತ ಚಿತ್ರಕಾರರ ಸಂಘದ ಸದಸ್ಯನಾಗುತ್ತಾನೆ. ಈ ವೇಳೆಗಾಗಲೇ ವೆರ್ಮೀರ್ ತನ್ನ ಕಲಾಕೃತಿ ಮೂಲಕ ಸಾಕಷ್ಟು ಹೆಸರು ಗಳಿಸಿ ಕಲಾಕಾರರ ಗಮನ ಸೆಳೆದಿದ್ದನು. ೨೧ ವರ್ಷದ ವೆರ್ಮೀರ್ 'ಗೀಲ್ಡ ಆಫ್ ಸೈಂಟ್'ದ ಸದಸ್ಯನಾಗಿ ಕೆಲವು ವರ್ಷಗಳಲ್ಲಿ ಆ ಸಂಘದ ಗವ್ಹರ್ನರ್ ಆಗಿ ೧೬೬೨ರಲ್ಲಿ ಆಯ್ಕೆಯಾಗುತ್ತಾನೆ. ಮುಂದೆ ಉತ್ತಮ ಸೇವೆಗಾಗಿ ಇವನನ್ನು ಆ 'ಗೀಲ್ಡ್ ಆಫ್ ಸೈಂಟ್' ಸಂಘದವರು ೧೬೭೦-೭೧ರಲ್ಲಿ ಈ ಸಂಘದ ಮುಖ್ಯಸ್ಥನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುತ್ತಾರೆ. ವೆರ್ಮೀರ್ ಈ ಸಂಘದ ಬೆಳವಣಿಗೆಗಾಗಿ ಸಾಕಷ್ಟು ಪರಿಶ್ರಮಪಟ್ಟು ಇನ್ನಷ್ಟು ಹೆಸರು ಗಳಿಸುತ್ತಾನೆ.

ವೆರ್ಮೀರ್ ಸಾರ್ವಜನಿಕ ಕೆಲಸದೊಂದಿಗೆ ತನ್ನತನವನ್ನು ಉಳಿಸಿಕೊಳ್ಳಲು ಕೂಡ ಸಾಕಷ್ಟು ಶ್ರಮಪಟ್ಟಿದ್ದಾನೆ. ಚಿತ್ರಕಲಾಭ್ಯಾಸವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಲು ರೆಂಬ್ರಾಂಟ್‌ನ ಶಿಷ್ಯನಾದ ಕಾರೆಲ್ ಫಾಬ್ರಿಸಿಯಸ್‌ನ ಹತ್ತಿರ ಕಲಾಭ್ಯಾಸ ಮಾಡುತ್ತಾನೆ. ಮುಂದೆ ವೆರ್ಮೀರ್ ಸ್ವತಂತ್ರವಾಗಿ ಕಲಾಕೃತಿ ನಿರ್ಮಾಣ ಮಾಡಲು ಪ್ರಾರಂಭಿಸುತ್ತಾನೆ. ಇವನ ಕೃತಿಗಳಿಗೆ ಸಾಕಷ್ಟು ಬೇಡಿಕೆಯೂ ಬರುತ್ತದೆ. ದೊಡ್ಡ ಸಂಸಾರದ ಹೊಣೆಯಿಂದ ವೆರ್ಮೀರ್‌ನ ಗಳಿಕೆ ಸಾಕಾಗುವುದಿಲ್ಲ ಹತ್ತು ಮಕ್ಕಳ ಪಾಲನೆ ಪೋಷಣೆಯ ಜವಾಬ್ದಾರಿಯಿಂದ ಜೀವಮಾನವಿಡಿ ಬಡತನದಲ್ಲಿಯೇ ದುಡಿದು ಬೆಂದುಹೋದ, ಆದರೆ ಬಡತನದ ನಿರಾಶೆ ನಿರುತ್ಸಾಹ ಅವನ ಕೃತಿಗಳಲ್ಲಿ ಕಾಣದಿದ್ದುದು ಒಂದು ಆಶ್ಚರ್ಯವೆಂದೇ ಹೇಳಬೇಕು.

ವೆರ್ಮೀರ್‌ನ ಕಲಾಕೃತಿಗಳು ಸಂಖ್ಯೆಯಲ್ಲಿ ತೀರಾ ಕಡಿಮೆ, ಕಾರಣ ಇವನು ಚಿತ್ರರಚನೆಯಲ್ಲಿ ತುಂಬ ಶ್ರಮವಹಿಸುತ್ತಿದ್ದುದು. "ಅಂಚೆ ಚೀಟಿಯಷ್ಟು ದೊಡ್ಡದಾಗಿರದ ತಲೆಯ ಮೇಲೆ ಬೀಳುವ ಬೆಳಕಿನ ಚೆದರಿಕೆಯನ್ನು ಚಿತ್ರಿಸಿ ಅದನ್ನು ಹಿನ್ನೆಲೆಯ ಗೋಡೆಯಿಂದ ಬೇರೆಯಾಗಿ ತೋರುವಂತೆ ಮಾಡಲು ಇವನು ಹಲವು ತಿಂಗಳು ಶ್ರಮಪಡುತ್ತಿದ್ದ. ಇವನ ಚಿತ್ರಗಳು ಎಷ್ಟು ನಯವಾಗಿರುತ್ತಿದ್ದವೆಂದರೆ ಅವುಗಳಲ್ಲಿ ಕುಂಚದ ಎಳೆತವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಗುರುತಿಸುವುದು ಸಾಧ್ಯವಾಗುತ್ತಿರಲಿಲ್ಲ. ಇಷ್ಟು ಜಾಗರೂಕತೆಯಿಂದ ಕೆಲಸ ಮಾಡುತ್ತಿದ್ದುದರಿಂದ ವೆರ್ಮೀರ್ ಜೀವನಮಾನವಿಡಿ ದುಡಿದು ರಚಿಸಿದ ವರ್ಣಚಿತ್ರಗಳು ನಲವತ್ತು ಮಾತ್ರ."[೩] ಕೆಲವರು ಸುಮಾರು ೭೫ರಷ್ಟು ಕಲಾಕೃತಿ ನಿರ್ಮಾಣ ಮಾಡಿದ್ದಾನೆಂದು ಹೇಳುತ್ತಾರೆ. ಸದ್ಯ ಉಪಲಬ್ಧವಿರುವ ಚಿತ್ರಗಳು ನಲವತ್ತು ಎಂಬುದು ತಿಳಿದುಬರುತ್ತದೆ. ಇಲ್ಲಿ ಕೆಲವು ಕಲಾಕೃತಿಗಳ ಪರಿಚಯ ಮಾಡಿಕೊಡಲಾಗಿದೆ.

---

೩. ಜ್ಞಾನಗಂಗೋತ್ರಿ : ಕಲೆ ಮತ್ತು ಸಾಹಿತ್ಯ ಸಂಪುಟ-೫, ಪುಟ-೫೮೫

ವೆರ್ಮೀರನ ಕಲಾಕೃತಿಗಳು :

೧. ಮುತ್ತಿನ ನೆಕ್ಲೆಸ್ ಹಿಡಿದು ನಿಂತಿರುವ ಹುಡುಗಿ : (The pearl neckless)
೨. ಡೆಲ್ಫ ನಗರದ ನೋಟ : (A view of Delft)
೩. ಮನೆಯಲ್ಲಿ ಮೇರಿ ಮತ್ತು ಮರ್ತಾರೊಂದಿಗೆ ಕ್ರಿಸ್ತ : (Christ in the house of mary and marth)
೪. ತರುಣಿಯ ಎದೆ ಮೊಗದ ಭಾವಚಿತ್ರ : (Head of a young girl)
೫. ಪಾತ್ರೆಯಲ್ಲಿ ಹಾಲನ್ನು ಹಾಕುತ್ತಿರುವ ಸೇವಕಿ : (A maid servant pouring milk)
೬. ಮುತ್ತನ್ನು ತೂಕಮಾಡುತ್ತಿರುವ ಹೆಣ್ಣುಮಗಳು: (A woman weighing perls)
೭. ನೀರಿನ ಪಾತ್ರೆಯೊಂದಿಗಿರುವ ಹೆಣ್ಣುಮಗಳು : (A woman with a water jug)

೧. ಮುತ್ತಿನ ನೆಕ್ಲೆಸ್ ಹಿಡಿದು ನಿಂತಿರುವ ಹುಡುಗಿ : ಬರ್ಲಿನ್ ನಗರದಲ್ಲಿ ಸಂಗ್ರಹ ಗೊಂಡಿರುವ ಈ ಚಿತ್ರ ಎಂತಹವರನ್ನು ತನ್ನಡೆಗೆ ಆಕರ್ಷಿಸುತ್ತದೆ. ಚಿಕ್ಕ ಹುಡುಗಿಯೊಬ್ಬಳು ಕೊರಳಲ್ಲಿ ಮುತ್ತಿನ ಹಾರವೊಂದನ್ನು ಹಾಕಿಕೊಂಡು ಎರಡೂ ಕೈಗಳಲ್ಲಿ ಆ ಸರವನ್ನು ಹಿಡಿದು ಕನ್ನಡಿಯಲ್ಲಿ ನೋಡುತ್ತಿರುವ ದೃಶ್ಯವಿದಾಗಿದೆ. ಕನ್ನಡಿಯ ಮಗ್ಗಲು ಕಿಟಕಿ ಇದೆ. ಕಿಟಕಿಯಿಂದ ಬಿದ್ದ ಬೆಳಕು ಹುಡುಗಿಯ ಮುಖ ಶರೀರದ ಮೇಲೆಲ್ಲ ಬಿದ್ದಿದೆ. ಅದರ ತದ್ರೂಪ ಚಿತ್ರಣವನ್ನು ವೆರ್ಮೀರ ತುಂಬ ನಯ ನಾಜೂಕಿನಿಂದ ಚಿತ್ರಾಂಕಿತ ಗೊಳಿಸಿದ್ದಾನೆ. ಮುಂದೆ ಕೆಳಗಡೆ ಬಿದ್ದಿರುವ ಸಾಮಾನುಗಳ ಟೇಬಲ್ ಮೇಲಿನ ಅರಿವೆಯ ನಿರಿಗೆಗಳು ಎಲ್ಲಂದವನ್ನು ಇಲ್ಲಿ ನೆರಳು ಬೆಳಕಿನ ಛಾಯೆಯಲ್ಲಿ ಚಿತ್ರಿಸಲಾಗಿದೆ. ಹುಡುಗಿಯ ಮುಖದಲ್ಲಿರುವ ಮುಗ್ಧತೆ ಅಚ್ಚರಿಯಿಂದ ಕನ್ನಡಿಯತ್ತ ದೃಷ್ಟಿ ಹರಿಸಿರುವ ದೃಶ್ಯ ತುಂಬ ಮನೋಹರವಾಗಿ ಇಲ್ಲಿ ಮೂಡಿಬಂದಿದೆ. ಬಣ್ಣಗಳು ಇಲ್ಲಿ ಹಿತಮಿತವಾಗಿ ಬಳಕೆಯಾಗಿವೆ.

೨. ಡೆಲ್ಫ ನಗರದ ನೋಟ : ಕ್ರಿ.ಶ. ೧೬೬೦ರಲ್ಲಿ ತೈಲವರ್ಣದಲ್ಲಿ (೩೮.೨ ಇಂಚು ೪೭.೧/೪ ಇಂಚು) ಈ ಕೃತಿ ರಚನೆಯಾಗಿದೆ. ವೆರ್ಮೀರನ ಪ್ರಖ್ಯಾತ ವರ್ಣಚಿತ್ರಗಳಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಪಡೆದ ಕಲಾಕೃತಿ ಇದು, ಡೆಲ್ಫ ನಗರದ ಸುಂದರವಾದ ನಿಸರ್ಗ ದೃಶ್ಯವನ್ನು ಯಥಾವತ್ತಾಗಿ ಇಲ್ಲಿ ಚಿತ್ರಿಸಲಾಗಿದೆ. ಸಂಜೆಯ ವಾತಾವರಣ ತಿಳಿ ನೀಲಿ ಆಕಾಶದಲ್ಲಿ ಬಿಳಿ ಹಾಗೂ ಕರಿಮೋಡಗಳ ವಿನ್ಯಾಸ. ಡೆಲ್ಫ ನಗರದ ಕಟ್ಟಗಳು ಮುಂದೆ ಇರುವ ನೀರಿನಲ್ಲಿ ಕಾಣುವ ಪ್ರತಿಬಿಂಬಗಳು ಹೃದಯಸ್ಪರ್ಶಿಯಾಗಿ ಇಲ್ಲಿ ಮೂಡಿಬಂದಿವೆ. ಬಣ್ಣಗಳು ಇಲ್ಲಿ ಹಿತಮಿತವಾಗಿ ಬಳಕೆಯಾಗಿವೆ.

Vermeer’s ability to convey a sense of absolute tranquility is nowhere more apparent Than in this painting, his homage to his native city. Ari that can almost be self water and cool light are its chief

elements. In the still air the water is almost motionless. In the shifting light, under the enormous sky. The building stand out clearly, yet ar some how remote and unpeoled, the distance between the man and woman on the near shore and the city across from them seems as much psychological as actual[೪] ಎಂದು ವರ್ಣಿಸಿರುವ ಈ ಮಾತುಗಳು ಯಥಾ ಯೋಗ್ಯವಾಗಿವೆ. ಈತನ ಪ್ರತಿಭೆಗೆ ಈ ಕೃತಿ ಒಂದು ಉದಾಹರಣೆಯಾಗಿ ನಿಂತಿದೆ. ಪ್ರತಿಯೊಂದನ್ನು ನೈಜವಾಗಿ ಮತ್ತು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ನೀರಿನಲ್ಲಿರುವ ಬೋಟುಗಳು, ದಡದಲ್ಲಿ ನಿಂತಿರುವ ವ್ಯಕ್ತಿಗಳ ಚಿತ್ರಗಳು, ಮುಗಿಲು ಮುಟ್ಟುವಂತಹ ಗೋಪುರದ ಕಳಸಗಳು, ಚರ್ಚಿನ ಎತ್ತರವಾದ ಕಮಾನುಗಳು ಕೆಳಗೆ ರೋಡರ್ಡಾಡಂ ಮಹಾದ್ವಾರ ಹೀಗೆ ಪ್ರತಿಯೊಂದನ್ನು ಶಾಂತವರ್ಣಗಳಲ್ಲಿ ಡೆಲ್ಫ್ ನಗರದ ಅವರ್ಣನೀಯ ಸೌಂದರ್ಯವನ್ನು ಇಲ್ಲಿ ಸೆರೆ ಹಿಡಿಯಲಾಗಿದೆ. ಸದ್ಯ 'ಹೆಗ್' ನಗರದಲ್ಲಿ ಈ ಕೃತಿ ಸಂಗ್ರಹಗೊಂಡಿದೆ.

೩. ಮನೆಯಲ್ಲಿ ಮೇರಿ ಮತ್ತು ಮರ್ತಾರೊಂದಿಗೆ ಕ್ರಿಸ್ತ : ಈ ಕೃತಿಯು ಕ್ರಿ.ಶ. ೧೬೫೪ರಲ್ಲಿ ತೈಲವರ್ಣದಲ್ಲಿ ರಚನೆಗೊಂಡಿದೆ. (ಇದರ ಗಾತ್ರ ೬೨೧/೮ x ೫೫೧/೨ ಇಂಚು ಇದೆ.) ಈ ಸಂಯೋಜನ ಚಿತ್ರವು ಕ್ರಿಸ್ತ ಹಾಗೂ ಮೇರಿ ಮರ್ತಾರೊಂದಿಗೆ ಸಂಭಾಷಣೆಯಲ್ಲಿ ತೊಡಗಿದ ವಿಷಯವನ್ನು ಹೊಂದಿದೆ. ಆಸನವೊಂದರ ಮೇಲೆ ಆರಾಮವಾಗಿ ಕುಳಿತ ಕ್ರಿಸ್ತನ ಹಾವಭಾವ, ನೀಳವಾದ ಕೇಶರಾಶಿ, ತೊಟ್ಟಿರುವ ನಿಲುವಂಗಿ, ಹೊದ್ದುಕೊಂಡಿರುವ ವಸ್ತ್ರ, ಅವನ ಎದುರು ಬದುರಾಗಿ ಮೇಲೆ ಕೆಳಗಡೆ ಕುಳಿತಿರುವ ಇಬ್ಬರು ಸ್ತ್ರೀಯರು, ಅವರ ಉಡಿಗೊತೊಡಿಗೆಗಳು ಇವರೆಲ್ಲರ ಮೇಲೆ ಬಿದ್ದ ಬೆಳಕಿನ ವಿನ್ಯಾಸವನ್ನು ಇಲ್ಲಿ ಕಲಾತ್ಮಕವಾಗಿ ವೆರ್ಮಿರ್ ನಿರೂಪಿಸಿದ್ದಾನೆ. ನೋಡುವವರ ದೃಷ್ಟಿ ಇಡಿಯಾಗಿ ಎಲ್ಲರ ಮೇಲೆ ಹಾಯುವಂತೆ ಬಣ್ಣಗಳ ಸಮತೋಲನವನ್ನು ಇಲ್ಲಿ ಕಾಯ್ದುಕೊಂಡು ಬರಲಾಗಿದೆ. ವೆರ್ಮೀರನ ಕುಂಚದ ಕೈಚಳಕವನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು. "One of vermeer's earliest paintings, so for as known this work is done in a then popular style influenced by carvagglo. Dramatic chiaroscuro (Contre of light and dark) models the stylized drapery and definess the interior space more specifically, the thetorical gestures and pose of christ recall a similar figure by Andrea vaccaro one of vermeer's Italian contemporaries.[೫]

ವೆರ್ಮೀರ್‌ನ ಮೇಲೆ ಮೇಲಿನ ಕಲಾವಿದರ ಪ್ರಭಾವವಿದ್ದರೂ ಸೂಕ್ಷ್ಮವಾದ ವಿನ್ಯಾಸದಲ್ಲಿ ತನ್ನತನವನ್ನು ಉಳಿಸಿಕೊಂಡು ಬಂದಿದ್ದಾನೆ. ಈ ಕೃತಿಯು ಸಹ ಸ್ಕಾಟ್‌ಲ್ಯಾಂಡಿನ ಭಾಸಲ್ ಗ್ಯಾಲರಿಯ ಇಡನ್‌ಬರ್ಗ್‌ದಲ್ಲಿ ಸಂಗ್ರಹಿಸಲಾಗಿದೆ.

---

೪. Sir Herbert Read : The Great Artists. Vermeer, Book-19

೫. Sir Herbert Read : The Great Artists, Vermeer Book-19

೪. ತರುಣಿಯ ಭಾವಚಿತ್ರ : ಕ್ರಿ.ಶ. ೧೬೬೫ರಲ್ಲಿ ತೈಲವರ್ಣದಲ್ಲಿ ನಿರ್ಮಾಣಗೊಂಡಿದೆ. (೧೮ ೧/೪ ಇಂಚು ೧೫ ೩/೪ ಇಂಚು ಗಾತ್ರವನ್ನು ಹೊಂದಿದೆ) ವೆರ್ಮೀರ ಸತ್ತ ಎರಡುನೂರು ವರ್ಷಗಳ ನಂತರ ಬೆಳಕಿಗೆ ಬಂದ ಕೃತಿ ಇದಾಗಿದೆ. ಹಿಂದೆ ಕಪ್ಪು ವರ್ಣದ ಹಿನ್ನೆಲೆಯನ್ನು ಹೊಂದಿದ ಭಾವಪೂರ್ಣ ಚಿತ್ರವಿದಾಗಿದೆ. ಮುಖದಲ್ಲಿಯ ಆಕರ್ಷಕ ಕಣ್ಣುಗಳು ಓರೆನೋಟದ ಭಂಗಿ, ಕೆಂಪು ವರ್ಣದಲ್ಲಿ ಮೋಹಕವಾಗಿ ಮೂಡಿ ಬಂದ ತುಟಿಗಳು, ನಯವಾದ ಮುಖದ ವಿನ್ಯಾಸ ಇವುಗಳಿಂದ ಈ ಕೃತಿ ತುಂಬ ಜನಪ್ರಿಯತೆಯನ್ನು ಪಡೆದಿದೆ, ಸಧ್ಯ ಇದು 'ಹೆಗ್' ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿದೆ.

೫. ಪಾತ್ರೆಯಲ್ಲಿ ಹಾಲನ್ನು ಹಾಕುತ್ತಿರುವ ಸೇವಕಿ : ಕ್ರಿ.ಶ. ೧೬೬೦ರಲ್ಲಿ ತೈಲವರ್ಣದಲ್ಲಿ ಇದು ರಚನೆಗೊಂಡಿದೆ. (ಇದರ ಗಾತ್ರ ೧೮ ಇಂಚು ೧೬ ೧/೪ ಇಂಚು ಇದೆ) ಮನೆಗೆಲಸದ ಹೆಣ್ಣುಮಗಳು, ಮನೆಯ ಕೆಲಸದಲ್ಲಿ ತಲ್ಲೀನಳಾದ ಚಿತ್ರವಿದು. ಕಿಟಕಿಯ ಹತ್ತಿರ ನಿಂತು ಟೇಬಲ್ಲೀನ ಮೇಲಿಟ್ಟಿರುವ ಪಾತ್ರೆಯಲ್ಲಿ ಮತ್ತೊಂದು ಪಾತ್ರೆಯಿಂದ ಹಾಲನ್ನು ಸುರಿಯುತ್ತಿರುವ ದೃಶ್ಯದ ಚಿತ್ರದಲ್ಲಿ ಮುಗ್ಧತೆಯ ಸಹಜ ಭಂಗಿ ಹಾಲಿನ ಪಾತ್ರೆಯ ಕಡೆಗೆ ನೆಟ್ಟಿರುವ ಏಕಾಗ್ರದೃಷ್ಟಿ ಇಲ್ಲಿ ಮೋಹಕವಾಗಿ ಮೂಡಿ ಬಂದಿದೆ. ಕಿಟಕಿಯಿಂದ ಬಿದ್ದ ಬೆಳಕನ್ನು ಆಕೆಯ ಶರೀರದ ವಿವಿಧ ಕಡೆಗಳಲ್ಲಿ ಚಿತ್ರಿಸಿರುವ ರೀತಿಯೂ ಅಷ್ಟೇ ನಾಜೂಕಿನದಾಗಿದೆ, ಟೇಬಲ್ ಮೇಲಿನ ಬೇರೆ ಬೇರೆ ಗಾತ್ರದ ಪಾತ್ರೆಗಳ ಬಣ್ಣಗಳು ಅಲ್ಲಿ ಬಿದ್ದಿರುವ ನೆರಳು, ಬೆಳಕು ಹೆಣ್ಣುಮಗಳ ವೇಷಭೂಷಣಗಳಲ್ಲಿಯ ನೈಜವಾದ ರೇಖೆಗಳ ವಿನ್ಯಾಸ ಹೀಗೆ ಚಿತ್ರದ ಹಿನ್ನೆಲೆಯೂ ಶಾಂತವರ್ಣದಿಂದ ಸುಂದರವಾಗಿ ನಿರೂಪಣೆಗೊಂಡಿದೆ, ಈ ಚಿತ್ರವನ್ನು ಕುರಿತು ಹತ್ತೊಂಬತ್ತನೆಯ ಶತಮಾನದ ವಿಮರ್ಶಕರೊಬ್ಬರು ಹೇಳಿದ ಮಾತನ್ನು ಇಲ್ಲಿ ನೋಡಬಹುದು. "Ninetheenth century critics saw in this painting a glorification of work and duty the impressive monumentality of the servent's figure could well have justified this interpretation. but the picture is in fact, a tin one-one of the earlist of vermeers works in reduced dimensions and rather than serving a didactic purpose it is primarily another of his celebrations of the effet of light[೬] ಈಗ ಈ ಕಲಾಕೃತಿ ಅಮ್‌ಸ್ಟರ್ಡಮ್‌ನ ರಿಜೆಕ್ಸ್ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿದೆ.

೬. ಮುತ್ತನ್ನು ತೂಕಮಾಡುತ್ತಿರುವ ಹೆಣ್ಣುಮಗಳು : ೧೬೬೫ರಲ್ಲಿ ತೈಲವರ್ಣದಲ್ಲಿ ಈ ಕೃತಿ ರಚನೆಗೊಂಡಿದೆ (ಇದರ ಗಾತ್ರ ೧೬ ೧/೨ x ೧೪ ಇಂಚು ಇರುವುದು) ವೆರ್ಮೀರ್‌ನ ಈ ಚಿತ್ರ ಅವನ ಸಹನಶೀಲತೆ ವಿಶಾಲವಾದ ಭಾವನೆಗಳಿಗೆ ಕನ್ನಡಿಯಂತಿದೆ. ಯುವತಿಯ ಮುಗ್ಧ ಪ್ರಶಾಂತವಾದ ಭಾವನೆ, ಕೈಯಲ್ಲಿ ತಕ್ಕಡಿ ಹಿಡಿದು ತೂಕಮಾಡುತ್ತಿರುವ ಭಂಗಿ ಯಾರನ್ನಾದರು ಕ್ಷಣಾರ್ಧದಲ್ಲಿಯೇ ತನ್ನೆಡೆಗೆ ಆಕರ್ಷಿಸುತ್ತದೆ. ಕತ್ತಲಲ್ಲಿಯೂ ಬಿದ್ದಿರುವ

---

೬. Sir Herbert Read : Great Artists. Vermeer. Book-19

ಮೃದುವಾದ ಬೆಳಕು, ಅಲ್ಲಿ ಮಿಂಚುತ್ತಿರುವ ಬಂಗಾರ, ಮುತ್ತುಗಳು, ಆಭರಣಗಳು, ಟೇಬಲ್ ಮೇಲೆ ಕೈಯೊಂದನ್ನಿಟ್ಟು ಇನ್ನೊಂದು ಕೈಯಲ್ಲಿ ತಕ್ಕಡಿಯನ್ನು ತೂಕಮಾಡುತ್ತಿರುವ ರೀತಿ ಇಲ್ಲಿನ ನಯನಾಜೂಕುತನ ತಕ್ಕಡಿಯ ಕಡೆಗೆ ಹರಿಸಿರುವ ದೃಷ್ಟಿ, ಹಾಗೂ ಚಿತ್ರದ ಹಿನ್ನೆಲೆಯ ಗೋಡೆಯಲ್ಲಿರು ಭಿತ್ತಿಚಿತ್ರದ ಅಸ್ಪಷ್ಟವಾದ ನಿರೂಪಣೆ, ಕಾರ್ಯಮಗ್ನತೆ ಈ ಮುಂತಾದ ಅಂಶಗಳಿಂದ ವೆರ್ಮೀರ್‌ನ ಕಲಾಕೃತಿಗಳು ಉಳಿದ ಕಲಾವಿದರಿಗಿಂತ ಭಿನ್ನವಾಗಿ ನಿಂತುಕೊಳ್ಳುತ್ತವೆ. ಇದು ಸಧ್ಯ ವಾಷಿಂಗ್‌ಟನ್‌ನ ರಾಷ್ಟ್ರೀಯ ವಸ್ತು ಸಂಗ್ರಾಲಯದಲ್ಲಿ ಸಂಗ್ರಹ ಗೊಂಡಿದೆ.

೭. **ನೀರಿನ ಪಾತ್ರೆಯೊಂದಿಗಿರುವ ಹೆಣ್ಣುಮಗಳು :** ೧೬೬೩ರಲ್ಲಿ ತೈಲವರ್ಣದಲ್ಲಿ ಈ ಕೃತಿ ಸೃಷ್ಟಿಯಾಗಿದೆ. (ಇದರ ವಿನ್ಯಾಸ ೧೮ ಇಂಚು ೧೬ ೧/೮ ಇಂಚು ಇದೆ) ಕಿಟಕಿಗೆ ಕೈಹಚ್ಚಿ ಕಿಟಕಿಯ ಹೊರಗೆ ದೃಷ್ಟಿ ಹರಿಸಿದಂತೆ ಇನ್ನೊಂದು ಕೈಯಲ್ಲಿ ನೀರಿನ ಪಾತ್ರೆಯನ್ನು ಹಿಡಿದುಕೊಂಡು ನಿಂತಿರುವ ಭಂಗಿಯಲ್ಲಿ ಈ ಚಿತ್ರ ನಿರೂಪಣೆಗೊಂಡಿದೆ. ವೆರ್ಮೀರ್ ಒಳ್ಳೆಯ ಸ್ಥಿರ (ಸ್ಟಿಲ್‌ಲಾಯಿಫ್) ಚಿತ್ರಕಾರ ಎಂಬುದನ್ನು ಇಂತಹ ಅವನ ಅನೇಕ ಕಲಾಕೃತಿಗಳ ಮೂಲಕ ಸಾಬೀತುಮಾಡಿದ್ದಾನೆ. ವಸ್ತುಗಳ ತದ್ರೂಪ ಚಿತ್ರಣ ಅವನ ಅನೇಕ ವೈಶಿಷ್ಟ್ಯಗಳಲ್ಲಿ ಒಂದು ಎಂದರೆ ತಪ್ಪಾಗಲಾರದು. ಇಲ್ಲಿಯೂ ಟೇಬಲ್ಲಿದೆ. ಅದರ ಮೇಲೆ ಪಾತ್ರೆಯೊಂದಿದೆ. ಆ ಪಾತ್ರೆಯ ಮೇಲೆ ನೀರಿನ ಜಗ್ ಇದೆ. ಅದರ ಕೆಳಗೆ ಕ್ಲಾತ್ ಇದೆ ಅದರ ಮೇಲಿರುವ ಸುಳುವುಗಳನ್ನು ಕಸೂತಿಯ ಚಿತ್ರಗಳನ್ನು ಸಹ ಬಿಡದಂತೆ ಚಿತ್ರಿಸಲಾಗಿದೆ. ವಸ್ತುಗಳನ್ನು ಚಿತ್ರಗಳಿಗೆ ಆಯ್ಕೆ ಮಾಡುವಾಗ ಅವುಗಳನ್ನು ಸಂಯೋಜನಗೊಳಿಸಿರುವ ರೀತಿ ಕೂಡ ಮೆಚ್ಚುವಂತಹದು. Another instance of baroque qualities is found int eh young woman with a water jug. The strong feeling for the texture substances and the almost religious serioness mark this as a typical vermeer work. The young girl is at the centere of the wheel arrangement. Lost in thought as the gazes through the window. As in most vermeer pictures light is the dominating factor[೭] ಸಧ್ಯ ಈ ಕೃತಿ ನ್ಯೂಯಾರ್ಕ್‌ನ ಮೆಟ್ರೊಪಾಲಿಟಿನ್ ಮ್ಯುಜಿಯಮ್ ನಲ್ಲಿ ಸಂಗ್ರಹಗೊಂಡಿದೆ.

ವೆರ್ಮಿಸೀಯರ್‌ನ ಅನೇಕ ಕಲಾಕೃತಿಗಳು ಜಗತ್ತಿನ ಪ್ರಖ್ಯಾತಕಲಾಸಂಗ್ರಹಾಲಯಗಳಲ್ಲಿ[೮] ರಕ್ಷಣೆಗೊಂಡು, ಈಗಲೂ ಸಹೃದಯರನ್ನು ಆಕರ್ಷಿಸುತ್ತಿವೆ. ೧೭ನೆಯ ಶತಮಾನದ ಚಿತ್ರಕಾರ ಜಾನ್ ವೆರ್ಮೀರ್ ತನ್ನ ಜೀವಿತ ಕಾಲದಲ್ಲಿ ಪ್ರಮುಖ ಕಲಾವಿದನೆನಿಸಿದ್ದ. ಆದರೆ ಇವನು

---

೭. Bernard Myers : 50 great Artist, Page 114

೮. There are some pictures such as the Allegory of faith (Newyork met. must) or the Allegory of painting (Vienna, K.H. Mus) which represents the painter in his studio that go beyond the domestic interior and these form a like with a small group of totally different scenes (Peter and Lindamurry : A dictionary of Art and Artists, Page-334)

ಸತ್ತ ಕೆಲವು ವರ್ಷಗಳಲ್ಲಿ ಜನ ಇವನನ್ನು ಸಂಪೂರ್ಣವಾಗಿ ಮರೆತುಬಿಟ್ಟರು, ಯಾತಕ್ಕೂ ಬಾರದವು ಎಂದು ಇವನ ಕೆಲವು ವರ್ಣಚಿತ್ರಗಳನ್ನು ಎಸೆದು ಬಿಟ್ಟಿದ್ದು ಉಂಟು. ಅನಂತರ ಇನ್ನೂರು ವರ್ಷಗಳ ಬಳಿಕ ಜನ ಆತ ಜಗತ್ತಿನ ಅತ್ಯಂತ ಶ್ರೇಷ್ಠ ವರ್ಣಚಿತ್ರಕಾರ ಎಂದರು. ಅಟ್ಟದಲ್ಲೋ ಹಳೆಯ ಗುದಾಮಿನಲ್ಲೋ ಸಿಕ್ಕ ಇವನ ವರ್ಣಚಿತ್ರಗಳು ಅಮೂಲ್ಯ ನಿಧಿಗಳಾದವು ಇವನ್ನು ಹರಾಜ ಮಾಡಲು ತಂದಾಗ ಮಾರುಕಟ್ಟೆಯಲ್ಲಿ ವಿಪರೀತ ನೂಕುನೂಗ್ಗಲು ಶುರುವಾಯಿತು.[೯] ಕೆಲವರು ವೆರ್ಮೀರ್‌ನ ಅಂಕಿತ ಹಾಕಿ ನಕಲಿ ಚಿತ್ರಗಳನ್ನು ಬರೆದು ಹಣಗಳಿಸಿದ್ದು ಉಂಟು. ೨೦ನೆಯ ಶತಮಾನದಲ್ಲಿ ನೆದರ್‌ಲೆಂಡ್‌ನವನೇ ಆದೊಬ್ಬ ಚಿತ್ರಕಾರ ವೆರ್ಮೀರ್‌ನನ್ನು ಅನುಕರಿಸಿ ಆರು ವರ್ಣಚಿತ್ರಗಳನ್ನು ರಚಿಸಿದ; ಅವು ವೆರ್ಮೀರ್‌ನ ಮೂಲಚಿತ್ರಗಳೆಂದು ಹೇಳಿ ಅವನ್ನು ಮಾರಿ ದೊಡ್ಡ ಮೊತ್ತದ ಹಣ ಗಳಿಸಿದ, ೧೯೪೬ರಲ್ಲಿ ಇವನ ದಷ್ಕೃತ್ಯ ಪತ್ತೆಯಾಯಿತು. ಆ ವೇಳೆಗಾಗಲೇ ಇವನು ಒಂದುವರೆ ಕೋಟಿ ರೂಪಾಯಿ ಗಳಿಸಿದ್ದ[೧೦]ನೆಂದು ತಿಳಿದು ಬಂದಿದೆ. ವೆರ್ಮೀರ್‌ನ ಪ್ರಖ್ಯಾತಿಯನ್ನು ಹೀಗೆ ದುರುಪಯೋಗ ಪಡಿಸಿಕೊಂಡದ್ದರಿಂದಲೇ ಅವನ ಕಲಾಕೃತಿಗಳ ನಿರ್ದಿಷ್ಟ ಅಂಕಿ ಅಂಶಗಳು ಉಪಲಬ್ಧವಾಗುತ್ತಿಲ್ಲ.

Jan vermeer offers the most impressive reflection of the wordly side of seventeenth century Dutch life its love of fine furniture. attractive women and lavish clothing, like Lenain, through on a more cosmopolitan level he glorifies common place objects and gives them an importance wich in another culture would be reserved for classical or holy scenes.[೧೧] ವೆರ್ಮೀರ್‌ನ ಕಲಾಕೃತಿಗಳಲ್ಲಿ ಹದಿನೇಳನೆಯ ಶತಮಾನದ ಡಚ್ಚ್‌ರ ಜೀವನದ ಹಲವಾರು ಅಂಶಗಳನ್ನು ನಾವು ಕಾಣಬಹುದಾಗಿದೆ.

ಹಗಲು ರಾತ್ರಿ, ಬೆಳಕು ನೆರಳುಗಳ ಬಹು ಸುಂದರವಾದ ಸಾಮರಸ್ಯದಿಂದೊಡಗೂಡಿದ ಚಿತ್ರ ಬರೆಯುವುದರಲ್ಲಿ ಜಾನ್ ವೆರ್ಮೀನದು ಪಳಗಿದ ಕೈ, ಹಾಗೆ ಬರೆದ ಚಿತ್ರವನ್ನು ನೋಡಿದಾಗ ಸಂಜೆಯ ಕಾಲದ ತಂಪುಗಾಳಿ, ಮೂಲೆ ಮೂಲೆಯಲ್ಲಿ ಬಿದ್ದಿರಬಹುದಾದ ಪ್ರಮಾಣಬದ್ಧ ಕತ್ತಲೆಯ ವಿನ್ಯಾಸ ನೈಜವಾಗಿ ಕಣ್ಣಿಗೆ ಕಂಗೊಳಿಸುವವು. ಈ ಚಿತ್ರಗಳು ಬ್ರೆಶ್‌ದಿಂದ ಬರೆಯದೇ ಈಗಿನ ಪೋಟೋಗ್ರಾಫಿಯೋ ಎಂದೆನಿಸಿಬಿಡುವುದು[೧೨] ಡಚ್ ಕಲಾವಿದರಲ್ಲಿ ಸೂಕ್ಷ್ಮವಿನ್ಯಾಸದ ತದ್ರೂಪ ಚಿತ್ರಕಾರನೆಂದು ಇವನನ್ನು ವಿಮರ್ಶಕರೊಬ್ಬರು[೧೩] ಕರೆದಿದ್ದಾರೆ.

---

೯. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೫೮೫

೧೦. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೫೮೬

೧೧. Bernard Myers : 50 Great Artists. Page - 112

೧೨. ಕಲಮದಾನಿ ಗುರುರಾಯ : ಪಾಶ್ಚಾತ್ಯ ಕಲಾವಿದರು, ಪುಟ-೫೯

೧೩. Peter and Lindamurry : A Dictionary of Art and Artists, Page-334.

ವೆರ್ಮೀರನ ಶೈಲಿ : ಈತನ ಕಲಾತಂತ್ರದ ಕುರಿತಾಗಿ 'ಹೊಗೆ'ಯವರು "In vermeer we encounter a true poet. Everthing he touches seems to acquire a unique and funforgetable quality. He tells us nothing about himself, he is silent on that subject. Yet he bestows upon the scene he paints. Even if it be the simple lace maker at hard work. An acent of puirty a pious concentration a modesty comdined with emotion. All of which suggest stal everything in his painting from the harmony of colours dominated by fawn and blue to the technique by which he applis colours without revealing any sing of a brush stroke conveys the outer world and his heart"[೧೪] ಎಂದು ಹೇಳಿರುವ ಈ ಮಾತುಗಳು ಗಮನಾರ್ಹವಾದವುಗಳಾಗಿವೆ. ವೆರ್ಮೀರ್‌ನ ಎಲ್ಲ ಕಲಾಕೃತಿಗಳಲ್ಲಿ ನಾವು ಈ ಅಂಶಗಳನ್ನು ಸಾಮಾನ್ಯವಾಗಿ ಕಾಣಬಹುದು Vermeer's art has the quality of cool. Well planned rightness to the full. He hold as it were silver mirror up to nature, but he tells no merchy pleasant tale as he holds it. His work is as intensely personal as any that was ever done, but it offers personality disengaged from self consciousness duringmaking process.[೧೫] ಎಂಬುದಾಗಿ ಬರೆಯುತ್ತಾರೆ. ಇಲ್ಲಿ ಅವನ ಕೃತಿಗಳ ಒಟ್ಟು ಆಶಯವನ್ನು ತಿಳಿಸಲಾಗಿದೆ.

ಬಾರೋಕ್ ವಲಯದ ಚಿತ್ರಕಲಾ ಸಂಪ್ರದಾಯದಲ್ಲಿ ಕೆಹ್ರವಾಜೋ ಮತ್ತು ರೆಂಬ್ರಾಂಟ್‌ರ ನೆರಳು ಬೆಳಕುಗಳ ವಿಲಾಸವನ್ನು ತೋರಿಸುವುದರಲ್ಲಿ ಈತ ಪ್ರಭಾವಿತನಾಗಿ, ಬೆಳಕಿನ ಚಿತ್ರೀಕರಣದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಗಳಿಸಿ ಪ್ರಸಿದ್ಧಿಗೆ ಬಂದಿದ್ದಾನೆ. ಚಿತ್ರ ವಸ್ತುಗಳ ಮೇಲೆ ಬಿದ್ದು ಪ್ರತಿಫಲಿಸುವ ಬೆಳಕುಗಳನ್ನು ಬಿಂಬಿಸುವ ವೈಶಿಷ್ಟ ದಿಂದಾಗಿಯೂ, ಗ್ರಹಾಂತರ ದೃಶ್ಯಗಳಲ್ಲಿ ಅವಕಾಶ ಮತ್ತು ಆವರಣಗಳನ್ನು ಕಲ್ಪಿಸಿದ ರೀತಿಯೂ ಅವನನ್ನು ಪ್ರಸಿದ್ಧನನ್ನಾಗಿ ಮಾಡಿದೆ.[೧೬] ತನ್ನ ವೈಯಕ್ತಿಕ ಹಿರಿಮೆಯನ್ನು ಇಲ್ಲಿ ಆತ ಸಾಧಿಸಿಕೊಂಡಿದ್ದಾನೆ. ವೆರ್ಮೀರ್‌ನ ಕಲಾಕೃತಿಗಳಲ್ಲಿ ಅರ್ಧಕ್ಕರ್ಧದಷ್ಟು ಚಿತ್ರಗಳಲ್ಲಿ ಒಬ್ಬಳೇ ಹೆಂಗಸಿನ ರೂಪವನ್ನು ಕಾಣಬಹುದು. ನೀಲಿ ಮತ್ತು ನಸುಹಳದಿ ಇವನಿಗೆ ಇಷ್ಟವಾದ ಬಣ್ಣಗಳು. ಇವನ ಚಿತ್ರಗಳಲ್ಲಿ ಕಾಣುವ ಮನುಷ್ಯಾಕೃತಿಗಳು ಸಾಮಾನ್ಯವಾಗಿ ಈ ಬಣ್ಣಗಳ ಉಡುಪನ್ನೇ ಧರಿಸಿರುತ್ತವೆ. ಸೂರ್ಯಪ್ರಕಾಶದ ಪರಿಣಾಮವನ್ನು ತೋರಿಸಲು ಇವನು ಕಡುನೀಲಿ ಬಣ್ಣವನ್ನು ಉಪಯೋಗಿಸುತ್ತಿದ್ದ[೧೭]ನೆಂದು ವಿಮರ್ಶಕರು ಇವನ ವರ್ಣಲೇಪನವನ್ನು ಕುರಿತು ಬರೆದಿದ್ದಾರೆ. ವೆರ್ಮೀರ್‌ನು ರಚಿಸಿದ ಚಿತ್ರಗಳು ಗಾತ್ರದಲ್ಲಿ ಹೆಚ್ಚಾಗಿ ಚಿಕ್ಕವುಗಳು ಅವು ಹೆಚ್ಚಾಗಿ ಗೃಹಜೀವನಕ್ಕೆ ಸಂಬಂಧಿಸಿದವುಗಳು.

---

೧೪. Rene Huyghe : Art treasures of the louvre, page-67

೧೫. Herman J. Wechsler (Edt) : The pocket Book of old masters, page-100

೧೬. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ-೨೯೧

೧೭. ಜ್ಞಾನಗಂಗೋತ್ರಿ : ಸಂಪುಟ-೫, ಪುಟ-೫೮೬.

ಬರೆಯುತ್ತಿರುವ, ನೋಡುತ್ತಿರುವ ಮನೆಗೆಲಸ ಮಾಡುತ್ತಿರುವ ಸಂಗೀತದ ಉಪಕರಣಗಳನ್ನು ನುಡಿಸುತ್ತಿರುವ ಸನ್ನಿವೇಶಗಳ ವಿಷಯವೇ ಬಹುಪಾಲು ಚಿತ್ರಗಳ ವಿಷಯವಾಗಿವೆ. ಇವನ ಚಿತ್ರಗಳ ತಂತ್ರವು ಯಾವುದೇ ವಸ್ತುವನ್ನು ನೈಜವಾಗಿ ಚಿತ್ರಿಸುವುದು, ಮೂಲವಸ್ತುವಿನ ಯಾವ ಗುಣಗಳನ್ನು ಬಿಡದೆ ಚಿತ್ರಾಂಕಿತಗೊಳಿಸುವುದು, ಸೂಕ್ಷ್ಮವಾದ ನಿರೀಕ್ಷಣ ಶಕ್ತಿ ವೆರ್ಮೀರ್‌ನ ಕಲಾಕೃತಿಗಳಲ್ಲಿ ಎದ್ದು ಕಾಣಿಸುತ್ತದೆ. ಬಣ್ಣಗಳ ಬಳಕೆ ಹಿತಮಿತವಾದದ್ದು. ಶಾಂತಸ್ವಭಾವದ ಭಾವನೆಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ನೆರಳು ಬೆಳಕಿನ ತದ್ರೂಪತೆಯ ಈ ಶೈಲಿಯಿಂದ ವೆರ್ಮೀರ್ ಹೆಚ್ಚು ಪ್ರಖ್ಯಾತಿಯನ್ನು ಪಡೆದಿದ್ದಾನೆ.

೧೬೭೫ ಡಿಸೆಂಬರ್ ೧೫ ರಂದು ಜಾನ್ ವೆರ್ಮೀರ್ ತೀರಿಕೊಂಡ. ಅವನು ಕಡಿಮೆ ಕಲಾಕೃತಿಗಳನ್ನು ನಿರ್ಮಿಸಿದರೂ ಸತ್ವದಿಂದ ಬಹುಮೌಲಿಕವಾದ ಕೃತಿಗಳೆಂದು ತಜ್ಞರು ಗುರುತಿಸಿದ್ದಾರೆ. ಬಾರೋಕ್ ಕಲಾ ಸಂಪ್ರದಾಯದ ವೆರ್ಮೀರ್‌ನ ಕೃತಿರಚನೆಗಳು ಹೆಚ್ಚಾಗಿ ಕೌಟುಂಬಿಕ ಜೀವನವನ್ನು ಬಿಟ್ಟು ಹೊರಬರಲಿಲ್ಲವೆಂಬುದು ಆಶ್ಚರ್ಯವನ್ನುಂಟುಮಾಡುತ್ತದೆ. ಪೌರಾಣಿಕ ಚಿತ್ರಗಳಿಗೆ ಗೌಣ ಸ್ಥಾನ. ರಾಜಕೀಯ ಚಿತ್ರಗಳಿಗೆ ಅವಕಾಶವೇ ಇಲ್ಲ, ವೈವಿಧ್ಯಮಯ ಕಲಾಕೃತಿಗಳ ಗೊಡವೆಗೆ ಈತ ಹೋದಂತಿಲ್ಲ. ಸರಳ ಸಹಜವಾದ ತನ್ನ ದೈನಂದಿನ ಬದುಕಿನ ಸನ್ನಿವೇಶಗಳ ಚಿತ್ರಗಳನ್ನೇ ಮುಖ್ಯವಾಗಿ ಚಿತ್ರಿಸಿದ್ದಾನೆ. ಅಲ್ಲದೆ ತನ್ನ ಸಮಕಾಲೀನ ಮತ್ತು ಹಿಂದಿನ ಕಲಾವಿದರ ಪ್ರಭಾವದಿಂದ ಮುಕ್ತನಾಗಿಲ್ಲ. ಸತ್ತನಂತರ ಇವನೊಬ್ಬ ಉನ್ನತಮಟ್ಟದ ವ್ಯಕ್ತಿಯೆಂದು ಗುರುತಿಸಲ್ಪಟ್ಟ.

ವೆರ್ಮೀರ್‌ನ ಜೀವಿತದ ಕೊನೆಯ ದಿನಗಳು ತುಂಬ ಕಷ್ಟದಾಯಕವಾಗಿದ್ದವು ಇದಕ್ಕೆ ಕಾರಣ ಆತನ ಮಿತಿಮೀರಿದ ಖರ್ಚು, ಆದರೂ ಎದೆಗುಂದದೆ ತನ್ನ ಕಾಯಕದಲ್ಲಿಯೇ ಕೊನೆಯ ಉಸಿರನ್ನು ಎಳೆಯುತ್ತಾನೆ. "ಈತನ ಬ್ರೆಶ್ ಕೇವಲ ಸುಖವನ್ನೀಯುವ ಸನ್ನಿವೇಶಗಳನ್ನೇ ಬರೆಯುತ್ತಿತ್ತು."[೧೮] ಎಂದು ವಿಮರ್ಶಕರು ಈತನ ಬಗೆಗೆ ಹೇಳಿರುವ ಮಾತುಗಳು ಈತನು ಕಲೆಗೆ ಕೊಟ್ಟ ಮಹತ್ವವನ್ನು ತಿಳಿಯಪಡಿಸುತ್ತವೆ. ಈಗಲೂ ಈತ ಚಿಕ್ಕವನಿರುವಾಗ ಬರೆದ ಎರಡು ಬಹು ದೊಡ್ಡ ಚಿತ್ರಗಳು ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿವೆ. ಮುಂದಿನ ಆತನ ಕಲಾಕೃತಿಗಳು ಹಾಲೆಂಡ್‌ನ ಜನರ ವಸ್ತುಗಳ ಹುಡುಗಿಯರ ನೈಸರ್ಗಿಕ ಸೌಂದರ್ಯಗಳನ್ನು ಸೆರೆಹಿಡಿದಿರುವ ಚಿತ್ರಗಳೇ ಆಗಿವೆ ಎಂಬ ಮಾತು ಸತ್ಯವಾದುದು. ವೆರ್ಮೀರ್‌ನನ್ನು ಅನುಕರಿಸಲು ಅನೇಕರು ಪ್ರಯತ್ನಿಸಿ ವಿಫಲರಾಗಿದ್ದಾರೆ. ಕಾರಣ ಆತನು ಅತೀ ಸೂಕ್ಷ್ಮವಾದ ವಿವರಗಳನ್ನು ಚಿತ್ರದಲ್ಲಿ ಚಿತ್ರಾಂಕಿತಗೊಳಿಸುತ್ತಿದ್ದ. ಹೀಗಾಗಿ ಉಳಿದ ಕಲಾವಿದರಿಗೆ ಈತ ನಿಲುಕದ ವ್ಯಕ್ತಿಯೆನಿಸಿಕೊಂಡನು. ಏನೇ ಇದ್ದರೂ ವೆರ್ಮೀರ್ ಕಲಾಲೋಕದಲ್ಲಿ ಅಚ್ಚಳಿಯದೆ ತನ್ನ ಹೆಸರನ್ನು ದಾಖಲು ಮಾಡಿದ್ದಾನೆ. ಇಂದು ಅವನ ಬಗ್ಗೆ ಅವನ ಕಲಾಕೃತಿಗಳ ಬಗ್ಗೆ ಗೌರವದ ಭಾವನೆ ಉಂಟಾಗಿದೆ. ಈಗ ಕಲಾಭ್ಯಾಸಿಗಳಿಗೆ ವೆರ್ಮೀರ್‌ನ ಕಲಾಕೃತಿಗಳು ಅಮೂಲ್ಯ ನಿಧಿಗಳಾಗಿವೆ.

❑

---

೧೮. ಕಲಮದಾನಿ ಗುರುರಾಯ : ಪಾಶ್ಚಾತ್ಯ ಕಲಾವಿದರು, ಪುಟ-೫೯



iv ಪ್ರಾಂಜ್‌ಹಾಲ್ಸ

೧೫೮೫–೧೬೬೬

ಪಾಶ್ಚಿಮಾತ್ಯ ಕಲಾವಲಯದಲ್ಲಿ ಬಹುಪಾಲು ಕಲಾವಿದರು ಅಪಾರವಾದ ಪ್ರತಿಭೆಯನ್ನು ಹೊಂದಿದ್ದರೂ ಬೆಳಕಿಗೆ ಬಾರದೆ ತುಂಬ ಕಷ್ಟದಾಯಕವಾದ ಜೀವನ ನಡೆಯಿಸಿ ಮರೆಯಾಗಿದ್ದಾರೆ. ಕೆಲವರು ಉತ್ತಮ ಸ್ಥಾನವನ್ನು ಹೊಂದಿ ಸಾಕಷ್ಟು ಹಣ ಗಳಿಸಿದರೂ ಕೆಟ್ಟ ಹವ್ಯಾಸಗಳಿಂದ ಕೊನೆಗಾಲದಲ್ಲಿ ಭಿಕ್ಷುಕರಂತೆ ದಾರಿದ್ರ್ಯದ ಜೀವನ ಸಾಗಿಸಿದ್ದಾರೆ. ಇಂಥ ಕಲಾವಿದರ ಸಾಲಿನಲ್ಲಿ ಫ್ರಾನ್ಸ್‌ಹಾಲ್ಸ್‌ನು ಒಬ್ಬ. ಡಚ್ ಬಾರೋಕ್ ಕಲಾಸಂಪ್ರದಾಯದ ಪ್ರಖ್ಯಾತ ಕಲಾವಿದರಾದ ರೆಂಬ್ರಾಂಟ್, ವೆರ್ಮೀರ್‌ರ, ನಂತರದ ಸ್ಥಾನವನ್ನು ಈತ ಪಡೆದುಕೊಂಡಿದ್ದಾನೆ. ವ್ಯಕ್ತಿ ಚಿತ್ರಗಳ ರಚನೆಯಲ್ಲಿ ಸಿದ್ಧಹಸ್ತಕನೆಂಬ ಅಗ್ಗಳಿಕೆಯು ಇವನಿಗಿದೆ. ಆ ಕಾಲದಲ್ಲಿ ಸಮೂಹಸಚಿತ್ರಗಳ ರಚನೆಯ ಸುಗ್ಗಿಯೇ ಪ್ರಾರಂಭವಾಗಿತ್ತು. ಸಮೂಹದ ಪ್ರತಿಯೊಬ್ಬರಿಗೂ ಮಹತ್ವಕೊಟ್ಟು ಚಿತ್ರಿಸುವುದು ಕೆಲವು ಸಲ ತೊಂದರೆಯಾಗಿತ್ತು. ರೆಂಬ್ರಾಂಟ್‌ನು ಈ ತೊಂದರೆಯಿಂದಲೇ ಅಪಖ್ಯಾತಿಗೆ ಒಳಗಾದನು. ಇಂಥ ಕೊರತೆಯನ್ನು ಸೂಕ್ತ ರೀತಿಯಲ್ಲಿ ತನ್ನದೆ ಆದ ಸ್ವಂತಿಕೆಯ ತಂತ್ರದಿಂದ ಹೋಗಲಾಡಿಸಿದ ಕೀರ್ತಿ ಫ್ರಾನ್ಸ್‌ಹಾಲ್ಸ್‌ಗೆ ಸಲ್ಲುತ್ತದೆ. ಪ್ರಸ್ತುತ ಅವನ ಜೀವನ ಹಾಗೂ ಕಲಾಕೃತಿಗಳ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

ಬಾಲ್ಯಜೀವನ : ಫ್ರಾನ್ಸ್‌ಹಾಲ್ಸ್‌ನು ಬೆಲ್ಜಿಯಮ್ ದೇಶದ ಅಂಟ್‌ವರ್ಪ್‌ದ ಹಾರ್ಲೆಮ್‌ನ ಬಹು ದೊಡ್ಡ ಮನೆತನದಲ್ಲಿ ಕ್ರಿ.ಶ. ೧೫೮೫ರಲ್ಲಿ ಜನಿಸಿದನು. ಇವನ ಪಾಲಕ ಕರೆಲ್ ವಾನವಲಂಡೆರ್ ಎಂಬುದಾಗಿ ತಿಳಿದು ಬರುತ್ತದೆ. ಹಾಲ್ಸ್ ಚಿಕ್ಕವನಾಗಿದ್ದಾಗ ಸ್ಪೇನ್‌ದೇಶದ ಸೈನ್ಯದ ದಾಳಿಗೆ ಹಾರ್ಲೆಮ್ ಮನೆತನ ತುತ್ತಾಯಿತು. ಇದರ ಪರಿಣಾಮವಾಗಿ ಅಂಟ್‌ವರ್ಪ್‌ನ್ನು ಬಿಟ್ಟು ಹಾರ್ಲೆಮ್‌ಗೆ ಬಂದು ನೆಲೆಸಬೇಕಾಯಿತು. ತನ್ನ ೨೦ನೆಯ ವಯಸ್ಸಿನಲ್ಲಿ ಇಲ್ಲಿಯೇ ಹಾಲ್ಸ್ ಕಾರಲ್‌ವ್ಹಾನ್ ಮ್ಯಾಂಡರನ ಶಿಷ್ಯನಾಗಿ ಚಿತ್ರಕಲಾಭ್ಯಾಸ ಮಾಡಿದನು. ಹಾಗೆಯೇ ಖ್ಯಾತ ಕಲಾವಿದ ರೂಬೆನ್ಸ್‌ನ ಪ್ರಭಾವಕ್ಕೆ ಸಿಕ್ಕು ಅವನ ಕಲಾಶೈಲಿಯಲ್ಲಿ ಕೃತಿ ರಚಿಸಲು ಪ್ರಾರಂಭಮಾಡುತ್ತಾನೆ.

೧೬೦೮ರಲ್ಲಿ ಹಾಲ್ಸ್‌ನು 'ಎನೆಟ್' ಎಂಬುವಳೊಂದಿಗೆ ವಿವಾಹವಾದನು. ಸೆರೆಗುಡುಕನಾದ ಹಾಲ್ಸ್ ಕುಡಿತದ ಹವ್ಯಾಸದಿಂದಾಗಿ ಮೊದಲ ಹೆಂಡತಿಯನ್ನು ಕಳೆದ ಕೊಂಡನು. ಇತನ ವೈವಾಹಿಕ ಜೀವನ ಚೆನ್ನಾಗಿರಲಿಲ್ಲ ಇದರ ಸಲುವಾಗಿ ಹಾಲ್ಸ್ ಮಾಮಲೆದಾರನಿಂದ ಅನೇಕ ಸಲ ಶಿಕ್ಷೆಯನ್ನು ಪಡೆಯುತ್ತಾನೆ. 'ಎನೆಟ್'ಳು ತೀರಿಕೊಂಡ ಮರುವರ್ಷವೇ ಅಂದರೆ ೧೬೧೭ರಲ್ಲಿ 'ಈಜಬೆಥ್' ಎಂಬುವಳನ್ನು ಮದುವೆಯಾಗುವನು. ಆದರೆ ಈಕೆಯೊಂದಿಗೆ ಪ್ರೀತಿಯಿಂದ ಸಂಸಾರ ಮಾಡುತ್ತಾನೆ. ಇವನ ಏಳು ಜನ ಗಂಡುಮಕ್ಕಳು ಮತ್ತು ಸಹೋದರ ಡರ್ಕ್‌ಹಾಲ್ಸ್ ಇವರು ಫ್ರಾಂಜ್‌ಹಾಲ್ಸ್‌ನ ಕೈಯಲ್ಲಿ ಕಲಾಭ್ಯಾಸ ಮಾಡುತ್ತಾರೆ. ಹಾಲ್ಸ್‌ನ ಮಕ್ಕಳಾದ ಹರ್ಮನ್, ಫ್ರಾನ್ಸ್ ರೈನೀರ್ಸ್ ಮತ್ತಿತರರು ಮುಂದೆ ಪ್ರಸಿದ್ಧರಾಗಿದ್ದಾರೆ.

ಫ್ರಾನ್ಸ್ ಹಾಲ್ಸ್‌ನು ದೊಡ್ಡ ಕುಟುಂಬದ ಜವಾಬ್ದಾರಿಯೊಂದಿಗೆ ತನ್ನ ಕೆಟ್ಟ ಹವ್ಯಾಸಗಳನ್ನು ದುಂದುಗಾರಿಕೆಯನ್ನು ಬೆಳೆಯಿಸಿಕೊಂಡು ಬಂದದ್ದರಿಂದ ಬಡತನದ ದಾರಿದ್ರ್ಯತನದಲ್ಲಿಯೇ ಜೀವನವನ್ನು ಸವೆಸಬೇಕಾಯಿತು. ಕೊನೆಗೆ ಈ ತಾಪತ್ರಯವನ್ನು ತಾಳಲಾರದೆ poor relief ಫಂಡಿಗಾಗಿ ಅರ್ಜಿ ಹಾಕಿಕೊಳ್ಳುತ್ತಾನೆ. ಈ ತೊಂದರೆಯಲ್ಲಿಯೂ ಚಿತ್ರರಚನೆಯ ಹವ್ಯಾಸವನ್ನು ಮಾತ್ರ ಬಿಡಲಿಲ್ಲವೆಂಬುದು ಹಾಲ್ಸ್‌ನ ವೈಯಕ್ತಿಕ ಹಿರಿಮೆಯೆನ್ನಬಹುದು.

ಹಾಲ್ಸ್‌ನು ಸಂಖ್ಯೆಯಲ್ಲಿ ಸುಮಾರು ೨೫೦ಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ೨೦೦ಕ್ಕೂ ಹೆಚ್ಚು ವ್ಯಕ್ತಿಚಿತ್ರಗಳನ್ನು ರಚಿಸಿರುವುದು ಇವನ ವೈಶಿಷ್ಟ್ಯವಾಗಿದೆ. ಈತನು ತನ್ನ ಪ್ರಥಮ ಕೃತಿಯನ್ನು ೧೬೧೬ರಲ್ಲಿ ರಚಿಸಿದನೆನ್ನಲಾಗುತ್ತಿದೆ. ಇಲ್ಲಿ ಮಾದರಿಗಾಗಿ ಕೆಲವು ಕೃತಿಗಳ ಪರಿಚಯ ಮಾಡಿಕೊಡಲಾಗಿದೆ.

ಫ್ರಾಂಜ್‌ಹಾಲ್ಸ್‌ನ ಕಲಾಕೃತಿಗಳು

೧. ಹಿಗ್ಗಿನ ಉಡಾಳ (ವ್ಯಕ್ತಿಯ ಪೊ ಟ್ರೇಟ್ ಚಿತ್ರ)
೨. ನಗುಮುಖದ ತರುಣನ ಭಾವಚಿತ್ರ
೩. ಸೇಂಟ್ ಜಾರ್ಜನ ಪೌರ ಕಾವಲುಗಾರರು
೪. ಸೇಂಟ್ ಆ್ಯಂಡ್ರೋನ ಪೌರ ಕಾವಲುಗಾರರು
೫. ಸೇಂಟ್ ಎಲಿಜೆಬಿತ್ ಆಸ್ಪತ್ರೆಯ ಅಧಿಕಾರಿಗಳು

೧. ಹಿಗ್ಗಿನ ಉಡಾಳ : ಫ್ರಾಂಜ್ ಹಾಲ್ಸ್‌ನು ಈ ಕೃತಿಯನ್ನು ಕ್ರಿ.ಶ. ೧೬೨೭ರಲ್ಲಿ ರಚಿಸಿದ್ದಾನೆ. ವ್ಯಕ್ತಿಯೊಬ್ಬನ ಭಾವನೆಗಳನ್ನು ಯಥಾವತ್ತಾಗಿ ಕೃತಿಯಲ್ಲಿ ಸೆರೆ ಹಿಡಿಯಲಾಗಿದೆ. ಆಸನವೊಂದರಲ್ಲಿ ಟೊಂಕಕ್ಕೆ ಪಟ್ಟಿಯೊಂದನ್ನು ಕಟ್ಟಿಕೊಂಡು ಸಂತೋಷದಲ್ಲಿ ಕುಳಿತುಕೊಂಡಿರುವ ಸನ್ನಿವೇಶದ ಚಿತ್ರವಿದಾಗಿದೆ. ಕಪ್ಪುವರ್ಣದ ತಲೆಯ ಮೇಲಿನ ಹ್ಯಾಟು (ಟೊಪ್ಪಿಗೆ) ಬಣ್ಣದ ಸಮತೋಲನವನ್ನು ಕಾಯ್ದುಕೊಳ್ಳುವ ತುಂಬ ಸಹಕಾರಿಯಾಗಿದೆ. ಕೆಂಪುವರ್ಣದ ಭಾವಾವೇಶ, ತೊಟ್ಟುಕೊಂಡಿರುವ ಬಟ್ಟೆಯಲ್ಲಿಯ ನಿರಿಗೆಗಳು ನೈಜವಾಗಿ ಮೂಡಿಬಂದಿವೆ. ಅಂಗೈಯೆತ್ತಿ ಏನನ್ನೋ ಹೇಳುತ್ತಿರುವ ಭಂಗಿಯ ಈ ವ್ಯಕ್ತಿಯಲ್ಲಿ ಉಕ್ಕುವ ತಾರುಣ್ಯದ ಭಾವನೆಗಳನ್ನು ಹಾಲ್ಸ್ ಲಯಬದ್ಧವಾಗಿ ಚಿತ್ರಿಸಿದ್ದಾನೆ. ಈಗ ಈ ಕಲಾಕೃತಿಯು ಅಮ್‌ಸ್ಟರಡಮ್‌ನ 'ರಿಕ್ಸ್'

ಮ್ಯುಜಿಯಮ್‌ನಲ್ಲಿ ಸಂಗ್ರಹಗೊಂಡಿದೆ. ಅಲ್ಲದೆ ಅನೇಕ ಸಹೃದಯರನ್ನು ಆಕರ್ಷಿಸಿ ಜಗದ್‌ವಿಖ್ಯಾತಿಯನ್ನು ಪಡೆದಿದೆ.

೨. ನಗುಮುಖದ ತರುಣನ ಭಾವಚಿತ್ರ : ಕ್ರಿ.ಶ. ಸು. ೧೬೫೦ರಲ್ಲಿ ಇದು ರಚನೆಗೊಂಡಿದೆ. ತೈಲವರ್ಣದ ಈ ಎದೆಮೊಗದ ಭಾವಚಿತ್ರದಲ್ಲಿ ಎದೆಯ ಮೇಲೆ ಕೈ ಇಟ್ಟುಕೊಂಡಿರುವ, ಗಾಂಭೀರ್ಯದ ನಗುವಿನ ತುಂಬುಗಲ್ಲದ ಸುಂದರ ಯುವಕನ ಚಿತ್ರವಿದಾಗಿದೆ. ಈ ಕೃತಿಯಲ್ಲಿಯೂ ತಲೆಯ ಮೇಲೆ ಹ್ಯಾಟಿದೆ. ನೀಳವಾದ ಕೇಶರಾಸಿಯನ್ನು ಹೊಂದಿದ ಈ ತರುಣನ ಆಕರ್ಷಕ ಕಣ್ಣುಗಳು ಮುಗುಳನಗೆಯ ಮೋಹಕ ಭಂಗಿಯಿಂದ ತುಂಬ ಪ್ರಖ್ಯಾತಿಯನ್ನು ಪಡೆದಿದೆ ಚಿತ್ರದ ಹಿನ್ನೆಲೆಯೂ ಹಿತಮಿತವಾಗಿ ಬಳಕೆಯಾಗಿದೆ. ಬಣ್ಣಗಳ ಸಾಮರಸ್ಯ ಎಲ್ಲಿಯೂ ಕೃತ್ರಿಮವೆನಿಸುವುದಿಲ್ಲ. ಕೊರಳಲ್ಲಿ ಕಟ್ಟಿಕೊಂಡಿರುವ ವಸ್ತ್ರದ ವಿನ್ಯಾಸ ಅದರ ಸಣ್ಣಸಣ್ಣ ದಾರದ ಗೊಂಡೆಗಳನ್ನು ಸಹ ಹಾಲ್ಸ್ ಗಂಭೀರವಾಗಿ ತೆಗೆದುಕೊಂಡು ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಒಟ್ಟಾರೆ ಆಕರ್ಷಕವರ್ಣದಿಂದ ಕೃತಿ ಕಂಗೊಳಿಸುತ್ತದೆ. ಸಧ್ಯ 'ವ್ಹೆಲೆಸಸ್' ಕಾಲೇಜದಲ್ಲಿ ಸಂಗ್ರಹಿಸಲ್ಪಟ್ಟಿದೆ.

೩. ಸೇಂಟ್ ಜಾರ್ಜನ ಪೌರ ಕಾವಲುಗಾರರು : ಪ್ರಾಂಜ್ ಹಾಲ್ಸ್ ಈ ಕೃತಿಯನ್ನು ಮೂರು ಸಲ ಚಿತ್ರಿಸಿದ್ದಾನೆ. ೧೬೧೬, ೧೬೨೬, ೧೬೩೯, ಹೀಗೆ ಬೇರೆ ಬೇರೆ ಕಾಲಗಳಲ್ಲಿ ಚಿತ್ರಿಸಿದ ರೀತಿ ಆಯಾ ಕೃತಿಗಳಲ್ಲಿ ಸ್ಪಷ್ಟವಾಗಿ ಮೂಡಿದೆ. ಶೈಲಿಯಲ್ಲಿ ವರ್ಣವಿನ್ಯಾಸದಲ್ಲಿ ಬದಲಾವಣೆಯಾದುದನ್ನು ಕಾಣಬಹುದಾಗಿದೆ. ಹಿನ್ನೆಲೆಯ ವರ್ಣದ ಬಳಕೆ ಚಿತ್ರದ ಔನ್ನತ್ಯಕ್ಕೆ ಬಾಧೆ ಬಾರದಂತೆ ತುಂಬ ತಾಳ್ಮೆಯಿಂದ ಚಿತ್ರಾಂಕಿತಗೊಳಿಸಲಾಗಿದೆ. ಬಣ್ಣದ ವಿನ್ಯಾಸ ವ್ಯಕ್ತಿಗಳ ವಿವಿಧ ಭಂಗಿಗಳು ಆಯಾ ವ್ಯಕ್ತಿಗಳ ಸ್ವಭಾವವನ್ನು ತಿಳಿಸುವಂತೆ ಚಿತ್ರಿಸಲಾಗಿದೆ. ಹಾಲ್ಸ್‌ನ ಪ್ರಸಿದ್ಧ ಚಿತ್ರಗಳಲ್ಲಿ ಇದನ್ನು ಹೆಸರಿಸಬಹುದಾಗಿದೆ. ಹಾಲ್ಸ್ ಸಮೂಹ ಚಿತ್ರಗಳಲ್ಲಿ ಎಲ್ಲ ವ್ಯಕ್ತಿಗಳಿಗೂ ಕೊಟ್ಟಿರುವ ಸಮಾನ ಸ್ಥಾನಮಾನಗಳು ಇಲ್ಲಿ ಗಮನ ಸೆಳೆಯುತ್ತವೆ.

೪. ಸೇಂಟ್ ಆ್ಯಂಡ್ರೊನ ಪೌರ ಕಾವಲುಗಾರರು : ಕ್ರಿ.ಶ. ೧೬೪೧ರಲ್ಲಿ ರಚನೆಗೊಂಡಿದೆ. ಪ್ರಾಂಜ್‌ಹಾಲ್ಸ್ ಸೃಷ್ಟಿಗೈದ ಪ್ರಖ್ಯಾತ ಎಂಟು ತೈಲವರ್ಣ ಚಿತ್ರಗಳಲ್ಲಿ ಈ ಕೃತಿಯೂ ಒಂದು ಇಲ್ಲಿ ಅವನದೆ ಆದ ವರ್ಣಲೇಪನದ ಬಳಕೆ, ಸ್ವಂತಿಕೆಯ ರೇಖಾವಿನ್ಯಾಸದ ಭಾವನೆಗಳು ಚೈತನ್ಯಪೂರ್ಣತೆಯ ಪ್ರತೀಕವಾಗಿವೆ. ಹಾಲೆಂಡಿನ ಕಲಾವಿದರಲ್ಲಿ ಸಮೂಹ ಚಿತ್ರಗಳ, ವ್ಯಕ್ತಿಚಿತ್ರಗಳ, ಅತ್ಯಂತ ಶ್ರೇಷ್ಠ ಕಲಾಕಾರನೆಂದು ಹಾಲ್ಸ್ ಪ್ರಖ್ಯಾತಿ ಗಳಿಸಿದ್ದಾನೆ. ಇಲ್ಲಿಯ ವರ್ಣವಿನ್ಯಾಸ, ವ್ಯಕ್ತಿಗಳ ಸಂಯೋಜನೆಯ ತಂತ್ರದಿಂದಾಗಿ ಕೃತಿ ಸೊಬಗಿನಿಂದ ಆಕರ್ಷಿಸುತ್ತದೆ.

೫. ಸೇಂಟ್ ಎಲಿಜೆಬಿತ್ ಆಸ್ಪತ್ರೆಯ ಅಧಿಕಾರಿಗಳು : ಕ್ರಿ.ಶ. ೧೬೪೧ರಲ್ಲಿ ಈ ಕೃತಿ ರೂಹುದಳೆದಿದೆ. ಹಾಲ್ಸ್‌ನ ಅತ್ಯಂತ ಪ್ರಖ್ಯಾತಿಯ ಚಿತ್ರಗಳಲ್ಲಿ ಈ ಚಿತ್ರಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಪ್ರಖ್ಯಾತ ವರ್ಣಚಿತ್ರಕಾರ ರೆಂಬ್ರಾಂಟ್‌ನ "ಸಭಾಸದರು" ಕೃತಿಯೊಂದಿಗೆ ಇದು ಹೊಲಿಸಲ್ಪಡುತ್ತದೆ. ರಿಂಬ್ರಾಂಟ್‌ನ ವರ್ಣಗಾರಿಕೆಯ ಲೇಪನದ ಶೈಲಿಯೇ ಬೇರೆ ಹಾಲ್ಸ್‌ನ ಶೈಲಿಯೇ ಬೇರೆ. ಸೂಕ್ಷ್ಮವಾಗಿ ಈ ಎರಡು ಕಲಾಕೃತಿಗಳನ್ನು ಅವಲೋಕಿಸಿದಾಗ ಈ

ಮಾತು ಸ್ಪಷ್ಟವಾಗುತ್ತದೆ. ಸತ್ವವಾಗಿ ಈ ಎರಡು ಕಲಾಕೃತಿಗಳನ್ನು ಅವಲೋಕಿಸಿದಾಗ ಈ ಮಾತು ಸ್ಪಷ್ಟವಾಗುತ್ತದೆ. ಸತ್ವದ ಗುಣಗ್ರಾಹ್ಯದ ದೃಷ್ಟಿಯಿಂದ ಆಯಾ ಕೃತಿಯ ಮೌಲ್ಯ ಅವುಗಳಿಗೆ ಇದ್ದೆ ಇದೆ ಎಂಬುದನ್ನು ಗಮನಿಸಬೇಕು. ಹಾಲ್ಸ್ ರೆಂಬ್ರಾಂಟ್‌ನಂತಹ ದೈತ್ಯ ಕಲಾವಿದರ ಜೊತೆ ಜೊತೆಗೆ ತನ್ನತನವನ್ನು ಉಳಿಸುವ ಪ್ರಯತ್ನವನ್ನು ಅವನ ಅನೇಕ ಕಲಾಕೃತಿಗಳಲ್ಲಿ ಮಾಡಿದ್ದಾನೆ ಎಂಬುದನ್ನು ಇಲ್ಲಿ ಹೇಳಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ರೆಂಬ್ರಾಂಟ್‌ನನ್ನು ಮೀರಿ ಈತನು ತನ್ನ ಕೈಚಳಕವನ್ನು ಇಂತಹ ಸಮೂಹ ಚಿತ್ರಗಳಲ್ಲಿ ತೋರಿಸಿದ್ದಾನೆ. ಇಲ್ಲಿ ಬಳಸಿದ ಸಂಯೋಜನೆಯ ಕಲಾತ್ಮಕ ವಿನ್ಯಾಸಗಳಿಂದಾಗಿ ಈ ಕೃತಿ ಜನಪ್ರಿಯವಾಗಿದೆ ಎಂದು ಹೇಳಬಹುದು.

ಫ್ರಾಂಜ್ ಹಾಲ್ಸ್‌ನ ಪ್ರಖ್ಯಾತ ಇನ್ನೂ ಅನೇಕ ಕೃತಿಗಳನ್ನು ಇಲ್ಲಿ ಹೆಸರಿಸಬಹುದು. ದಿ ಓಲ್ಡಮ್ಯಾನ, ಹಾಸ್ಪಿಟಲ್, ದಿ ಫೆಮಿಲಿ ಗ್ರೂಪ್, ದಿ ಫಾಯಿವ್ಹ್ ರಿಜೆಂಟೇಶನ್, ಹಾರ್ಲಿಮ್‌ನ ರಾಜಪ್ರಮುಖರು, ಅಲ್ಲದೆ ಒಂಟಿ ಚಿತ್ರಗಳಲ್ಲಿ ಕೊರ ಮಜಿನಾರಿ, ಹಸನ್ಮುಖಿ ಅಶ್ವಾರೋಹಿ, ಇತ್ಯಾದಿ ಚಿತ್ರಗಳು ಡಚ್ ಕಲಾಕ್ಷೇತ್ರದಲ್ಲಿ ಕ್ರಾಂತಿಯನುಂಟುಮಾಡಿದವೆಂದರೆ ಅತಿಶಯೋಕ್ತಿಯಾಗಲಾರದು. ಹಾಲ್ಸ್‌ನಲ್ಲಿ ಅಪಾರವಾದ ಪ್ರತಿಭೆಯಿದ್ದರೂ ಆತ ಪ್ರಖ್ಯಾತನಾದದ್ದು ಸತ್ತ ಇನ್ನೂರು ವರ್ಷಗಳ ನಂತರವೆಂಬುದನ್ನು ಗಮನಿಸಬೇಕು. ಆತನ ಕೃತಿಗಳು 'ಹಾರ್ಲಿಮ್'ನ್ನ ಬಿಟ್ಟು ಹೊರಬರಲಿಲ್ಲ. ಸರಿಯಾದ ಪ್ರಚಾರ ಸಿಗದೇ ಇದ್ದುದ್ದು ಅಲ್ಲದೆ ಕೊನೆಗಾಲದಲ್ಲಿ ತೀರಾ ದಾರಿದ್ರ್ಯದಿಂದ ಜೀವನ ಸಾಗಿಸಿದ್ದುದು ಕೆಲವು ಸಲ ಕಾರಣವಾಗಿರಬಹುದು.

"These Hermitage Paintings give a good idea of the innovative principles devised to reflect the surrounding world in a dynamic way as established by Frans hals, one of the greatest seventeenth century painters. he loved to convey The fleeting impression and his brush work was rebust and unconstrained."[೧] ಡಚ್ ಕಲಾಕಾರರು ತಮ್ಮ ಸಮಕಾಲೀನ ಜನರ ಬದುಕಿನ ವಿವಿಧ ರೀತಿಯ ಜೀವನವನ್ನು ಚಿತ್ರಗಳ ಮುಖಾಂತರ ಜಗತ್ತಿಗೆ ಪರಿಚಯಿಸಿದ್ದಾರೆ. ಅವರಲ್ಲಿ ಫ್ರಾಂಜ್‌ಹಾಲ್ಸ್‌ನ ಪಾತ್ರ ಸಿಂಹಪಾಲು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಕಲಾ ಶೈಲಿ : ಫ್ರಾಂಜ್ ಹಾಲ್ಸ್‌ನ ಚಿತ್ರಗಳ ಶೈಲಿ ಪ್ರಾರಂಭದಲ್ಲಿ ಎಲ್ಲ ಕಲಾವಿದರ ಹಾಗೆ ಸಾಂಪ್ರದಾಯಕವಾದ ರೀತಿಯಲ್ಲಿ ಅತಿಯೆನಿಸುವಷ್ಟು ವರ್ಣವಿನ್ಯಾಸ ಒತ್ತೊತ್ತಾದ ಬಣ್ಣಗಳ ಲೇಪನ ರೇಖಾಲಾಲಿತ್ಯಗಳ ಅತಿಯಾದ ಬಳಕೆಯ ರಚನೆಗಳು ಕಂಡುಬಂದಿದೆ. ಮುಂದೆ ಹಾಲ್ಸ್‌ನ ಕೃತಿಗಳಲ್ಲಿ ಸಾಕಷ್ಟು ಬದಲಾವಣೆಯಾದುದನ್ನು ವಿಮರ್ಶಕರು ಗುರುತಿಸಿದ್ದಾರೆ. "Hals used a very virtuoso technique to enliven the whole picture surface and eah portrait is caught in a fleeting gesture or expression. the whole is perhaps a little like a school photograph but that is what

೧. Aurora guides : Hermitage, page-94.

the sittle wanted, and the very informality caused his work to be a great influence on manet and the impressionists, In his single figures his dazzling skill sometimes runs a way with him as in the laughing cavalier and he never quite achived the sympathy and insight of his greater contermporay rembrandt.[೨] ಸಾಮಾನ್ಯ ಮಾನವ ಮತ್ತು ಅವನ ಸಮಾಜದ ಒಳಹೊರಗುಗಳ ಚಿತ್ರಣವು ಹಾಲ್ಸ್‌ನ ಕಲೆಯ ಪರಮ ಧ್ಯೇಯವಾಗಿತ್ತು. ಪ್ರಕೃತಿ ಚಿತ್ರಣದ ಬಾಹ್ಯ ಸೌಂದರ್ಯಕ್ಕಿಂತ ವ್ಯಕ್ತಿತ್ವ ಚಿತ್ರಣದ ಆಂತರಿಕ ಸೌಂದರ್ಯ ಆತನಿಗೆ ಪ್ರಿಯವಾಗಿತ್ತು. ಭಾವನೆಗಳನ್ನು ಹೊರಸೂಸುವ ಜೀವಂತ ಚಿತ್ರಣ ಹಿತವಾದ ಅತಿಯಲ್ಲದ ವರ್ಣವಿನ್ಯಾಸ, ಅನಿರ್ಬಂಧಿತವಾದ ಕುಂಚದ ಬಳಕೆ ಇವು ಹಾಲ್ಸ್‌ನ ಶೈಲಿಯ ವೈಶಿಷ್ಟ್ಯ[೩]ಗಳಾಗಿವೆ.

ಹಾಲ್ಸ್‌ನ ಕಲಾಕೃತಿಗಳು[೪] ಹರೇಲಿಯನ್, ರಾಯಲ್ ಸಂಗ್ರಹ, ಅಮ್‌ಸ್ಟರಡಮ್ ಅಟ್ವರ್ಪ್, ಬೆರೆಲಿನ್ ಬರ್ಮಿಂಗ್‌ಹ್ಯಾಮ್, ಬೋಷ್ಟನ್, ಬ್ರೆಸೆಲ್ಸ್, ಚಿಕ್ಯಾಗೊ, ಇಡನ್‌ಬರ್ಗ್, ಹಗೇ, ಲಂಡನ್, ಟೊರೆಂಟೋ, ವಿಯನ್ನಾ, ವಾಶಿಂಗ್‌ಟನ್, ಹೀಗೆ ಮುಂತಾದ ಜಗತ್‌ಪ್ರಸಿದ್ಧ ವಸ್ತುಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿವೆ.

ವೆರ್ಮೀರ್‌ನ ಚಿತ್ರಗಳಲ್ಲಿಯಂತೆ ಹಾಲ್ಸ್‌ನ ಚಿತ್ರಗಳಲ್ಲಿಯೂ ತಂಪುವರ್ಣಗಳನ್ನು ಕಾಣುತ್ತೇವೆ. ವೆರ್ಮೀರ್‌ನ ಬ್ರೆಶ್ ಸಾವಕಾಶವಾಗಿ ಕೆಲಸ ಮಾಡಿದರೆ ಹಾಲ್ಸ್‌ನ ಬ್ರೆಶ್ ವೇಗವಾಗಿ ಕೆಲಸ ಮಾಡಿದೆ. ಹಾಲ್ಸ್‌ನ ಪ್ರಭಾವಕ್ಕೆ ಒಳಗಾದವರು ಮೊನೆಟ್, ಸಾರ್ವಂಟ್‌ರು, ಅಲ್ಲದೆ ಇಂಪ್ರೆಶ್‌ನಿಷ್ಟರೂ ಸಹ ಇವನ ಪ್ರಭಾವದಿಂದ ಮುಕ್ತರಾಗಿಲ್ಲವೆಂದು ಹೇಳಬಹುದು. ಹಾಲ್ಸ್ ಕೊನೆಗಾಲದಲ್ಲಿ ಬೇರೊಬ್ಬರ ಹಂಗಿನಲ್ಲಿ ಕಷ್ಟದಾಯಕವಾದ ಜೀವನ ನಡೆಯಿಸಿ ೧೬೬೬ರಲ್ಲಿ ಕೊನೆಯ ಉಸಿರನ್ನು ಎಳೆಯುತ್ತಾನೆ. ತನ್ನ ಸಮಕಾಲೀನ ಕಲಾವಿದರಲ್ಲಿ ವ್ಯಕ್ತಿಚಿತ್ರಗಳ, ಸಮೂಹ ಚಿತ್ರಗಳ ಚಿತ್ರಾಂಕನದಲ್ಲಿ ಹೊಸ ವಾತಾವರಣವನ್ನು ಸೃಷ್ಟಿಸಿದ ಕೀರ್ತಿಗೆ ಈತ ಪಾತ್ರನಾಗಿದ್ದಾನೆ.

❑

---


೨. Peter and Linda Murry : A Dictionary of Art and Artists, page-147

೩. ಸಿ.ಆರ್.ಎಸ್. ಶರ್ಮಾ : ಫ್ರಾನ್ಸ್‌ಹಾಲ್ಸ್ (ಲೇ) ಕಲಾಪ್ರಪಂಚ, ಸಂಪುಟ-೧ ಸಂಚಿಕೆ-೬ ಪುಟ-೧೦ ಸಪ್ಟಂಬರ್ ೧೯೮೧

೪. Peter and Linda Murry : A Dictionary of Art and Artitis page -147



ಫ್ರಾನ್ಸ್ ಹಾಲ್ಸ್



ನಗುಮುಖದ ತರುಣನ ಭಾವಚಿತ್ರ



ಬಾಲಕನ ಭಾವಚಿತ್ರ



v ವೆಲಸ್ಕತ್

೧೫೯೯-೧೬೬೦

ಸ್ಪೇನ್ ದೇಶದ ಪ್ರಸಿದ್ಧ ನಾಣ್ಣುಡಿಯೊಂದಿದೆ. "ದೇವರ ಪ್ರೀತಿಗೆ ಪಾತ್ರರಾದವರು ಸವಿಲ್ಲೆಯಲ್ಲಿ ಹುಟ್ಟುವರು" ಈ ಮಾತು ಸ್ಪೇನ ದೇಶದ ಅತ್ಯಂತ ಪ್ರತಿಭಾಶಾಲಿ ಕಲಾವಿದ ವೆಲಸ್ಕತ್‌ನಿಗೆ ಹೆಚ್ಚು ಅನ್ವಯವಾಗುತ್ತದೆ. ಆತ ಸವಿಲ್ಲೆಯಲ್ಲಿ ಹುಟ್ಟಿ ಸ್ಪೇನದ ಏಕೈಕ ಪ್ರತಿಭಾವಂತ ಚಿತ್ರಕಾರನೆಂದು ಕರೆಯಿಸಿಕೊಂಡಿದ್ದಾನೆ. "Velasquez is one of the outstanding masters of visual painting in modern times. Like some other masters of the seventeenth century, notebly caravaggio, LeNain, Vermeer, and Fans Hals, He was dedicated to painting what was clearly visible to the eye. contrary to the Renaissance method. He portrayed what he actually saw rather than what he wanted to find.[೧] ಹೀಗೆ ಸಂಶೋಧನಾತ್ಮಕ ಮನೋಭಾವದ ವೆಲಸ್ಕತ್‌ನ ಕಲಾಮಯ ಬದುಕಿನ ಚಿತ್ರಣವನ್ನು ಇಲ್ಲಿ ಮಾಡಲಾಗಿದೆ."

ಬಾಲ್ಯ ಜೀವನ : ೧೫೯೯ ಜೂನ್ ೫ನೇ ತಾರೀಖಿನ ದಿವಸ ವೆಲಸ್ಕತ್ ಸವೆಲ್ಲಿಯಲ್ಲಿ ಜನ್ಮತಾಳಿದನು. ತಾಯಿಯ ಹೆಸರು 'ಜರೋಮಿನಾ ವೆಲಸ್ಕತ್' ತಂದೆಯ ಹೆಸರು 'ಜೇನ್ ರಾಡ್ರಿಗ್ ಡಿ. ಸಿಲ್ವಾ' ಇವನು ಗೌರವಾನ್ವಿತ ವ್ಯಕ್ತಿ ಎಂದು ಹೆಸರು ಪಡೆದಿದ್ದ. ಉತ್ತಮವಾದ ಆರ್ಥಿಕ ಸ್ಥಿತಿಗತಿಯನ್ನು ಹೊಂದಿದ ಕುಟುಂಬ ಇವನದಾಗಿತ್ತು. ವಲಸ್ಕತ್‌ನ ಪೂರ್ಣ ಹೆಸರು ಡಾಯಗೋ ಡಿ.ಸಿಲ್ವಾ, ವಾಯ್, ವೆಲಸ್ಕತ್. ಈತನು ತಂದೆಯ ಹೆಸರನ್ನು ಬಿಟ್ಟು ತನ್ನ ಪ್ರೀತಿಯ ತಾಯಿಯ ಹೆಸರಿನಿಂದಲೇ ಪ್ರಸಿದ್ಧಿಯನ್ನು ಪಡೆಯುತ್ತಾನೆ. ಆತನ ಹೆಸರಿನ ಮುಂದೆ ತಾಯಿಯ ಹೆಸರನ್ನು ಸೇರಿಸಿಕೊಂಡಿದ್ದಾನೆ. ತಾಯಿಯ ಮನೆತನವು ಬಹುಕಾಲದಿಂದಲೂ ಉನ್ನತಮಟ್ಟದ ಪ್ರಸಿದ್ಧಿಯನ್ನು ಪಡೆದಿತ್ತು. ಡಾಯಗೊವೆಲಸ್ಕತ್ ಉತ್ತಮ ಸಂಸ್ಕಾರಯುತ ಪರಿಸರದಲ್ಲಿ ಬಾಲ್ಯಜೀವನವನ್ನು ಕಳೆಯುತ್ತಾನೆ.

---

೧. Bernard Myers : 50 Great Artists, Page-95

ವಿದ್ಯಾಭ್ಯಾಸ : ಡಾಯಗೋ ವೆಲಸ್ಕತ್ ಹುಡುಗನಾಗಿದ್ದಾಗಲೆ ಜಾಣತನದಿಂದ ಹೆಸರಾಗಿದ್ದ. ಇವನ ತಂದೆ ಮಗನ ಬುದ್ಧಿವಂತಿಕೆಯನ್ನು ಕಂಡು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಶ್ವವಿದ್ಯಾಲಯಕ್ಕೆ ಕಳುಹಿಸುತ್ತಾನೆ. ಚಿಕ್ಕಂದಿನಿಂದಲೂ ಚಿತ್ರಕಲೆಯ ಕಡೆಗೆ ವಿಶೇಷ ಒಲವನ್ನು ಹೊಂದಿದ ವೆಲಸ್ಕತ್‌ನಿಗೆ ವಿಶ್ವವಿದ್ಯಾಲಯದ ಶಿಕ್ಷಣ ಹಿಡಿಸಲಿಲ್ಲ. ಕಡೆಗೊಂದು ದಿನ ಅಲ್ಲಿಂದ ಬಿಟ್ಟು ಓಡಿ ಬಂದು ಚಿತ್ರಕಲಾಶಾಲೆಯೊಂದರಲ್ಲಿ ಪ್ರವೇಶವನ್ನು ಪಡೆಯುತ್ತಾನೆ. ಅಲ್ಲಿ ಕಲಾವಿದ 'ಫ್ರೆನ್ಸಿಸ್ಕೋಡಿ ಹೆರೆರಾ' ಎಂಬುವವನು ವೆಲಸ್ಕತ್‌ನಿಗೆ ಗುರುವಾಗಿ ಸಿಗುತ್ತಾನೆ. ಆದರೆ ಅತಿಯಾದ ಸಿಡುಕಿನ ಸ್ವಭಾವದ ಈತನ ಕೈಯಲ್ಲಿ ವೆಲಸ್ಕತ್ ಬಹುಕಾಲ ಉಳಿಯಲಿಲ್ಲ, ಸ್ವಲ್ಪ ದಿವಸಗಳಲ್ಲಿಯೇ ಅಂದರೆ ಕ್ರಿ.ಶ. ೧೬೧೩ರಲ್ಲಿ ಈ ಶಾಲೆಯನ್ನು ಬಿಟ್ಟು 'ಡಾಯಗೋ ಪ್ರಾನ್ಸಿಸ್ಕೋ ಪಚೆಕೊ' ಎಂಬುವವನ ಹತ್ತಿರ ಬಂದು ಶಿಷ್ಯತ್ವವನ್ನು ವಹಿಸಿದನು. ಪ್ರತಿಭಾವಂತನಾದ ಪಚೆಕೋ ಒಳ್ಳೆಯ ಕಲಾವಿದ ಉತ್ತಮ ಶಿಕ್ಷಕ ಕೂಡ. ಆತ ವೆಲಸ್ಕತ್‌ನನ್ನು ತುಂಬ ಪ್ರೀತಿಗೌರವಗಳಿಂದ ಬರಮಾಡಿಕೊಳ್ಳುತ್ತಾನೆ, ಗುರುವಿಗೆ ತಕ್ಕ ಶಿಷ್ಯ ವೆಲಸ್ಕತ್, ತನ್ನ ಕ್ರಿಯಾತ್ಮಕ ಚಟುವಟಿಕೆಯಿಂದ ಪಚೆಕೋನ ಅತ್ಯಂತ ಪ್ರೀತಿಯ ಶಿಷ್ಯನಾಗುತ್ತಾನೆ. ವೆಲಸ್ಕತ್‌ನಿಗೆ ಪಚೆಕೋ ತನ್ನ ಅಪಾರವಾದ ಜ್ಞಾನವನ್ನೆಲ್ಲ ಧಾರೆಯೆರೆಯುತ್ತಾನೆ. ಈತ ಗುರು ಮಾತ್ರವಲ್ಲ ಇವನಿಗೆ 'ಗಾಡ್ ಫಾದರ್' ಕೂಡ ಆಗಿ ಸಹಾಯವನ್ನು ಮಾಡುತ್ತಾನೆ. ಇಲ್ಲಿ ಉತ್ತಮ ಕಲಾಶಿಕ್ಷಣದ ತರಬೇತಿ ಇವನಿಗೆ ಸಿಗುತ್ತದೆ. ಪ್ರತಿಭಾವಂತನಾದ ವೆಲಸ್ಕತ್ ಗುರುವಿನ ಮಾರ್ಗದರ್ಶನದಲ್ಲಿಯೇ ಉತ್ತಮ ಕಲಾಕೃತಿಗಳ ನಿರ್ಮಾಣ ಮಾಡುತ್ತಾನೆ. ಈತನು ೧೬ ವರ್ಷದವನಿರುವಾಗಲೆ 'ಪಚೆಕೋ' ತನ್ನ ಮಗಳನ್ನು ಕೊಟ್ಟು ಮದುವೆಯನ್ನು ಸಹ ಮಾಡಿಸುತ್ತಾನೆ. ೧೬೧೮ ಏಪ್ರಿಲ್ ೨೩ರಂದು 'ಮೀರಾಂಡ'ಳೊಂದಿಗೆ ವಲಸ್ಕತ್ ದಾಂಪತ್ಯ ಜೀವನಕ್ಕೆ ಕಾಲಿಡುತ್ತಾನೆ.

ಆಸ್ಥಾನ ಚಿತ್ರಕಾರ : ವೆಲಸ್ಕತ್‌ನ ಮಾವ ಪಚಕೋ ೧೬೨೬ರಲ್ಲಿ ಇವನನ್ನು ಮದ್ರಿದ್‌ಗೆ ಕರೆದುಕೊಂಡು ಬರುತ್ತಾನೆ. ಅಲ್ಲಿ ಸರ್ವಾಧಿಕಾರಿಯಾದ 'ಕಾಮ್ಮೆಓಯಿರೆಜ್ಜನ' ಪರಿಚಯವನ್ನು ಮಾಡಿಸುವನು. 'ವೆಲಸ್ಕತ್' ಕಾಮ್ಮೆಓಯಿರೆಜ್ಜನ ಸಹಕಾರದಿಂದ ದೊರೆ ನಾಲ್ಕನೆಯ ಫಿಲಿಪ್‌ನ ದೃಷ್ಟಿಗೆ ಬೀಳುತ್ತಾನೆ. ಅರಸು ಫಿಲಿಪ್ ವೆಲಸ್ಕತ್‌ನಿಗೆ ತನ್ನ ಚಿತ್ರವೊಂದನ್ನು ಮೊದಲು ರಚಿಸಿಕೊಡಲು ಹೇಳುತ್ತಾನೆ. ಆಸ್ಥಾನ ಚಿತ್ರಕಾರರನ್ನಾಗಿ ನೇಮಿಸಿಕೊಳ್ಳಲು ಅವರನ್ನು ಸರಿಯಾಗಿ ಪರೀಕ್ಷಿಸಿಯೇ ನೇಮಕ ಮಾಡಿಕೊಳ್ಳುತ್ತಿದ್ದರು. ವೆಲಸ್ಕತ್ ಈ ಆಹ್ವಾನವನ್ನು ಧೈರ್ಯದಿಂದಲೇ ಎದುರಿಸುತ್ತಾನೆ. ಪ್ರತಿಭಾವಂತನಾದ ವೆಲಸ್ಕತ್ ಈ ಆಹ್ವಾನವನ್ನು ಧೈರ್ಯದಿಂದಲೇ ಎದುರಿಸುತ್ತಾನೆ. ಪ್ರತಿಭಾವಂತನಾದ ವೆಲಸ್ಕತ್ ಫಿಲಿಪ್ ಅರಸನ ಈ ಭಾವಚಿತ್ರವನ್ನು ಅದ್ಭುತವಾಗಿ ನಿರ್ಮಿಸುತ್ತಾನೆ. ಇದರಿಂದಾಗಿ ಅರಮನೆಯಲ್ಲಿ ಚಿತ್ರ ಬಿಡಿಸಲು ಆಸ್ಥಾನ ಚಿತ್ರಕಾರನೆಂದು ನೇಮಿಸಿಕೊಳ್ಳುತ್ತಾನೆ. ಅಲ್ಲದೆ ಅವನಿಗೆ ಬೇಕಾಗುವ ಸಕಲ ವ್ಯವಸ್ಥೆಯನ್ನು ಅರಮನೆಯಲ್ಲಿ ಮಾಡಿಸುತ್ತಾನೆ. ಅರಸನ ಪ್ರೀತಿ ಪ್ರೋತ್ಸಾಹದ ಜೊತೆಗೆ ಅಧಿಕಾರ ವೈಭವಗಳಿಂದ ವೆಲಸ್ಕತ್‌ನ ಶ್ರೀಮಂತಿಕೆಯ ಜೀವನ ಪ್ರಾರಂಭವಾಗುತ್ತದೆ. ಹಾಗೆಯೇ ದೊರೆಯ ಅಪ್ಪಣೆಯಂತೆ ಚಿತ್ರ ರಚನೆಯ ಕಾರ್ಯವು ನಡೆಯುತ್ತದೆ.

ಕಲಾಯಾತ್ರೆ : ವೆಲಸ್ಕತ್‌ನಿಗೆ ೧೬೨೮ರಲ್ಲಿ ಒಂದು ಅಪೂರ್ವ ಅವಕಾಶವು ಲಭಿಸಿತು.

ಖ್ಯಾತ ಚಿತ್ರಕಾರ ರುಬೆನ್ಸ್ ಯಾವುದೋ ಕೆಲಸದ ನಿಮಿತ್ತ ಸ್ಪೇನಿಗೆ ಬರುತ್ತಾನೆ. ಅಲ್ಲಿ ವೆಲಸ್ಕತ್‌ನೊಂದಿಗೆ ಕೆಲವು ಹೊತ್ತು ಕೂಡಿ ವಿಚಾರವಿನಿಮಯ ಸಮಾಡಿಕೊಳ್ಳುವ ಸುಯೋಗವನ್ನು ವೆಲಸ್ಕತ್ ಪಡೆಯುತ್ತಾನೆ. ಈ ಸಂದರ್ಶನದ ಪರಿಣಾಮ ವೆಲಸ್ಕತ್ ಇಟಲಿಗೆ ಪ್ರಯಾಣ ಮಾಡುವಂತಾಗುತ್ತದೆ. ಇಟಲಿಯಲ್ಲಿ ಅನೇಕ ಪ್ರಖ್ಯಾತ ಕಲಾಕಾರರನ್ನು, ಕಲಾಕೃತಿಗಳನ್ನು ನೋಡುವ ಭಾಗ್ಯ ವೆಲಸ್ಕತ್‌ನಿಗೆ ಲಭಿಸುತ್ತದೆ.

ವೆಲಸ್ಕತ್ ೧೬೨೯ರಲ್ಲಿ ಮತ್ತೆ ಪ್ರವಾಸವನ್ನು ಮುಂದುವರೆಸುತ್ತಾನೆ. ಜಿನೇವಾ, ವೆನಿಸ್, ರೋಮ್, ನೇಪಲ್ಸ್ ಮುಂತಾದ ಕಡೆ ಪ್ರಖ್ಯಾತ ಶಿಲ್ಪಚಿತ್ರ ಕಲಾಕೃತಿಗಳನ್ನು ನೋಡಿ ಅನೇಕ ರೀತಿಯ ಕಲಾತಂತ್ರಗಳನ್ನು ಅಧ್ಯಯನ ಮಾಡುತ್ತಾನೆ. 'ರೈಬರ' ನಂತರ ಕಲಾವಿದರೊಂದಿಗೆ ಚರ್ಚಿಸುವ ಅವಕಾಶ ಸಿಗುತ್ತದೆ. ೧೬೩೧ರ ವರೆಗೆ ಪ್ರವಾಸ ಮಾಡಿ ಮತ್ತೆ ಮದ್ರಿದ್‌ಗೆ ಮರಳಿಬರುತ್ತಾನೆ. ಈ ಸಂದರ್ಶನದಿಂದ ಆತನಲ್ಲಿ ಅನೇಕ ರೀತಿಯಲ್ಲಿ ಬದಲಾವಣೆಗಳಾಗುತ್ತವೆ. ಚಿತ್ರಗಳಲ್ಲಿ ವೈವಿಧ್ಯತೆಗಳನ್ನು ತಂದು ಕಲಾಕೃತಿ ನಿರ್ಮಿಸಲು ಸಹಾಯವಾಗುತ್ತದೆ.

೧೬೩೪ರಿಂದ ಮದ್ರಿದ್‌ನಲ್ಲಿ ಅಪೂರ್ವ ದಾಖಲೆಯಾಗುವ 'ಸಿರೀಜ್ ಆಫ್ ವ್ಹಿಕ್ಟರಿ ಪಿಕ್ಚರಸ್'ಗಳನ್ನು ಬಹಳ ಸಂಯಮದಿಂದ ಚಿತ್ರಿಸುತ್ತಾನೆ. ಮದ್ರಿದ್‌ನ ವೈಭವದ ಅರಮನೆಯ ಭವನಗಳಲ್ಲಿ ಯಾವಾಗಲು ಸರದಾರರು, ಅರಸುಕುಮಾರರು ರಾಣಿಯರ ಮನದೊಲವಿನಂತೆ ಮಾತಾಡುವುದು ಅವರಂತೆ ಅವರ ಆದೇಶದಂತೆ ಇರುವ ಬದುಕು ಕೆಲವು ಸಲ ಜಿಗುಪ್ಸೆಯನ್ನು ತರುತ್ತದೆ. ಹಿಂದಿನ ಅವನ ಪ್ರವಾಸ ವೆಲಸ್ಕತ್‌ನಿಗೆ ಹೊಸ ಚೈತನ್ಯ ತಂದಿತ್ತು. ಸ್ವತಂತ್ರ ಪ್ರವೃತ್ತಿಯಿಂದ ಚಿತ್ರ ಬಿಡಿಸುತ್ತಿದ್ದ ಕಲಾವಿದರ ಸಾನಿಧ್ಯ. ಇವೆಲ್ಲವುಗಳು ವೆಲಸ್ಕತ್‌ನಿಗೆ ಮತ್ತೆ ಪ್ರವಾಸ ಮಾಡಬೇಕೆಂಬ ಬಯಕೆ ಉಂಟಾಗುತ್ತದೆ.

೧೬೪೮-೪೯ರಲ್ಲಿ ವೆಲಸ್ಕತ್‌ನು ಮತ್ತೆ ಇಟಲಿಗೆ ಪ್ರಯಾಣ ಪ್ರಾರಂಭಿಸುತ್ತಾನೆ. ಈ ಸಲ ಬಂದಾಗ ಹತ್ತನೆಯ ಪೋಪ 'ಇನೋಸಂಟ'ನ ಭಾವಚಿತ್ರವೊಂದನ್ನು ರಚಿಸುವ ಅವಕಾಶ ಸಿಗುತ್ತದೆ. ಕೆಲವು ಕಾಲ ಅಲ್ಲಿ ಉಳಿದು ಆ ಕೆಲಸವನ್ನು ಮುಗಿಸುತ್ತಾನೆ. ಈ ಚಿತ್ರದಿಂದ ವೆಲಸ್ಕತ್‌ನಿಗೆ ಇಟಲಿಯಲ್ಲಿ ಒಳ್ಳೆಯ ಹೆಸರು ಗಳಿಸುವಂತಾಗುತ್ತದೆ. ಅಲ್ಲದೆ ಪೋಪ್ ಅರಸರ ಪ್ರೀತಿ ವಿಶ್ವಾಸ ಪ್ರೋತ್ಸಾಹವು ಲಭಿಸುತ್ತದೆ. ಮುಂದೆ ಪುನಃ ಜೀನೇವಾ, ವೇನಿಸ್, ರೋಮ್, ನೇಪಲ್ಸ್, ಅಲ್ಲದೆ ಆಸ್ಟೇರಿಯಾದ ರಾಣಿ 'ಮರೆನ್ನಾ'ಳನ್ನು ಭೆಟ್ಟಿಯಾಗುತ್ತಾನೆ. ೧೬೫೧ರ ವರೆಗೆ ಪ್ರಯಾಣ ಮಾಡಿ ಮದ್ರಿದ್‌ಗೆ ಮರಳಿ ಬರುತ್ತಾನೆ.

ವೆಲಸ್ಕತ್‌ನ ಈ ಕಲಾಯಾತ್ರೆ ಆತನ ಬದುಕಿನಲ್ಲಿ ಹೊಸ ಹೊಸ ಕಲಾಕೃತಿಗಳ ಹುಟ್ಟಿಗೆ ನಾಂದಿಯಾಗುತ್ತದೆ. ರಾಜಕೀಯ ಬಂಧನದ ವಾತಾವರಣಕ್ಕೂ ಸ್ವಚ್ಛಂದವಾಗಿ ಇರುವ ಬಡಕಲಾಕಾರರ ಬದುಕಿಗೂ ಇರುವ ಅಂತರ, ನೈಜವಾದ ಬದುಕಿನ ಅವರ ತಾಣಗಳು, ಅವರ ಬಣ್ಣಗಾರಿಕೆ ಇತ್ಯಾದಿ ಅಂಶಗಳು ವೆಲಸ್ಕತ್‌ನ ಮೇಲೆ ತುಂಬ ಪರಿಣಾಮ ಬೀರಿದವು. ಸಾಮಾನ್ಯನ ಬದುಕಿನಿಂದ ದೂರವಾಗಿದ್ದ ಅವನ ಮನಸ್ಸು ಮತ್ತೆ ಈಗ ಜನಸಾಮಾನ್ಯನ ಹತ್ತಿರಕ್ಕೆ ತಂದಿತು. ಅವರ ಬದುಕಿನ ಹಲವಾರು ಕಲಾಕೃತಿಗಳನ್ನು ವೆಲಸ್ಕತ್ ನಿರ್ಮಾಣ

ಮಾಡುತ್ತಾನೆ. ಬರಿ ರಾಜಕಾರಣಿಯರಿಗೆ, ಧಾರ್ಮಿಕ ವಿಷಯಗಳಿಗೆ, ಮಿಸಲಾಗಿದ್ದ ಅವನ ಕುಂಚ ಈಗ ವೈವಿಧ್ಯಮಯವಾದ ಸನ್ನಿವೇಶಗಳನ್ನು ಚಿತ್ರಿಸಲು ಪ್ರಾರಂಭಿಸಿತು. ಇದರಿಂದ ವೆಲಸ್ಕತ್ ಮತ್ತೆ ಸಂತೋಷದ ದಿನಗಳನ್ನು ಕಳೆಯುವಂತಾಯಿತು.

ವೆಲಸ್ಕತ್‌ನ ಪ್ರಮುಖ ಕಲಾಕೃತಿಗಳು

೧. ನಾಲ್ಕನೆಯ ಪಿಲಿಪ್‌ನ ಭಾವಚಿತ್ರ : (Portrait of hillply of spain)
೨. ದಿ ಮೇಡ್ಸ್ ಆಫ್ ಆನರ್ (The Maids of Honor)
೩. ಕಾಂಟ್ ಒಲಿವ್ವರಸ್‌ನ ಎದೆಮೊಗದ ಭಾವಚಿತ್ರ (portrit of count olivares)
೪. ಜಾನ್ ಮಟ್ಕೇಶ್‌ನ ಭಾವಚಿತ್ರ (Portrait of Juan Matcos)
೫. ಡಾನ್ ಬಲುತ್‌ಸಾರನ ಕುದುರೆ ಸವಾರಿ (Don BAlthasar on Herse back)
೬. ವ್ಹೇನಸ್ ಮತ್ತು ಕ್ಯುಪಿಡ್ ಕಲಾಕೃತಿ (Venus and cupid)
೭. ದಿ ಸರೆಂಡ್‌ರ ಆಫ್ ಬ್ರೀಡಾ (The surrender of Breada)

೧. ನಾಲ್ಕನೆಯ ಪಿಲಿಫ್‌ನ ಭಾವಚಿತ್ರ : ಈ ಕಲಾಕೃತಿಯು ೧೬೨೩ರಲ್ಲಿ ವೆಲಸ್ಕತ್ ಆಸ್ಥಾನ ಚಿತ್ರಕಾರನಾಗುವ ಸಂದರ್ಭದಲ್ಲಿ ರಚಿಸಿರುವಂತಹದು, ಜಗತ್ತಿನ ಆರು ಪ್ರಖ್ಯಾತ ಪೋರ್ಟರೇಟ್‌ಗಳಲ್ಲಿ ಈ ಕಲಾಕೃತಿಯೂ ಒಂದಾಗಿದೆ. ಸ್ಪೇನ್‌ದಲ್ಲಿ ಈ ಚಿತ್ರವನ್ನು ಮೀರಿಸುವ ಇನ್ನೊಂದು ಚಿತ್ರವಿಲ್ಲವೆಂಬ ಅಭಿಪ್ರಾಯವು ಇದೆ. ಹ್ಯಾಪ್ಸ್‌ಬರ್ಗದ ಅರಸು ನಾಲ್ಕನೆಯ ಪಿಲಿಪ್‌ನ ಸ್ವಭಾವ ಚಿತ್ರಣವು ಇಲ್ಲಿ ಕಲಾತ್ಮಕವಾಗಿ ನಿರೂಪಣೆಗೊಂಡಿರುವುದನ್ನು ಕಾಣಬಹುದು. ಪಿಲಿಪ್‌ನು ಕೈಯಲ್ಲಿ ಸಣ್ಣವಸ್ತ್ರವೊಂದನ್ನು ಹಿಡಿದು ನಿಂತಿರುವ ಭಂಗಿಯಲ್ಲಿ ಆತನ ಪ್ರಶಾಂತವಾದ ಮುಗ್ಧ ಮುಖದ ಭಾವನೆ ರಾಜತನದ ಗಾಂಭೀರ್ಯದ ರೀತಿ ನೀತಿಗಳನ್ನು ಬಹಳ ನಿಚ್ಚಳವಾಗಿ ಚಿತ್ರಿಸಲಾಗಿದೆ. ಹಿನ್ನೆಲೆಯ ವಿನ್ಯಾಸವು ತಳಿಯಾದ ಕಪ್ಪುವರ್ಣದ ಮಂದ ಬೆಳಕಿನಿಂದ ಚಿತ್ರಕ್ಕೆ ಇನ್ನಷ್ಟು ಸೊಗಸನ್ನು ತಂದಿದೆ, ವೆಲಸ್ಕತ್‌ನಿಗೆ ಆಸ್ಥಾನ ಚಿತ್ರಕಾರನ ಪಟ್ಟ ದೊರಕಿಸಿಕೊಟ್ಟ ಗೌರವವು ಈ ಕೃತಿಗೆ ಸಲ್ಲುತ್ತದೆ. ಮೊದಲು ಇವನ ಈ ಕೃತಿ ಫ್ಲೋರೆನ್ಸ್‌ದ ರಾಜಕುಮಾರನಾದ ಡೆಮಿಡಾಫ್‌ನಲ್ಲಿತ್ತು. ನಂತರ ಸ್ಪೇನದ ಸರಕಾರ ಇದನ್ನು ಕೊಂಡುತಂದು ತನ್ನ ಸಂಗ್ರಹ ದಲ್ಲಿಟ್ಟುಕೊಂಡಿತು. ಈಗ ನ್ಯೂಯಾರ್ಕಿನ ಮೆಟ್ರೋಪೊಲಿಟೆಯನ್ ಮ್ಯೂಜಿಯಮ್‌ನಲ್ಲಿ ಸಂಗ್ರಹಗೊಂಡು ಅನೇಕ ಸಹೃದಯರನ್ನು ಆಕರ್ಷಿಸುತ್ತಲಿದೆ.

೨. ದಿ ಮೇಡ್ಸ್ ಆಫ್ ಆನರ್ : ವೆಲಸ್ಕತ್‌ನ ಪ್ರಸಿದ್ಧ ಕಲಾಕೃತಿಗಳಲ್ಲಿ 'ದಿ ಮೇಡ್ಸ್ ಆಫ್ ಆನರ್' ಕೃತಿಗೊಂದು ವಿಶಿಷ್ಟ ಸ್ಥಾನವಿದೆ. ಇದು ೧೬೫೬ರಲ್ಲಿ ರಚನೆಗೊಂಡಿದೆ. ಆಗಿನ ಕಾಲದ ಅರಸರು ತಮ್ಮ ಮಕ್ಕಳ ಸಂಗಡ ಆಡಲು ಅವುಗಳಷ್ಟೇ ಗಿಡ್ಡವಾಗಿರುವ ವಯಸ್ಸಾದ ಹೆಂಗಸರನ್ನು ಇಡುತ್ತಿದ್ದರು. ಈ ಚಿತ್ರದಲ್ಲಿ ಮಗು ಮಾರ್ಗರೇಟಳ ಚಿತ್ರ ತೆಗೆಯುವುದಕ್ಕಾಗಿ ಅವಳನ್ನು ಕುಳ್ಳಿರಿಸಲು ಅವಳ ದಾಸಿಯರು ಮನವೊಲಿಸುತ್ತಿರುವರು.

ಈ ಮಗುವಿನ ಸಂಗಡ ಓರ್ವ ಗಿಡ್ಡ ಹೆಂಗಸು ಕೂಡ್ರಲು ಸಿದ್ಧಳಾಗಿದ್ದಾಳೆ. ಎಡಗಡೆ ಸ್ವತಃ ವೆಲಸ್ಕತ್‌ನು ಚಿತ್ರ ತೆಗೆಯಲು ಬಣ್ಣದ ಸಾಮಾನು ಬ್ರೆಶ್ ಮೊದಲಾದ ಸಲಕರಣೆಗಳನ್ನು ಹಿಡಿದುಕೊಂಡು ನಿಂತಿದ್ದಾನೆ. ಕೋಣೆಯ ಆಚೆಗೆ ನಿಂತಿರುವ ನಾಲ್ಕನೆಯ ಫಿಲಿಪ್‌ನು ಅವನ ಎರಡನೆಯ ಹೆಂಡತಿ ಮರಿಯಾನಾ ಅಸ್ಟಿರಿಯಾಳು ನಿಂತ ಪ್ರತಿಬಿಂಬವು ದೊಡ್ಡ ಕನ್ನಡಿಯಲ್ಲಿ ಮೂಡಿದೆ. ಹಿಂದಿನ ಮಗ್ಗಲು ಸರದಾರ ಮೊದಲಾದವರು ಹೋಗಿ ಬರಲು ಬಾಗಿಲನ್ನು ತೆರೆದಿಟ್ಟಿದೆ. ಈ ಚಿತ್ರದ ವಸ್ತು ಮತ್ತು ಇದನ್ನು ಇಟ್ಟ ರೀತಿ ನೀತಿಗಳು ಕಲಾವಿದನ ಪಾಂಡಿತ್ಯದ ಉನ್ನತಿಯನ್ನು ತೋರುವವು.[೨] ಇಲ್ಲಿ ಬಳಸಿದ ಬಣ್ಣಗಳು ಹಿತಮಿತ ವಾಗಿವೆ. ಅನೇಕ ವ್ಯಕ್ತಿಗಳ ಸಂಯೋಜನೆಯೂ ಕಲಾತ್ಮಕವಾಗಿ ಮೂಡಿ ಬಂದಿವೆ. ಈ ಕೃತಿ ವೆಲಸ್ಕತ್‌ನಿಗೆ ಬಹುದೊಡ್ಡ ಹೆಸರನ್ನು ತಂದುಕೊಟ್ಟಿತು. ಈಗ ಮದ್ರಿದ್‌ನ 'ಪ್ರಾದು' (prado) ಮ್ಯೂಜಿಯಮ್‌ನಲ್ಲಿ ಸಂಗ್ರಹಗೊಂಡಿದೆ.

೩. ಕಾಂಟಿ ಒಲಿವರಸ್‌ನ ಎದೆಮೊಗದ ಭಾವಚಿತ್ರ : ೧೬೩೦ರಿಂದ ೧೬೪೦ರ ಅವಧಿಯಲ್ಲಿ ಈ ಕೃತಿ ರಚನೆಗೊಂಡಿದೆ. ವೆಲಸ್ಕತ್‌ನ ಭಾವಚಿತ್ರಗಳಲ್ಲಿ ಇದು ತನ್ನದೆ ಆದ ವಿಶಿಷ್ಟವಾದ ಕೆಲವು ಲಕ್ಷಣಗಳಿಂದ ತುಂಬ ಪ್ರಖ್ಯಾತಿಯನ್ನು ಪಡೆದಿದೆ. ತೈಲವರ್ಣದಲ್ಲಿ ತಂಪು ಬಣ್ಣಗಳಿಂದ ಆಕರ್ಷಕವಾಗಿ ಮೂಡಿಬಂದ ಓಲಿವ್ಹರನ ಭಾವಪ್ರಧಾನ ಚಿತ್ರವಿದಾಗಿದೆ. ಕಂದು ವರ್ಣದಲ್ಲಿ ಅಲ್ಲಲ್ಲಿ ಬಿದ್ದ ತೆಳುವಾದ ಬೆಳಕು ಮೈ ತುಂಬ ಇಳಿಬಿದ್ದ ಶರ್ಟಿನ ನಿರಿಗೆಗಳು ವ್ಯಕ್ತಿಯ ಕುರುಚಲು ಗಡ್ಡ ದೊಡ್ಡದಾದ ಕಲ್ಲಿ ಮೀಸೆ, ತೀಕ್ಷ್ಣವಾಗಿ ಏನನ್ನೋ ನಿರೀಕ್ಷಿಸುತ್ತಿರುವ ಭಂಗಿ ಹೀಗೆ ನಗುಮುಖದಿಂದ ಚಿತ್ರ ಸತ್ವಶಾಲಿಯಾಗಿ ಚಿತ್ರಿತಗೊಂಡಿದೆ. ಈಗ 'ಪ್ರದೋ' ಮ್ಯೂಜಿಯಮ್‌ನಲ್ಲಿ ಸಂಗ್ರಹಗೊಂಡಿರುವದು.

೪. ಜಾನ್ ಮೊಟೇಸ್ಕ್‌ನ ಭಾವಚಿತ್ರ : ೧೬೪೦ರ ಸುಮಾರಿಗೆ ರಚನೆಗೊಂಡಿದೆಯೆಂದು ಹೇಳಲಾಗುವ ಈ ಕೃತಿ ತೈಲವರ್ಣದಲ್ಲಿ ಸೃಷ್ಟಿಯಾಗಿದೆ. ರಾಜದರ್ಬಾರದ ವೇಷ ಭೂಷಣಗಳು ಕಡು ನೀಲಿವರ್ಣದಲ್ಲಿ ಅಲಂಕೃತವಾಗಿವೆ. ಕತ್ತಲಿನ ಆವರಣದಲ್ಲಿ ಅಲ್ಲಲ್ಲಿ ಬಿದ್ದ ಬೆಳಕಿನ ವಿನ್ಯಾಸವನ್ನು ಇಲ್ಲಿ ಕಾಣಬಹುದು. ಠೀವಿಯಿಂದ ಟೊಂಕದ ಮೇಲೆ ಕೈ ಇಟ್ಟುಕೊಂಡು ನಿಂತಿರುವ ಭಂಗಿಯಲ್ಲಿ ಈ ಚಿತ್ರ ರೂಹುದಳೆದಿದೆ. ಸಧ್ಯ 'ಪ್ರದೋ' ಕಲಾಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿದೆ.

೫. ಡಾನ್ ಬಲುತ್‌ಸಾರನ ಕುದುರೆ ಸವಾರಿ : ತೈಲ ಮಾಧ್ಯಮದಲ್ಲಿ ರಚಿತಗೊಂಡ ಈ ಕೃತಿಯಲ್ಲಿ ಜಿಗಿಯುತ್ತಿರುವ ಕುದುರೆಯ ಮೇಲೆ ಚಿಕ್ಕ ಹುಡುಗನೊಬ್ಬ ಕುಳಿತು ಸವಾರಿ ಮಾಡುತ್ತಿದ್ದಾನೆ. ಕುದುರೆಯ ಮೇಲೆ ಬಾಲಕನೊಬ್ಬನೆ ಕುಳಿತು ಠೀವಿಯಿಂದ ಸವಾರಿ ಮಾಡುತ್ತಿದ್ದಾನೆ. ತಲೆಯ ಮೇಲಿನ ಹ್ಯಾಟು, ಕೈಯಲ್ಲಿ ಹಿಡಿದುಕೊಂಡಿರುವ ಕೋಲು, ರಾಜಕುಮಾರನ ವೇಷಭೂಷಣಗಳಲ್ಲಿ ಶ್ರೀಮಂತಿಕೆಯ ವರ್ಣವಿನ್ಯಾಸವಿದೆ. ಕುದುರೆಯ ರಭಸಕ್ಕೆ ಹಾರಿಬಿದ್ದ ಹೆಗಲ ಮೇಲಿನ ವಸ್ತ್ರ ವೇಗವಾಗಿ ಓಡುತ್ತಿರುವುದನ್ನು ಪ್ರತಿನಿಧಿಸುತ್ತದೆ. ಕುದುರೆಯ ಪ್ರಮಾಣಬದ್ಧವಾದ ಸ್ನಾಯುಗಳ ಚಿತ್ರಣ ನೈಜವಾಗಿ ಮೂಡಿಬಂದಿದೆ. ಚಿತ್ರದ

ಹಿನ್ನೆಲೆಯೂ ಕೂಡ ಆಕರ್ಷಕವಾಗಿದೆ. ಆಕಾಶದ ಪ್ರಶಾಂತ ವರ್ಣವಿನ್ಯಾಸ ರಮ್ಯವಾದ ಬೆಟ್ಟಗುಡ್ಡಗಳ ಸಮೀಪ ದೂರದ ಕಲ್ಪನೆಯ ಚಿತ್ರಕ್ಕೆ ಇನ್ನಷ್ಟು ಸೌಂದರ್ಯವನ್ನು ತಂದಿದೆಯೆನ್ನಬಹುದು ಈಗ 'ಪ್ರದೋ' ಮ್ಯೂಜಿಯಮ್‌ನಲ್ಲಿ ಸಂಗ್ರಹಗೊಂಡಿದೆ.

೬. ವ್ಹೇನಸ್ ಮತ್ತು ಕ್ಯುಪಿಡ್ : ೧೬೫೪ರ ಸುಮಾರಿಗೆ ತೈಲವರ್ಣದಲ್ಲಿ ನಗ್ನರೂಪದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಆಗಿನ ಪರಿಸರದಲ್ಲಿ ಸ್ಪೇನ ದೇಶವು ನಗ್ನಚಿತ್ರ ರೂಪಿಸುವ ಕುರಿತು ರಾಜಕೀಯ ಧಾರ್ಮಿಕ ಸಾಂಸ್ಕೃತಿಕ ವಲಯಗಳಲ್ಲಿ ಕಟ್ಟುನಿಟ್ಟಾದ ನೀತಿನಿಯಮಗಳಿದ್ದವು. ಇಂತಹ ಕಾಲದಲ್ಲಿಯೂ ವೆಲಸ್ಕತ್ ನಗ್ನರೂಪದ ಈ ಕೃತಿಯನ್ನು ಧೈರ್ಯದಿಂದಲೇ ಸೃಷ್ಟಿಸಿದ್ದಾನೆನ್ನಬಹುದು. ಇವನಿಗೆ ಬಹುದೊಡ್ಡ ಆಸರೆಯೆಂದರೆ, ರಾಜಾಶ್ರಯವಿತ್ತು, ಮೇಲಾಗಿ ದೊಡ್ಡ ಕಲಾವಿದನೆಂಬ ಅಗ್ಗಳಿಕೆ, ಅಲ್ಲದೆ ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದ, ಹೀಗಾಗಿ ಯಾರೂ ಈ ಕೃತಿಯ ಕುರಿತು ಮಾತಾಡದಂತಾಗಿತ್ತು.

ಕೃತಿಯ ಮೌಲ್ಯದ ದೃಷ್ಟಿಯಿಂದ ನೋಡಿದಾಗ, ಇದರ ಔನ್ನತ್ಯದ ಕುರಿತು ಎಲ್ಲರೂ ಮೆಚ್ಚಿಕೆ ವ್ಯಕ್ತಪಡಿಸಿದ್ದಾರೆ. ಕಂದು ಹಸಿರು ವರ್ಣದ ವಿನ್ಯಾಸದ ಕೆಂಪು ವಸ್ತ್ರದ ಪರದೆಯ ಹಿನ್ನೆಲೆಯಲ್ಲಿ ನಗ್ನವಾಗಿ ತಲೆಗೆ ಕೈ ಹಚ್ಚಿ ಮಗ್ಗಲು ಮೈಯಿಂದ ಮಲಗಿಕೊಂಡ ಹೆಣ್ಣುಮಗಳ ದೃಶ್ಯವಿದಾಗಿದೆ. ಎದುರಿಗೆ ನಗ್ನರೂಪದ ಹುಡುಗನೊಬ್ಬನಿಗೆ ರೆಕ್ಕೆಗಳಿವೆ, ಕನ್ನಡಿಯನ್ನು ಈಕೆಯ ಎದುರಿಗೆ ಹಿಡಿದು ನಿಂತಿದ್ದಾನೆ. ಅದರಲ್ಲಿ ಅವಳ ಮುಖದ ಪ್ರತಿಬಿಂಬ ಮೂಡಿದೆ, ಹಾಸಿಗೆಯ ವಿನ್ಯಾಸ ಅದರಲ್ಲೂ ಬಂಗಾರ ವರ್ಣದ ನಗ್ನರೂಪ ಕಣ್ಣಿಗೆ ತಕ್ಷಣ ಹೊಳೆಯುತ್ತದೆ. ಭಾರತೀಯ ಚಿತ್ರಗಳಿಗೂ ಪಾಶ್ಚಿಮಾತ್ಯರು ರಚಿಸಿದ ನಗ್ನಚಿತ್ರಗಳಿಗೂ ಹೋಲಿಸಿದಾಗ ಭಾರತೀಯರ ಕಲಾಕೃತಿಗಳು ಲೈಂಗಿಕ ಭಾವನೆಯಿಂದ ದೂರ ಸರಿದರೆ ಪಾಶ್ಚಿಮಾತ್ಯರ ಕಲಾಕೃತಿಗಳು ಲೈಂಗಿಕ ಆಕರ್ಷಣೆಯಿಂದ ಮನಸ್ಸಿನ ಭಾವನೆಗಳನ್ನು ಕೆರಳಿಸುತ್ತವೆ. ಈ ಮಾತು ವೆಲಸ್ಕತ್‌ನ ಈ ಕೃತಿಗೂ ಅನ್ವಯಿಸುತ್ತದೆ.

ಮೊದಲು ಇದು 'ರೊಕ್ಬಿಯ ಮೊರೆಟ್ಟೊ' ಮನೆತನದಲ್ಲಿ ಇದ್ದುದರಿಂದ ಅದೇ ಹೆಸರಿಂದ ಇದನ್ನು ಕರೆಯಲಾಗುತ್ತಿತ್ತು. ಮುಂದೆ ಸ್ಪೇನ ಸರಕಾರ ಇದನ್ನು ೪೫೦೦ ಪೌಂಡುಗಳಿಗೆ ಕೊಂಡು ತಂದು ತನ್ನ ಸಂಗ್ರಹಾಲಯದಲ್ಲಿಟ್ಟುಕೊಂಡಿತು. ಆಗ ಇದಕ್ಕೆ "ವ್ಹೇನಸ್ ಮತ್ತು ಕ್ಯುಪಿಡ್" ಎಂದು ಪುನಃ ನಾಮಕರಣ ಮಾಡಲಾಯಿತು. ಈಗ ಲಂಡನ್ನಿನ ನ್ಯಾಶನಲ್ ಗ್ಯಾಲರಿಯಲ್ಲಿ ಸಂಗ್ರಹಗೊಂಡಿದೆ.

೭. ದಿ ಸರೆಂಡರ ಆಫ್ ಬ್ರೀಡಾ : ೧೬೨೫ರಲ್ಲಾದ ಡಚ್ ಯುದ್ಧದ ಘಟನೆಯ ವಸ್ತುವನ್ನು ಅನುಸರಿಸಿ ೧೬೩೪ರಲ್ಲಿ ವೆಲಸ್ಕತ್ ಈ ಕೃತಿಯನ್ನು ರಚಿಸಿದ್ದಾನೆ. ಜಗತ್ತಿನ ಅತಿ ಶ್ರೇಷ್ಠ ಐತಿಹಾಸಿಕ ಚಿತ್ರವೆಂಬ ಕೀರ್ತಿಯನ್ನು ಈ ಚಿತ್ರ ಪಡೆದಿದೆ. ಡಚ್ ರಿಪಬ್ಲಿಕ್ ಆದ ಮೂವತ್ತು ವರ್ಷಗಳ ನಂತರ ವೆಲಸ್ಕತ್ ಇದನ್ನು ಸೃಷ್ಟಿಸಿದ್ದಾನೆ.

---

೨. ಕಲಮದಾನಿ ಗುರುರಾಯ : ಪಾಶ್ಚಾತ್ಯ ಕಲಾವಿದರು : ಪುಟ-೪೪

ಎರಡು ಸೈನ್ಯಗಳ ನಡುವೆ ನಡೆಯುತ್ತಿರುವ ಯುದ್ಧದ ಭೀಕರ ಘಟನೆಯ ದೃಶ್ಯವಲ್ಲದೆ, ಕುದುರೆಗಳು, ಕೈಯಲ್ಲಿ ಆಯುಧಗಳಿಂದ ಸನ್ನದ್ಧರಾಗಿರುವ ಸೈನಿಕರಿದ್ದಾರೆ. ಈ ಎರಡು ಗುಂಪುಗಳ ನೇತಾರರಿಬ್ಬರು ಮುಂದೆ ಬಂದು ಎದುರುಬದುರಾಗಿ ನಿಂತು ಏನನ್ನೋ ಮಾತಾಡುತ್ತಿರುವಂತಿದೆ. ಇದನ್ನು ಸೈನಿಕ ಪಡೆಗಳು ನಿರೀಕ್ಷಿಸುತ್ತಿದ್ದಾರೆ. ವೆಲಸ್ಕತ್‌ನ ಈ ಕೃತಿಯ ಕುರಿತು ವಿಮರ್ಶಕರೊಬ್ಬರು ಈ ರೀತಿ ಬರೆಯುತ್ತಾರೆ. "This is an example of velasquezs mastery of space and atmosphere. for the forms and colurs blur and fade in proportion to their distance from the obsever. The coloures and out line are strond and clear. The part of the army which is further away is shown in poler tones and in less distinct outlines, and finally the colours shade offin to vague greenish-greys inthe far distance"[೩] ಎಂಬ ಮಾತುಗಳು ಗಮನ ಸೆಳೆಯುತ್ತವೆ. ಇಲ್ಲಿಯ ವರ್ಣಗಾರಿಕೆಯ ವಿನ್ಯಾಸ, ಪ್ರಮಾಣಬದ್ಧವಾದ ವ್ಯಕ್ತಿಗಳ ಕಲಾತ್ಮಕ ಸಂಯೋಜನೆ, ಹೊಗೆಯಿಂದ ಆವೃತವಾದ ಆಕಾಶದ ಹಿನ್ನೆಲೆಯ ವಿನ್ಯಾಸ ಇತ್ಯಾದಿ ಅಂಶಗಳಿಂದ ಈ ಕೃತಿ ಆಕರ್ಷಣೀಯವಾಗಿ ಕಂಗೊಳಿಸುತ್ತದೆ. ಮುದ್ರಿದ್‌ನ ಪ್ರದೋ ಮ್ಯೂಜಿಯಮ್‌ನಲ್ಲಿ ಇದು ಸಂಗ್ರಹಿಸಲ್ಪಟ್ಟಿದೆ.

ವೆಲಸ್ಕತ್‌ನ ಕಲಾಶೈಲಿ : ವೆಲಸ್ಕತ್‌ನ ಕಲಾಶೈಲಿಯು ಒಂದು ರೀತಿಯ ಪರಂಪರಾಗತ ವಾದ ಮಾರ್ಗಶೈಲಿಯೆನ್ನಬಹುದು. ಈತನ ಮೇಲೆ ರುಬೆನ್ಸ್, ರೈಬರ ಇನ್ನಿತರ ಕಲಾವಿದರ ಪ್ರಭಾವವಿರುವುದನ್ನು ವಿಮರ್ಶಕರು ಗುರುತಿಸುತ್ತಾರೆ. ಹರ್ಮನ್ ಅವರು ವೆಲಸ್ಕತ್‌ನ ಕಲಾಕೃತಿಗಳ ಕುರಿತು.

"That one is looking at a painting. Such is the truth of color, such the exactness of perspective, that one might think to go in and walk on the pavement, fessellated with stones of divers colours, which diminishing in size, make the room seem larger, and lead one to believe that there is atmosphere between the figures the tab'es, seats and a dog which is worked in are truth not paint... once for all any picture placed beside it looks like something expressed in terms of color and this, therefore, seems all the truer"[೪] ಎಂದು ಹೇಳಿರುವ ಮಾತುಗಳು ಅವನ ಕಾಲಕೃತಿಗಳ ಒಟ್ಟು ವಿಮರ್ಶೆಯೇ ಆಗಿದೆ.

ವೆಲಸ್ಕತ್‌ನ ಕಲಾಕೃತಿಗಳಲ್ಲಿ ಈತನದೇ ಆದ ಕೆಲವು ವೈಲಕ್ಷಣಗಳನ್ನು ಸಹ ಕಾಣಬಹುದು. ಕಪ್ಪುವರ್ಣದ ಹಿನ್ನೆಲೆಯ ಮೇಲೆ ಆಕರ್ಷಕವಾದ ಶ್ರೀಮಂತ ವರ್ಣದ ರಚನೆಗಳ ವಿನ್ಯಾಸ

---

೩. Edith Tomory : Introduction to the history of fine Arts in India and the West, Page-184

೪. Hermanj. Wechsler: The pocket book of old Masters, Page-93

ಸ್ಥಳದ ಕಲಾತ್ಮಕ ಹೊಂದಾಣಿಕೆ ಮತ್ತು ವಾತಾವರಣದ ಬಳಕೆ ಪ್ರಮುಖವಾಗಿ ಗಮನ ಸೆಳೆಯುತ್ತವೆ. ನೈಜತೆಯನ್ನು ಕಲಾಕೃತಿಗಳಲ್ಲಿ ನೈಜವಾಗಿ ತರುವ ಪ್ರಯತ್ನವಿದೆ. ಸಮೀಪ ದೂರದ ಕಲ್ಪನೆಯಲ್ಲಿ, ಶಾರೀರಕ ಅಂಗರಚನಾ ವಿನ್ಯಾಸದಲ್ಲಿ, ಪ್ರಮಾಣಬದ್ಧತೆಗೆ ಹೆಚ್ಚು ಮಹತ್ವ ಕೊಟ್ಟಿರುವದು ಕಂಡುಬರುವುದು. ವೆಲಸ್ಕತ್‌ನ ಅನೇಕ ವ್ಯಕ್ತಿಚಿತ್ರಗಳು ಒಂದೇ ತರಹದ ವರ್ಣವಿನ್ಯಾಸ, ವೇಷಭೂಷಣ ಕುಳಿತುಕೊಂಡ ಅಥವಾ ನಿಂತಿರುವ ಭಂಗಿ, ಹಾವಭಾವದಿಂದಾಗಿ, ಕೆಲವು ಸಲ ನೋಡುವವನಿಗೆ ಹೊಸತನವನ್ನು ಕೊಡುವುದಿಲ್ಲ. ಇಂತಹ ಕೆಲವು ದೌರ್ಬಲ್ಯಗಳ ಮಧ್ಯದಲ್ಲಿಯೂ ವೆಲಸ್ಕತ್‌ನ, ಕುಂಚದ ಕೈಚಳಕ ಸಹೃದಯರನ್ನು ಆಕರ್ಷಿಸಿದೆ ಎನ್ನಬಹುದು. ಕಲಾಕೃತಿಗಳ ಸಂಗ್ರಹ; ಈತನ ಕಲಾಕೃತಿಗಳ ಸಂಗ್ರಹವು ಸ್ಪ್ಯಾನ್, ಮದ್ರಿದ್‌ನ 'ಪ್ರದೋ' ಬೆರೆಲಿನ್, ಬೋಸ್ಟನ್, ಬುಡಾಪೇಷ್ಟ, ಚಿಕಾಗೋ ಡಿಟ್ರಯಿಟ್, ಡ್ರೆಸ್‌ಡಾನ್, ಫ್ಲೋರೆನ್ಸ್, ಕನಸಾಸ್ ಪಟ್ಟಣ, ಲಂಡನ್, ನ್ಯೂಯಾರ್ಕ್, ಪ್ಯಾರಿಸ್, ವಿಯನ್ನಾ, ಮತ್ತು ವಾಶಿಂಗ್‌ಟನ್[೫] ಮುಂತಾದ ಜಗತ್ ವಿಖ್ಯಾತ ಕಲಾಸಂಗ್ರಹಾಲಯಗಳಲ್ಲಿ ಸಂರಕ್ಷಿತಗೊಂಡಿದೆ.

ವೆಲಸ್ಕತ್‌ನ ಕೊನೆಯ ದಿನಗಳು ಹರ್ಷಭರಿತವಾಗಿರಲಿಲ್ಲ. ಶ್ರೀಮಂತಿಕೆಯ ಪರಿಸರದ ದುಂದುಗಾರಿಕೆಯಿಂದ ವಿಪರೀತ ಸಾಲ ಮಾಡುತ್ತಾನೆ. ಒಂದು ಚಿತ್ರ ರಚನೆಗಾಗಿ ವ್ಯಾಪಾರಿಯೊಬ್ಬನಿಂದ ಮುಂಗಡವಾಗಿ ಒಂದು ಸಾವಿರ ಡಕೆಬ್ ಹಣ ಪಡೆದು ಮುಂದೆ ಆತನ ಚಿತ್ರ ಪೂರ್ತಿಮಾಡದೆ ಸತ್ತುಹೋದಾಗ ಹಣಕೊಟ್ಟ ವ್ಯಕ್ತಿ ಈತನ ಮನೆಮಾರುಗಳನ್ನೆಲ್ಲ ಮಾರಿಸಿ ಹಣವನ್ನು ಮರಳಿ ಪಡೆದ ವಿಷಯ ತಿಳಿದುಬರುತ್ತದೆ. ವೆಲಸ್ಕತ್ ತೊಂದರೆಯಲ್ಲಿಯೇ ಬದುಕನ್ನು ಸವೆಯಿಸಿ ೧೬೬೦ ಆಗಸ್ಟ್ ೬ನೆಯ ತಾರೀಖಿನ ದಿನ ಮರಣವನ್ನಪ್ಪುತ್ತಾನೆ. ಆಗ ಅವನಿಗೆ ೬೧ ವಯಸ್ಸಾಗಿದ್ದವು. ಸ್ಪೇನದ ಕಲಾಪರಂಪರೆಗೆ ವೆಲಸ್ಕತ್‌ನ ಕಲಾಕೃತಿಗಳು ಅಪೂರ್ವ ಕಾಣಿಕೆಗಳಾಗಿ ಕಂಗೊಳಿಸುತ್ತಿವೆ.

❑


೫. Peter and Linda Murray : A Dictionary of Art and Artists, Page-132.



ಜಾನ್ ಮಟ್ಕೇಶ್‌ನ ಭಾವಚಿತ್ರ



ದಿ ಸರಂಡರ್ ಆಫ್ ಬ್ರೀಡಾ



vi ಪೋಸಿನ್

೧೫೯೪–೧೬೬೫

ಹದಿನೇಳನೆಯ ಶತಮಾನದಲ್ಲಿ ಹಲವಾರು ಜನ ಫ್ರೆಂಚ್ ಕಲಾವಿದರು ರೋಮ್‌ನಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ತಮ್ಮದೇ ಆದ ಸೃಜನಶೀಲತೆಯಿಂದ ಮುಂದೆ ಬಂದವರು ಬಹಳ ಕಡಿಮೆ. ಈ ವಿರಳ ವರ್ಗದ ಜನರಲ್ಲಿ ಎದ್ದು ಕಾಣಿಸುವ ದೊಡ್ಡ ಹೆಸರು ನಿಕೋಲಸ್ ಪೋಸಿನ್‌ನದು. ಈತನು ತನ್ನ ಚಿತ್ರಕಲಾಮಾಧ್ಯಮದಲ್ಲಿ ಅನುಸರಿಸಿದ ರೀತಿ ಪರಂಪರಾಗತವಾದ ಮಾರ್ಗ, ಈ ಹಿಂದೆ ಅನೇಕ ಜನರು ಅನುಸರಿಸಿಕೊಂಡು ಬಂದ ಹಾದಿಯಲ್ಲಿಯೇ ಇವನೂ ಕೂಡ ನಡೆದು ಬಂದರೂ ಈತ ತನ್ನತನದ ವ್ಯಕ್ತಿತ್ವವನ್ನು ಉಳಿಸಿಕೊಂಡು ಬಂದಿದ್ದಾನೆ. ಪ್ರತಿಭಾವಂತನಾದ ಪೋಸಿನ್ ವಸ್ತುವನ್ನು ನೋಡುವ ದೃಷ್ಟಿಕೋನ ಅದನ್ನು ಸೆರೆಹಿಡಿಯುವ ರಮ್ಯವಾದ ಕಲ್ಪನಾತ್ಮಕತೆಯಿಂದಾಗಿ ಗಮನ ಸೆಳೆಯುತ್ತಾನೆ ಅಲ್ಲದೆ ವೈವಿಧ್ಯಮಯವಾದ ವಿಷಯಗಳಲ್ಲಿ ಬಾರೋಕ್ ಶೈಲಿಯ ಲಕ್ಷಣಗಳನ್ನು ಯಥಾವತ್ತಾಗಿ ಪಡಿಮೂಡಿಸಿದ್ದಾನೆ. ಪ್ರಸ್ತುತ ಈತನ ಜೀವನ ಹಾಗೂ ಕಲಾಕೃತಿಗಳ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

ಬಾಲ್ಯ ಜೀವನ : ನಿಕೋಲಸ್ ಪೋಸಿನ್ ೧೫೯೪ರಲ್ಲಿ ಫ್ರೆಂಚ್‌ನ ಲೀಸ್ ಅಂಡೆಲೀಜ್‌ನಲ್ಲಿ ಜನಿಸುತ್ತಾನೆ. ಈತನ ತಾಯಿ ತಂದೆಗಳ, ಮನೆತನದ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. Norman Peasans Family ಯಿಂದ ಪೋಸಿನ್ ಬೆಳೆದುದನ್ನು ಹಾಗೂ ಅಲ್ಲಿಯ ಸ್ಥಳೀಯ ಕಲಾವಿದ Varin (ವರೇನ್) ಈತನ ಕಲಾಸಕ್ತಿಗೆ ಪ್ರೇರಣೆ ನೀಡಿದುದನ್ನು ಇತಿಹಾಸಕಾರರು ವಿವರಿಸುತ್ತಾರೆ. ತನ್ನ ೧೮ನೆಯ ವಯಸ್ಸಿನಲ್ಲಿ (೧೬೧೨)ರಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಪ್ಯಾರಿಸಿಗೆ ಹೋಗುತ್ತಾನೆ. ಅಲ್ಲಿ ಫರ್ಡಿನಾಂಡ್ ಎಲ್ಲೆ, ಪ್ಲಾಂಡ್ಸ ಮತ್ತು ಲೇತಿಮ್ಯಾಂಡ್ ಮುಂತಾದ ಕಲಾವಿದರ ಸ್ಟುಡಿಯೋಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸಿ ಅವರೆಲ್ಲರ ಪ್ರೀತಿಯನ್ನು ಗಳಿಸುತ್ತಾನೆ. ಅಲ್ಲದೆ ರಾಯಲ್ ಸಂಗ್ರಹದ ರ್‍ಯಾಪಲ್, ಗಿಲಿಯೋ, ರೋಮೋನೋ, ಮುಂತಾದವರ ಕಲಾಕೃತಿಗಳ ಅಧ್ಯಯನ ಮಾಡುವ ಅವಕಾಶವನ್ನು ಸಹ

ಪಡೆಯುತ್ತಾನೆ. ೧೬೧೨ರಲ್ಲಿ ಫಿಲಿಫ್‌ಡೆ ಚಾಂಪಂಜೆನ ಅರಸನ ಅರಮನೆಯಲ್ಲಿ ಡೆಕಾರೇಶನ್‌ದ ಕೆಲಸಕ್ಕೆ ನೇಮಕಗೊಂಡು ಅಲ್ಲಿ ರೂಬೆನ್ಸ್ ಇನ್ನಿತರರ ಚಿತ್ರಗಳ ಸರಣಿಗೆ ಅಲಂಕಾರದ ಕಾರ್ಯನಿರ್ವಹಿಸುತ್ತಾನೆ.

೧೬೨೪ರಲ್ಲಿ ರೋಮ್‌ಗೆ ಬಂದು ಅಲ್ಲಿ ಕಾರ್ಡಿನಲ್ ಬರ್‌ಬರೆನಿ ಮುಂತಾದ ಕಲಾವಿದರ ಸಾನ್ನಿಧ್ಯದಲ್ಲಿ ಪ್ರಾಚೀನ ಶಿಲ್ಪಕಲಾ ಕೃತಿಗಳ ಅಭ್ಯಾಸ ಮಾಡುವುದಲ್ಲದೆ ಅನೇಕ ಆಂಟಿಕ್‌ಗಳನ್ನು ಪ್ರತಿಸೃಷ್ಟಿಸುವ ಕಾರ್ಯವನ್ನು ಕೈಗೊಳ್ಳುತ್ತಾನೆ. ಈ ಸಂದರ್ಭದಲ್ಲಿ 'ರೆನಿಸಾನ್ಸ್' (ಪುನರುಜ್ಜೀವನ) ಕಾಲದ ಪ್ರಸಿದ್ಧ ಕಲಾಕಾರರ ಹಾಗೂ ಸಾಹಿತ್ಯ ಕೃತಿಗಳ ಪ್ರಭಾವಕ್ಕೆ ಒಳಗಾಗುತ್ತಾನೆ. ಅಲ್ಲದೆ ಶಾಸ್ತ್ರೀಯವಾದ 'ಅನಾಟಮಿ' ಮತ್ತು ಯಥಾದರ್ಶನದ ಹಿನ್ನೆಲೆಯಲ್ಲಿ ಕೃತಿರಚನೆಗೆ ತೊಡಗುತ್ತಾನೆ. ಪ್ರಾರಂಭದಲ್ಲಿ 'ಟಿಟಿನ್'ನ ಕಲಾಕೃತಿಗಳ ಪ್ರತಿಕೃತಿಮಾಡಿ ಹೆಸರು ಗಳಿಸುತ್ತಾನೆ. ಇಲ್ಲಿ ಬಣ್ಣಗಳ ವೈವಿಧ್ಯಮಯವಾದ ಅಧ್ಯಯನದಿಂದ ೧೬೨೮ರಲ್ಲಿ ವ್ಯಾಟಿಕನ್‌ದಲ್ಲಿ ಸೆಂಟ್‌ಪೀಟರ್‌ನ ಕೃತಿರಚನೆಯಲ್ಲಿ ತೊಡಗುತ್ತಾನೆ. ಈ ಅವಧಿಯಲ್ಲಿ ೧೬೩೦ರ ವರೆಗೆ ಅವ್ಯಾಹತವಾಗಿ ಈತನ ಆರೋಗ್ಯ ಕೆಡುತ್ತದೆ. ನಂತರ ಚೇತರಿಸಿಕೊಂಡ ಪೋಸಿನ್‌ನ ಕಲಾಕೃತಿಗಳ ಶೈಲಿಯೇ ಪರಿವರ್ತನಗೊಳ್ಳುತ್ತದೆ.

ಪೋಸಿನ್ ೧೬೩೩ರಿಂದ ಕಾಂಪೋಜಿಶನ್ (ಸಂಯೋಜನ) ಚಿತ್ರಗಳನ್ನು ಹೆಚ್ಚಾಗಿ ರಚಿಸಿದ್ದು ಕಂಡುಬರುತ್ತದೆ. ಇವನ ಸಂಯೋಜನ ಕೃತಿಗಳನೇಕ ಜಗದ್ವಿಖ್ಯಾತಿಯನ್ನು ಗಳಿಸಿವೆ. ೧೬೪೦–೧೬೪೨ರವರೆಗೆ ಹದಿಮೂರನೆಯಲೂಯಿಸ್ ರಾಜನ ಆಮಂತ್ರಣದ ಮೇರೆಗೆ ಲೂಯರಿಗೆ ಬಂದು Labowrs of Herculer, lasa Supper for verrailles, and eight cartons for the gobelin in tapestries ಹೀಗೆ ಅನೇಕ ಕಲಾಕೃತಿಗಳನ್ನು ನಿರ್ಮಿಸುವದಲ್ಲದೆ ಅಲ್ಲಿಯ ಕಲಾಗ್ಯಾಲರಿಯ ಅಲಂಕರಣೆಯನ್ನು ಮಾಡಿದ್ದಾನೆ. ಮುಂದೆ ರೋಮ್‌ಗೆ ಮರಳಿಬಂದು ಅಲ್ಲಿಯೇ ತನ್ನ ಕೊನೆಯ ದಿನಗಳನ್ನು ಕಳೆಯುತ್ತಾನೆ.

ಪೋಸಿನ್‌ನ ಕೆಲವು ಕಲಾಕೃತಿಗಳು :

೧. ಆರ್ಪೆಸ್ ಮತ್ತು ಯುರೈಡಾಯಿಸ್ (Orpheus and Eurydice)
೨. ದಿ ಆರ್ಕೆಡಿಯನ್ ಶಫರ್ಡ್ಸ್ (The Arcadian Shepherds)
೩. ದಿ ಟ್ರಂಪ್ ಆಫ್ ಪಾನ (The Triumph of pan)
೪. ದಿ ಟ್ರಂಪ್ ಆಫ್ ಗಲ್ಪಾ (The Triymph of Gult)

೧. ಆರ್ಫೇಸ್ ಮತ್ತು ಯುರೈಡಾಯಿಸ್ : ೧೬೪೨ರಲ್ಲಿ ತೈಲವರ್ಣದಲ್ಲಿ ಈ ಚಿತ್ರ ರಚನೆಗೊಂಡಿದೆ. ಪೌರಾಣಿಕ ಹಿನ್ನೆಲೆಯ ಕಥೆಯೊಂದರ ನಿರೂಪಣೆಯು ಇಲ್ಲಿದೆ. ಸುಂದರವಾದ ಸರೋವರ, ದೂರದಲ್ಲಿ ಕಾಣುವ ಕೋಟೆ ಕೊತ್ತಲಗಳು, ಪ್ರಶಾಂತವಾದ ಆಕಾಶದ ವಿವಿಧ ವರ್ಣಗಳ ವಿನ್ಯಾಸ ಎಂತಹವರನ್ನು ಆಕರ್ಷಿಸುವಂತಹದ್ದು. ಪೋಸಿನ್ ತಾನೊಬ್ಬ ಸಮರ್ಥ ನಿಸರ್ಗ ಚಿತ್ರಕಾರನೆಂದು ಇದರಿಂದ ಋಜುವಾತು ಮಾಡಿದ್ದಾನೆ. ಬಣ್ಣಗಳ ಹಿತಮಿತ ಬಳಕೆ ಪ್ರಕೃತಿಯ ಸೌಂದರ್ಯವನ್ನು ಯಥಾವತ್ತಾಗಿ ಸೆರೆಹಿಡಿಯುವ

ಪ್ರಯತ್ನವನ್ನು ಇಲ್ಲಿ ಕಾಣಬಹುದು. ಅಲ್ಲದೆ ಚಿತ್ರಗಳಿಗಿಂತ ಹಿನ್ನೆಲೆಯ ಸೌಂದರ್ಯವೇ ಪ್ರಧಾನವಾಗಿದೆ. ಹೀಗಾಗಿ ಚಿತ್ರದಲ್ಲಿರುವ ವ್ಯಕ್ತಿಗಳು ಗೌಣವಾಗಿ ಕಾಣುತ್ತವೆ. ಈಗ ಈ ಕೃತಿ ಲೂವೇರಿಯ ಮ್ಯೂಜಿಯಮ್‌ನಲ್ಲಿ ಸಂಗ್ರಹಗೊಂಡಿದೆ.

೨. ದಿ ಆರ್ಕೆಡಿಯನ್ ಶಪರ್ಡ್ : ೧೬೬೮ರಲ್ಲಿ ಈ ಸಂಯೋಜನಾ ಚಿತ್ರವು ತೈಲವರ್ಣದಲ್ಲಿ ಸೃಷ್ಟಿಗೊಂಡಿದೆ. ಪೋಸಿನ್‌ನ ಅತ್ಯಂತ ಪ್ರಸಿದ್ಧ ಚಿತ್ರಗಳಲ್ಲಿ ಇದು ಒಂದಾಗಿದೆ. ಆರ್ಕೆಡಿಯನ್ ಶಪರ್ಡ್ಸ್ ಇಲ್ಲಿಯ ಸಂಯೋಜನೆ ತೀರ ಸರಳ ಮತ್ತು ಕಲಾತ್ಮಕವಾದದ್ದು. ಆಕರ್ಷಕ ಬಂಗಾರವರ್ಣದ ನೆರಳು ಬೆಳಕಿನ ವಿನ್ಯಾಸ ವಿಶಿಷ್ಟವಾದುದಾಗಿದೆ. ರೆಸಾಯಿನ್ ಮತ್ತು ಕೊರೆನಾಯಿಲ್‌ರ ಪ್ರಭಾವ ಇದರ ಮೇಲೆ ಆಗಿರುವುದನ್ನು ಕಾಣಬಹುದಾಗಿದೆ. ಸಧ್ಯ ಲೂವೇರಿಯ ವಸ್ತು ಸಂಗ್ರಹದಲ್ಲಿದೆ.

೩. ದಿ ಟ್ರಂಪ್ ಆಫ್ ಪಾನ : ಈ ಚಿತ್ರವು ಸಹ ನಿಸರ್ಗದ ಹಿನ್ನಲೆಯ ಪೌರಾಣಿಕ ವಸ್ತುವಿನ ಸಂಯೋಜನ ಕೃತಿಯಾಗಿದೆ. ಪೋಸಿನ್ ನಿಸರ್ಗದ ಸೂಕ್ಷ್ನ್ಮವಾದ ವಿವರಗಳನಿನು ಹೇಗೆ ದಾಖಲಿಸುತ್ತಾನೆ ಎಂಬುದಕ್ಕೆ ಈ ಕೃತಿ ಸಾಕ್ಷಿ. ಇಲ್ಲಿ ಸುಮಾರು ೧೩ಕ್ಕೂ ಹೆಚ್ಚು ವ್ಯಕ್ತಿಗಳಿದ್ದಾರೆ. ವಿವಿಧ ಬಂಗಿಯ ಸಮೂಹ ಸಂಯೋಜನೆಯಲ್ಲಿ ಎಲ್ಲಿಯೂ ಸಮತೋಲನ ತಪ್ಪದಂತೆ ಬಳಿಸಿರುವ ವರ್ಣವಿನ್ಯಾಸ, ಪ್ರಮಾಣಬದ್ಧವಾದ ವ್ಯಕ್ತಿ ಚಿತ್ರಗಳು, ಆತನ ಶಕ್ತಿಶಾಲಿ ಕುಂಚದ ಹಿಡಿತಕ್ಕೆ ನಿದರ್ಶನವಾಗಿವೆ. ಈಗ ಇದು ನ್ಯಾಸನಲ್ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿವೆ.

೪. ದಿ ಟ್ರಂಪ್ ಆಪ್ ಗಲ್ಬಾ : ತೈಲವರ್ಣದ ಈ ಕೃತಿಯು ಸಹ ನಿಸರ್ಗದ ಹಿನ್ನೆಲೆಯ ಸಂಯೋಜನೆಯನ್ನು ಹೊಂದಿದೆ. ಈ ವಿಷಯದ ಚಿತ್ರವೊಂದನ್ನು ಕಹ್ರಾಚಿಯಾ ಬಿಡಿಸಿದ್ದಾನೆ. ಇವರಿಬ್ಬರು ಒಂದೇ ವಿಷಯದ ಚಿತ್ರ ಬಿಡಿಸಿದರೂ ಅವರ ಶೈಲಿಯಲ್ಲಿ ಭಿನ್ನತೆಗಳಿವೆ. ಕಹ್ರಾಚಿ ಕ್ಲಾಸಿಕ್ ಶೈಲಿಯಲ್ಲಿ ಚಿತ್ರಿಸಿದರೆ ಪ್ಲೋಸಿನ್ ಎಂಟಕ್ ಶೈಲಿಯಲ್ಲಿ ನಗ್ನರೂಪದಲ್ಲಿ ಚಿತ್ರಿಸಿದ್ದಾನೆ. ಇಲ್ಲಿ ಮಲಗಿದ ವಿವಿಧ ಭಂಗಿಯ ಕುದುರೆಗಳಿವೆ. ಅವುಗಳ ಶಾರೀರಿಕ ವಿನ್ಯಾಸ ಯಥಾ ದರ್ಶನದ ಹಿನ್ನೆಲೆ ಇವೆಲ್ಲವುಗಳ ಪರಿಕಲ್ಪನೆಯಿಂದ ಕೃತಿ ಸತ್ವಪೂರ್ಣವಾಗಿ ಮೈದಳೆದು ನಿಂತಿದೆಯೆಂದು ಹೇಳಬಹುದು, ವ್ಯಕ್ತಿಚಿತ್ರಗಳಿಗೆ ಇಲ್ಲಿಯೂ ಗೌಣತೆ ಇರುವುದು. ಇದರಿಂದಾಗಿ ಚಿತ್ರ ಕೆಲವು ಸಲ ತನ್ನ ಈ ಆಕರ್ಷಣೆಯಿಂದ ಕಳಪೆ ಯಾಗುವ ಸಂಭವವೂ ಇದೆ. ಈಗ ಪ್ಯಾರಿಸಿನ ಲೂವೇರಿಯಾ ಸಂಗ್ರಹದಲ್ಲಿದೆ.


ಕಲಾಶೈಲಿ : ಪೋಸಿನ್‌ನ ಕಲಾಶೈಲಿಯಲ್ಲಿ ರ್‍ಯಾಪಲ್‌ನ ಸಂಯೋಜನ ತಂತ್ರ, ಟಿಟಿನ್‌ನ ಶ್ರೀಮಂತವರ್ಣಗಾರಿಕೆ ಕಹವಾಜೋನ, ನೆರಳು ಬೆಳಕಿನ ವಿನ್ಯಾಸವನ್ನು ಕಾಣಬಹುದಾದರೂ ತನ್ನತನವನ್ನು ಆತ ಉಳಿಸಿಕೊಂಡಿದ್ದಾನೆ. ಎಂಟಿಕ್ ಮಾದರಿಯ ಸಂಯೋಜನೆ ಅದಕ್ಕೆ ಹಿನ್ನೆಲೆಯಾಗಿ ನಿಸರ್ಗದ ಸುಂದರ ಆಚ್ಛಾದನೆ ಹಿತಮಿತವಾದ ಬಣ್ಣಗಳ ಬಳಕೆ ಇವು ಈತನ ಶೈಲಿಯ ವೈಶಿಷ್ಟ್ಯಗಳಾಗಿವೆ.

ಕಲಾಕೃತಿಗಳ ಸಂಗ್ರಹ [೧] : ಬರೇಲಿನ್, ಬೋಸ್ಟನ್, ಚಂಟಲ್ಲೆ, ಚಿಕಾಗೋ, ಕ್ಲವ್‌ಲ್ಯಾಂಡ್, ಕೋಪನ್‌ಗ್ಹನ್, ಡೆಟ್ರೋಯಿಟ್, ಡ್ರೆಶಡೇನ್, ಇಡನ್, ಬರ್ಗ, ಹಾರ್ಟಫೋರ್ಡ, ಲೇನಿನ್‌ಗಾರ್ಡ, ಲಂಡನ್‌ಮದ್ರಿಲ್, ಮಿನ್ನೇಪೋಲಿಸ್ ಮಾಂಟೋರೆಯಿಲ್, ಮ್ಯಾನಿಚ್, ನ್ಯೂಯಾರ್ಕ್, ಒಟ್ವಾ, ಪ್ಯಾರಿಸ್, ರೋಮ್, ಟೋರೆಂಟೋ, ವಿಯೆನ್ನಾ, ವಾಶಿಂಗ್‌ಟನ್ ಮುಂತಾದ ಪ್ರಸಿದ್ಧ ಕಲಾಸಂಗ್ರಹಾಲಯಗಳಲ್ಲಿ ಈತನ ಕೃತಿಗಳು ಸಂಗ್ರಹಗೊಂಡಿವೆ. ಪೋಸಿನ್ ವೈವಿಧ್ಯಮಯವಾದ ಹಾಗೂ ಸುಂದರವಾದ ಚಿತ್ರಗಳನ್ನು ಕಲಾಲೋಕಕ್ಕೆ ಅರ್ಪಿಸಿ ೧೬೬೫ರಲ್ಲಿ ಮರಣವನ್ನಪ್ಪುತ್ತಾನೆ.

❑

---

೧. Peter & Linda Murry : A Dictionaryof Art & Artists Page-254.





ದಿ ಆರ್ಕೆಡಿಯನ್ ಶಫರ್ಡ್






ಪೋಸಿನ್‌ನ ಸಂಯೋಜನಾ ಚಿತ್ರಗಳು







ಪೋಸಿನ್‌ನ ಸಂಯೋಜನಾ ಚಿತ್ರಗಳು

vii ಕ್ಲಾಡ್ ಲೋರೈನ್

೧೬೦೦-೧೬೮೨

ನಿಸರ್ಗದ ಪರಿಸರದಲ್ಲಿ ಪ್ರಕೃತಿಯ ಭಾಗವಾಗಿ ಜನಿಸಿದ ಮಾನವ ತನ್ನ ಸುತ್ತಣ ಪರಿಸದ ರಮ್ಯತೆಯನ್ನು ಕಂಡು ಅದಕ್ಕೆ ಮಾರುಹೋದ. ಅದರ ಭೀಮ ಸೌಂದರ್ಯವನ್ನು ಅನುಕರಿಸಲು ಯತ್ನಿಸಿದ ಅದರಂತೆ ಚಿತ್ರಿಸಲು ಪ್ರಯತ್ನಿಸಿದ. ಇದರ ಪರಿಣಾಮವಾಗಿ ನಿಸರ್ಗದ ಸುತ್ತಮುತ್ತಲಿನ ವಿಷಯಗಳು ಅಲ್ಲಿ ಪ್ರತಿಷ್ಠಾಪಿತಗೊಂಡವು. ಈ ಪ್ರತಿಸೃಷ್ಟಿಯ ಕ್ರಿಯೆ ನಿನ್ನೆಮೊನ್ನೆಯದಲ್ಲ. ಅದು ಮಾನವನೊಂದಿಗೆ ಕಾಲ ದೇಶ ಭಾಷೆಗಳಿಲ್ಲದೆ ಹಾಗೆಯೇ ಬೆಳೆದುಕೊಂಡು ಬಂದಿರವಂತಹದು.

ಭಾರತೀಯ ಹಾಗೂ ಪಾಶ್ಚಿಮಾತ್ಯ ಕವಿ ಕಲಾವಿದರನೇಕರು ಪ್ರಕೃತಿಯ ಆರಾಧಕರಾಗಿ ಅದರ ನಿಗೂಢತೆಯನ್ನು ಸೆರೆಹಿಡಿಯುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾರೆ. ಈ ಪರಂಪರೆಯಲ್ಲಿ ಪಾಶ್ಚಿಮಾತ್ಯ ಚಿತ್ರಕಾರರ ಸಾಲಿನಲ್ಲಿ ಕೇಳಿಬರುವ ದೊಡ್ಡ ಹೆಸರು ಕ್ಲಾಡ್ ಲೋರೈನ್‌ನದು. ಬಾರೋಕ್ ಯುಗದ ಪರಿಸರದಲ್ಲಿ ಬೆಳೆದುಬಂದ ಈತ ನಿಸರ್ಗದ ಚಿತ್ರಗಳಿಂದಲೇ ತನ್ನನ್ನು ಗುರುತಿಸಿಕೊಂಡಿದ್ದಾನೆ.

ಬಾಲ್ಯ ಜೀವನ : ಕ್ಲಾಡ್‌ಲೋರೈನ್ ಕ್ರಿ.ಶ. ೧೬೦೦ರಲ್ಲಿ ರೋಮಿನ ನನ್ಸಿ ಎಂಬ ಊರಿನಲ್ಲಿ ಜನಿಸುತ್ತಾನೆ. ಈತನ ಮೊದಲಿನ ಪೂರ್ಣ ಹೆಸರು ಕ್ಲಾಡ್ ಗಿಲ್ಲೇ ಎಂದು ನಂತರ ಇವನು ಲೊರೈನ್‌ಗೆ ಬಂದು ನೆಲೆಸಿದುದರಿಂದ ಲೋರೈನ್ ಎಂಬ ಹೆಸರು ಅನ್ವರ್ಥಕವಾಗಿ ಬಳಕೆಗೆ ಬಂದಿತು. ಆರ್ಥಿಕ ಅನಾನುಕೂಲತೆಗಳಿದ್ದ ಸಾಮಾನ್ಯ ಸಣ್ಣ ಕುಟುಂಬದಲ್ಲಿ ಕ್ಲಾಡ್ ಲೋರೈನ್‌ನ ಬಾಲ್ಯಜೀವನ ಕಳೆಯುತ್ತದೆ. ಇವನ ಜೀವನ ಚರಿತ್ರೆಯ ಕುರಿತು ಸರಿಯಾದ ಮಾಹಿತಿ ಉಪಲಬ್ದವಾಗಿಲ್ಲದ್ದರಿಂದ ಸಂಕ್ಷಿಪ್ತದಲ್ಲಿಯೇ ಆತನನ್ನು ಪರಿಚಯಿಸಬೇಕಾಗಿದೆ.

ಚಿಕ್ಕಂದಿನಿಂದಲೂ ಚಿತ್ರಕಲೆಯ ಕಡೆಗೆ ಒಲವು ಹೊಂದಿದ ಲೋರೈನ್‌ಗೆ ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಅಂದರೆ ೧೬೧೨ರಲ್ಲಿ ಕೆಲಸಕ್ಕೆ ಸೇರುತ್ತಾನೆ. ಈ ವೃತ್ತಿಯು

ಖ್ಯಾತ ನಿಸರ್ಗ ಚಿತ್ರಕಾರ ಅಗಸ್ಟಿನೋ ಟೆಸ್ಸ್‌ನ ಸ್ಟುಡಿಯೋದಲ್ಲಿ ಸಿಕ್ಕಿದ್ದು ಲೋರೈನ್‌ನ ಭಾಗ್ಯದ ಬಾಗಿಲು ತೆರೆಯಲು ಸಹಾಯವಾಗುತ್ತದೆ. ಯಾಕೆಂದರೆ ಅವನ ಆಸಕ್ತಿಯ ಕ್ಷೇತ್ರವು ಚಿತ್ರ ರಚಿಸುವುದಾಗಿತ್ತು. ಇಲ್ಲಿ ಟೆಸ್ಸ್‌ನ ಕೈಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತ ಆತನ ಮಾರ್ಗದರ್ಶನದಲ್ಲಿ ಚಿತ್ರಕಲಾಭ್ಯಾಸವನ್ನು ಸಹ ಮಾಡುತ್ತಾನೆ. ನಿಸರ್ಗದ ಕಡೆಗೆ ಆಸಕ್ತಿ ಬೆಳೆಯಲು ಕಾರಣೀಭೂತನಾದ ಕಲಾಗುರು ಅಗಸ್ಟಿನೊ ಟೆಸ್ಸ್ ಈತನಿಗೆ ಪ್ರೋತ್ಸಾಹ ಹಾಗೂ ಮಾರ್ಗದರ್ಶನಗೈಯುವದರೊಂದಿಗೆ ಚಿತ್ರ ರಚನೆಗೂ ಹಚ್ಚುತ್ತಾನೆ. ಈ ಹಂತದಲ್ಲಿಯೇ ಅನೇಕ ಉತ್ತಮ ಕಲಾಕೃತಿಗಳನ್ನು ಲೋರೈನ್ ನಿರ್ಮಿಸಿದ್ದಾನೆ.

ಕೆಲವು ಕಾಲ ಕ್ಲಾಡ್ ಲೋರೈನ್ ೧೬೨೩ರಲ್ಲಿ ನೇಪಲ್ಸ್ ನಲ್ಲಿ ಕೆಲಸ ಮಾಡಲು ಹೋಗಿ ಪುನಃ ೧೬೨೫ರಲ್ಲಿ ನನ್ಸಿಗೆ ಬರುತ್ತಾನೆ. ೧೬೨೭ರಲ್ಲಿ ರೋಮ್‌ನ ಹರ್ಬರವೊಂದರಲ್ಲಿ ಪೇಂಟರನಾಗಿ ಸೇವೆಯನ್ನು ಮುಂದುವರಿಸುವನು. ಹರ್ಬರದ ವಿವಿಧ ಚಿತ್ರ ರಚನೆಗಳು ನಿಸರ್ಗದ ರಮಣೀಯ ದೃಶ್ಯಗಳು ಈತನ ಕುಂಚದಲ್ಲಿ ಸೆರೆಹಿಡಿಯಲ್ಪಡುತ್ತವೆ. ಕೆಲವೇ ದಿವಸಗಳಲ್ಲಿ ಲೊರೈನ್ ತನ್ನ ಕಲಾತ್ಮಕವಾದ ವಿಶಿಷ್ಟ ತಂತ್ರದಿಂದಾಗಿ ಪ್ರಖ್ಯಾತಿಯನ್ನು ಗಳಿಸುತ್ತಾನೆ. ಮುಂದೆ ಇವನು ಪ್ಲೆಮಿಂಗ್ ಪಾಲ್‌ಬ್ರಲ್ ಮತ್ತು ಜರ್ಮನಿಯ ಆಡಮ್ ಎಲ್ಸ್ ಮೀಯರ್ ಮುಂತಾದ ಕಲಾವಿದರ ಸಂದರ್ಶನ ಸಂಪರ್ಕದಿಂದ ಇವರ ಪ್ರಭಾವಕ್ಕೊಳಗಾಗಿ ಸಹ ಕೆಲವು ಕಲಾಕೃತಿಗಳನ್ನು ರಚಿಸಿದ್ದಾನೆ.

ರೋಮ್‌ನಲ್ಲಿಯೇ ಬಹುಕಾಲ ಬಾಳಿದ ಲೊರೈನ್ ಚಾಂಪೆಗಾನದ ಹಾಗೂ ಇನ್ನಿತರ ಪ್ರದೇಶಗಳ ನಿಸರ್ಗ ಹಾಗೂ ರೇಖಾ ಚಿತ್ರಗಳನ್ನೇ ಹೆಚ್ಚಾಗಿ ಚಿತ್ರಿಸುತ್ತಾನೆ. ಇಲ್ಲಿ ಸುಮಾರು ೨೦೦ಕ್ಕೂ ಹೆಚ್ಚು ಕಲಾಕೃತಿಗಳನ್ನು ನಿರ್ಮಿಸಿದ ಕೀರ್ತಿಯೂ ಇವನಿಗಿದೆ. ಇಲ್ಲಿ ಮಾದರಿಗಾಗಿ ಅವನ ಕೆಲವು ಕೃತಿಗಳನ್ನು ಪರಿಚಯಿಸಲಾಗಿದೆ.

ಕ್ಲಾಡ್ ಲೋರೈನ್‌ನ ಕಲಾಕೃತಿಗಳು :

೧. ಅಮರ್ ಮತ್ತು ಸೈಕೆ (Amor and Pysche)
೨. ದಿ ಎಂಬರ್ಕನ್ ಆಫ್ ದಿ ಕ್ವೀನ್ ಆಪ್ ಶೇಬಾ (The embarkation of the Queen of Sheba)
೩. ಹರ್ಬರದ ಮುಂಜಾನೆಯ ದೃಶ್ಯ.
೪. ಹರ್ಬರದ ಸಂಜೆಯ ದೃಶ್ಯ

೧. ಅಮರ್ ಮತ್ತು ಸೈಕೆ : ಈ ಚಿತ್ರವು ತೈಲವರ್ಣ ಮಾಧ್ಯಮದಲ್ಲಿ ಸೃಷ್ಟಿಯಾಗಿದೆ. ಇಲ್ಲಿ ಪೋಸಿನ್‌ನಂತೆ ವ್ಯಕ್ತಿಗಳು ಚಿತ್ರದ ಒಂದು ಗೌಣಭಾಗವೆಂಬುದು ಗಮನಾರ್ಹ ಅಂಶ. ಲೋರೈನ್ ಪ್ರಕೃತಿಯ ರಮ್ಯ ಸೌಂದರ್ಯವನ್ನು ತದ್ರೂಪವಾಗಿ ಕ್ಯಾನ್‌ವಾಸಿಗೆ ತರುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾನೆ. ನೀರಿನಲ್ಲಿ ಗಿಡಗಳ ಪ್ರತಿಬಿಂಬ, ಮತ್ತು ಹಿತಮಿತವಾದ ಬಣ್ಣಗಳ ಆಚ್ಛಾದನೆಯಿಂದ ಕೃತಿ ಸುಂದರವಾಗಿ ಮೂಡಿಬಂದಿದೆ. ಈಗ ವಲ್‌ರಫ್ ರಿಚರ್ಡ್ಜ್ ಮ್ಯೂಜಿಯಮ್‌ನಲ್ಲಿ ಸಂಗ್ರಹಗೊಂಡಿದೆ.

೨. ದಿ ಎಂಬರ್ಕನ್ ಆಫ್ ದಿ ಕ್ವೀನ್ ಆಫ್ ಶೇಬಾ : ಈ ಕೃತಿಯು ಕ್ರಿ.ಶ. ೧೬೪೮ರಲ್ಲಿ ತೈಲವರ್ಣದಲ್ಲಿ ನಿರ್ಮಾಣಗೊಂಡಿದೆ. ಕ್ಲಾಡ್ ಲೋರೈನ್‌ನ ಪ್ರಖ್ಯಾತ ಚಿತ್ರಗಳಲ್ಲಿ ಇದು ಒಂದಾಗಿದೆ. ಸಮುದ್ರದ ದೃಶ್ಯ ಸುತ್ತಲು ಬದಿಗೆ ಇರುವ ನಿಸರ್ಗದ ಹಸಿರು ವರ್ಣದ ಆಕರ್ಷಕ ವಿನ್ಯಾಸ ನೀರಿನಲ್ಲಿಯ ಬೋಟುಗಳು ಹಡಗುಗಳು ಮತ್ತು ಮಾನವ ಚಿತ್ರಗಳನ್ನು ಸಂಯೋಜನಗೋಳಿಸಿರುವ ರೀತಿ ಸಮೀಪ ದೂರದ ಕಲ್ಪನೆ ಇತ್ಯಾದಿ ಅಂಶಗಳಿಂದ ಕೃತಿ ಸಹೃದಯನನ್ನು ಆಕರ್ಷಿಸುತ್ತದೆ. ಈಗ ಲಂಡನ್ನಿನ ನ್ಯಾಶನಲ್ ಗ್ಯಾಲರಿಯಲ್ಲಿ ಸಂಗ್ರಹವಾಗಿದೆ.

೩. ಹರ್ಬರದ ಮುಂಜಾನೆಯ ದೃಶ್ಯ : ಕ್ಲಾಡ್ ಲೋರೈನ್ ತನ್ನ ಚಿತ್ರಗಳಲ್ಲಿ ಅನುಸರಿಸಿದ ರೀತಿ ವಿಶಿಷ್ಟತೆಯಿಂದ ಕೂಡಿದೆ. ಬೆಳಕಿನಲ್ಲಿ ಬಣ್ಣಗಳು ಪ್ರತಿ ಹಂತದಲ್ಲೂ ಬದಲಾಗುತ್ತವೆ. ಆಗ ನೋಡುವ ವಸ್ತುವು ಬೇರೆಯಾಗಿ ಕಾಣಿಸುತ್ತದೆ. ಎಂಬ ಅಂಶದ ಹಿನ್ನೆಲೆಯಲ್ಲಿ ನಿರ್ಮಿಸಿದ ಚಿತ್ರಗಳಲ್ಲಿ ಹರ್ಬರದ ಮುಂಜಾನೆಯ ದೃಶ್ಯವು ಒಂದಾಗಿದೆ. ಆಕಾಶದ ಸ್ವಚ್ಛಂದ ಮೋಡಗಳು ಸೂರ್ಯೋದಯದ ಪ್ರಕಾಶಮಾನ ಬೆಳಕು, ಸಮುದ್ರದ ಅಲೆಗಳಲ್ಲಿಯ ಕೆಂಪು ವರ್ಣದ ಅಲೆಗಳ ರಮ್ಯವಿನ್ಯಾಸ ಸಣ್ಣ ಬೋಟುಗಳ ನೆರಳುಗಳು ದಂಡೆಯಲ್ಲಿ ಸರಕುಗಳನ್ನು ಒಯ್ಯುವ ಬೇರೆ ಬೇರೆ ಕೆಲಸದಲ್ಲಿ ನಿರತರಾದ ಜನರ ವಿವಿಧ ಭಂಗಿಗಳ ಸಂಯೋಜನಾ ವಿನ್ಯಾಸದಿಂದ ಚಿತ್ರ ಸಹೃದಯರನ್ನು ಗಮನ ಸೆಳೆಯುತ್ತದೆ.

೪. ಹರ್ಬರದ ಸಂಜೆಯ ದೃಶ್ಯ : ತೈಲವರ್ಣದಲ್ಲಿ ರಚಿಸಿದ ಈ ಕೃತಿಯು ಸಹ ಮೇಲಿನ ಚಿತ್ರದ ದೃಶ್ಯವಾಗಿದೆ. ವೇಳೆ ಮಾತ್ರ ಸಂಜೆಯ ಸನ್ನಿವೇಶವನ್ನು ಅದರ ವರ್ಣವೈವಿಧ್ಯತೆಗಳನ್ನು ಇಲ್ಲಿ ಸೆರೆಹಿಡಿಯಲಾಗಿದೆ. ಕ್ಲಾಡ್ ಲೋರೈನ್ ಒಟ್ಟು ನಾಲ್ಕು ಚಿತ್ರಗಳನ್ನು ಈ ಹರ್ಬರದ ಒಂದೇ ಸ್ಪಾಟ್‌ನಲ್ಲಿ ಮುಂಜಾನೆ, ಮಧ್ಯಾಹ್ನ, ಸಂಜೆ ಹಾಗೂ ರಾತ್ರಿ ಹೀಗೆ ಬೇರೆ ಬೇರೆಯಾಗಿ ಚಿತ್ರಿಸಿದ್ದಾನೆ. ಇವು ಒಂದಕ್ಕೊಂದು ಭಿನ್ನವಾಗಿ ಕಂಗೊಳಿಸುತ್ತವೆ. ಈತನ ಪ್ರಖ್ಯಾತ ಚಿತ್ರಗಳಲ್ಲಿ ಹರ್ಬರದ ಈ ದೃಶ್ಯಗಳು ಪ್ರಧಾನವಾಗಿವೆ. ಲೋರೈನ್ ಪ್ರಕೃತಿಯ ಆರಾಧಕ. ಅವನ ಪ್ರಯೋಗಶೀಲತೆಗೆ ಈ ಚಿತ್ರಗಳು ನಿದರ್ಶನಗಳಾಗಿವೆ.

ಕಲಾ ಶೈಲಿ : ಕ್ಲಾಡ್ ಲೋರೈನ್, ಪೋಸಿನ್‌ನ ಸಮಕಾಲಿನ ವ್ಯಕ್ತಿ. ಇವರಿಬ್ಬರಲ್ಲಿಯೂ ವರ್ಣವಿನ್ಯಾಸ, ವಿಷಯವನ್ನು ಆಯ್ಕೆಮಾಡಿಕೊಳ್ಳುವ ರೀತಿ ಇತ್ಯಾದಿ ಅಂಶಗಳಲ್ಲಿ ಸಮಾನತೆಗಳಿವೆ. ಲೋರೈನ್‌ನ ಕಲಾತಂತ್ರವನ್ನು ಕುರಿತು.

"His usual method of composition was to arrange trees and buildings in a dark mass in the foreground, and again in the middle distance to make a kind of frame for a great space of light beyond. like velasquez he realized the changing of atmosphere on light. This understanding of tonality him to give very realistic impressions to receding views. His technique was to make little strokes with a full

brush, so that his colours seemed to move with a change of light orpoition". ೧

ಕಲಾಶೈಲಿಯ ಕುರಿತು ಹೇಳಿರುವ ಮಾತುಗಳು ಆತನ ಸಂಶೋಧನಾತ್ಮಕ ಪ್ರವೃತ್ತಿಗೆ ಸಾಕ್ಷಿಯಾಗಿವೆ. ಬೆಳಕಿನ ವಿನ್ಯಾಸ ನಿಸರ್ಗದ ಹಿನ್ನೆಲೆ, ವಸ್ತುವಿನಲ್ಲಾಗುವ ವೈವಿಧ್ಯತೆ, ವ್ಯಕ್ತಿಚಿತ್ರ ಗೌಣವಾಗಿ ನಿಸರ್ಗದ ರಮ್ಯ ವಿನ್ಯಾಸಗಳನ್ನು ಯಥಾವತ್ತಾಗಿ ನಿರೂಪಿಸುವ ಪ್ರಯತ್ನ ಕಾಣುತ್ತದೆ. ವರ್ಣವಿನ್ಯಾಸ ಸಮಯಾನುಸಾರವಾಗಿ ಬಂದಿವೆ. ಸಮೀಪ ದೂರದ ಕಲ್ಪನೆ ಗಮನ ಸೆಳೆಯುತ್ತದೆ.

ಕ್ಲಾಡ್ ಲೋರೈನ್ ತನ್ನತನವನ್ನು ಗಟ್ಟಿಯಾಗಿ ಉಳಿಸಿಕೊಳ್ಳುವುದರೊಂದಿಗೆ ನೂತನ ಮಾರ್ಗಕ್ಕೆ ಹೊಸ ಆಯಾಮ ರೂಪಿಸಿ ನಿಸರ್ಗದ ಚಿತ್ರಕಾರನೆಂಬ ಅಗ್ಗಳಿಕೆಗೆ ಪಾತ್ರನಾಗಿದ್ದಾನೆ. ಅವನ ಕಲಾಕೃತಿಗಳು ಜಗತ್ತಿನ ಪ್ರತಿಷ್ಠಿತ ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿವೆ. ಈತ ೧೬೮೨ರ ಸುಮಾರಿಗೆ ತನ್ನ ಕೊನೆಯ ಉಸಿರನ್ನು ಎಳೆಯುತ್ತಾನೆ.

❑

---

೧. Edith Tomory : Introduction to the History of fine arts in India and the West, page-198.

ಬಾರೋಕ್ ಕಲೆ ಕುರಿತು...

ಮಾನವ ಪ್ರತಿಭೆ ಅನೇಕ ಮುಖವಾಗಿ ಪ್ರವಹಿಸುತ್ತದೆ. ಈ ಪ್ರತಿಭಾ ವಿಲಾಸ ಬಣ್ಣ, ಗೆರೆಗಳ ಮೂಲಕ ವ್ಯಕ್ತವಾದಾಗ ಲಲಿತಕಲೆಯಾಗಿ ಪ್ರಕಾಶಗೊಳ್ಳುತ್ತದೆ. ಕಲೆ ಕಲಾವಿದರು ಕಲೆಯ ಬೆಳವಣಿಗೆ ಮುಂತಾದ ವಿಷಯಗಳನ್ನೊಳಗೊಂಡ ಸಾಹಿತ್ಯಸಾಮಗ್ರಿ ವಿರಳವಾಗಿರುವ ಕನ್ನಡದಲ್ಲಿ ಡಾ॥ ಎಸ್.ಸಿ. ಪಾಟೀಲ ಅವರ 'ಬಾರೊಕ್ ಕಲೆ' ಎಂಬ ಗ್ರಂಥ ಕನ್ನಡದ ಈ ಕೊರತೆಯನ್ನು ತುಂಬವ ಸಾಹಸ ಮಾಡಿದೆ. ದೇಶಿಯ ಕಲೆ ಹಾಗೂ ಪರಂಪರೆಯ ಬಗೆಗೆ ವಿವರವಾದ ಗ್ರಂಥಗಳು, ಅಧ್ಯಯನಗಳು ಕನ್ನಡದಲ್ಲಿ ಸಾಕಷ್ಟು ಇಲ್ಲದಿರುವಾಗ, ಪಾಶ್ಚಾತ್ಯ ಲೋಕದ ಅತ್ಯದ್ಭುತ ಕಲಾಪರಂಪರೆಯನ್ನು ನಿರ್ಮಿಸಿದ 'ಬಾರೊಕ್ ಕಲೆ' ಹಾಗೂ ಆ ಸಂಪ್ರದಾಯವನ್ನು ಮುನ್ನಡೆಸಿದ ಜಗತ್ಪ್ರಸಿದ್ಧ ಕಲಾವಿದರ ಜೀವನೇತಿಹಾಸ ಹಾಗೂ ಕಲೆಯ ಸಾಧ್ಯತೆಗಳನ್ನು ಪರಿಚಯಿಸುವ ಈ ಗ್ರಂಥ ಸ್ವಾಗತಾರ್ಹವಾದುದು. ಭಾರತೀಯ ಕಲಾಪರಂಪರೆಯ ಅಭ್ಯಾಸಿಗಳು, ಪಾಶ್ಚಾತ್ಯ ಕಲಾವಿಧಾನದ ಬಹುಮುಖ ಸಾಧನೆಗಳನ್ನು ಪರಿಚಯಿಸಿಕೊಡುವ ಈ ಕೃತಿಯಿಂದ ವಿಶೇಷ ಲಾಭಗಳನ್ನು ಪಡೆಯಲು ಸಾಧ್ಯವಿದೆ. ಕನ್ನಡಕ್ಕೆ ಇದೊಂದು ವಿಶೇಷವಾದ ಕೊಡುಗೆ.

'ಬಾರೋಕ್ ಕಲೆ' ಹಾಗೂ ಆ ಕಲೆಯನ್ನು ಜಗತ್ಪ್ರಸಿದ್ಧಗೊಳಿಸಿದ ಮಹಾನ್ ಕಲಾವಿದರನ್ನು ಪರಿಚಯಿಸುವ ಉದ್ದೇಶ ಇಲ್ಲಿದೆ. ಪಾಶ್ಚಾತ್ಯ ಸಂಸ್ಕೃತಿಯ ಕಲಾ ಸಮುದ್ರದ ಮಹಾ ತೆರೆಯಾಗಿ ಹೊಮ್ಮಿಬಂದ ಬಾರೋಕ್ ಕಲೆಯ ಸಂಕ್ಷಿಪ್ತ ಇತಿಹಾಸವನ್ನು ಈ ಕೃತಿ ನೀಡುತ್ತದೆ. 'ಬಾರೋಕ್' ಯುಗದ ಪ್ರತಿಭಾನ್ವಿತ ಕಲಾವಿದರ ಸಂಕ್ಷಿಪ್ತ ಜೀವನ ಹಾಗೂ ಅವರ ಪ್ರಸಿದ್ಧ ಕಲಾಕೃತಿಗಳ ರಸವಿಮರ್ಶೆಯನ್ನು ಡಾ॥ ಪಾಟೀಲರು ನೀಡಿರುವರು. 'ಬಾರೊಕ್ ಕಲೆ' ಬೆಳೆದು ಬಂದ ಹಂತಗಳನ್ನು ಗುರ್ತಿಸಿ ಅದರ ಬೃಹದಾಕಾರದ ಸಾಧನೆಗಳ ಸಂಕ್ಷಿಪ್ತ ನೋಟವನ್ನು ನೀಡುವ ಪ್ರಯತ್ನ ಮಾಡಲಾಗಿದೆ. ಇದು ಒಂದು ಕಡೆ ಕಲೆಯ ಇತಿಹಾಸ ಇನ್ನೊಂದು ಕಡೆ ಕಲಾವಿದರ ಜೀವನಚರಿತ್ರೆ. ಮತ್ತೊಂದು ಮುಖದಿಂದ ಇದು ಕಲಾಕೃತಿಗಳ ರಸವಿಮರ್ಶೆ. ಅಲ್ಲಲ್ಲಿ ಅಳವಡಿಸಿರುವ ಪ್ರಸಿದ್ಧ ಕಲಾವಿದರ ಭಾವಚಿತ್ರಗಳು ಹಾಗೂ ಅವರವರ ಆಯ್ದ ಶ್ರೇಷ್ಠ ಕಲಾಕೃತಿಗಳ ಚಿತ್ರಗಳು ಮತ್ತು ಕಲಾವಿಮರ್ಶೆ ಹೀಗೆ ಈ ಗ್ರಂಥ ಏಕತಾನತೆಯ ದೋಷದಿಂದ ವಿಮುಕ್ತವಾಗಿ ಸರಳ ಶೈಲಿಯ ರಸವತ್ತಾದ

ಕೃತಿಯಾಗುವಂತೆ ಮಾಡಿದೆ. ಕನ್ನಡದಲ್ಲಿಯೇ ಒಂದು ವಿಶಿಷ್ಟ ಅಪೂರ್ವ ಕಲಾಇತಿಹಾಸ ಕೃತಿಯಾಗಿ ಇದು ಮೂಡಿ ನಿಂತಿದೆ.

ಸುಪ್ರಸಿದ್ಧ 'ಬಾರೋಕ್' ಕಲಾವಿದರ ನಿಜ ಜೀವನ ಚಿತ್ರಣಗಳೇ ವೈವಿಧ್ಯಮಯವೂ ರಂಜನೀಯವೂ ಆಗಿವೆ. ಆಜನ್ಮ ಪ್ರತಿಭಾಶಾಲಿಯಾದ ಮೈಕೆಲ್ ಎಂಜಿಲೋನ ಜೀವನದ ಘಟನೆಗಳು ಸಮಾಜದ ಸ್ಥಾನಮಾನಗಳು, ಆತನ ವೈವಿಧ್ಯಮಯ ಕಲಾಕೃತಿಗಳ ಅಭಿವ್ಯಕ್ತಿಗೆ ಹೇಗೆ ಕಾರಣವಾಗುವದೆಂಬುದನ್ನು ಡಾ॥ ಪಾಟೀಲರು ಮನೋಜ್ಞವಾಗಿ ನಿರೂಪಿಸಿರುವರು. ಆತನ ಶಿಲ್ಪ, ಚಿತ್ರಗಳ ರಸವಿಮರ್ಶೆ ಸಹೃದಯರಿಗೆ ಕಲಾಪ್ರೇಮಿಗಳಿಗೆ ಮಾರ್ಗದರ್ಶನವೂ ಅಭಿರುಚಿ ಪ್ರೇರಕವೂ ಆಗಿದೆ. ಅಂತೆಯೇ ರೂಬೆನ್ಸ್, ರೆಂಬ್ರಾಂಟ್, ವೆರ್ಮೀರ್ ಮುಂತಾದ ಕಲಾದೈತ್ಯರ ಪರಿಚಯವನ್ನು ನೀಡುವ ಈ ಕೃತಿ ಗಮನಾರ್ಹ ಸಾಧನೆಯಾಗಿದೆ. ಅದೇ ರೀತಿಯಲ್ಲಿ, ಪಾಶ್ಚಾತ್ಯ ಕಲಾಶೈಲಿಯಲ್ಲಿ ಆದ ಮಾರ್ಪಾಟುಗಳನ್ನು ಅದರಿಂದಾದ ಪರಿಣಾಮಗಳನ್ನು ಡಾ॥ ಪಾಟೀಲರು ಪುಸ್ತಕದುದ್ದಕ್ಕೂ ಪ್ರಸ್ತಾಪಿಸಿರುವರು. ಕೊನೆಯಲ್ಲಿ 'ಬಾರೋಕ್ ವಾಸ್ತು' ಚಿತ್ರ ಕಲಾಕೃತಿಗಳ ಪಡಿಯಚ್ಚುಗಳನ್ನು ಅಳವಡಿಸಿ ಅವುಗಳ ರಸವಿಮರ್ಶೆಯನ್ನು ಆಯಾ ಕಲಾವಿದನ ಜೀವನ ಚಿತ್ರಣದೊಡನೆಯೇ ನೀಡಿರುವುದು ಒಂದು ಗಮನಾರ್ಹ ಸಂಗತಿ. ಅಲ್ಲದೆ ಅಲ್ಲಲ್ಲಿ ಈ ಕಲೆ ಮತ್ತು ಅಭಿವ್ಯಕ್ತಿಗಳ ತೌಲನಿಕ ದೃಷ್ಟಿಯ ವಿಮರ್ಶೆಯನ್ನು ನೀಡಿರುವರು. ಒಟ್ಟಿನಲ್ಲಿ 'ಬಾರೋಕ್ ಕಲೆ'ಯ ಪರಿಚಯ ಹಾಗೂ ಆಯಾ ಕಲಾವಿದರ ಜೀವನ ಹಾಗೂ ಕಲಾಕೃತಿಗಳನ್ನು ಅರ್ಥೈಸಿಕೊಳ್ಳುವ ದೃಷ್ಟಿಯನ್ನು ಡಾ॥ ಪಾಟೀಲರ ಈ ಕೃತಿ ನೀಡುವುದರಲ್ಲಿ ಯಶಸ್ವಿಯಾಗಿದೆ. ಇಂತಹ ಹಲವಾರು ಕೃತಿಗಳನ್ನು ಸಹಜ ಕಲಾವಿದರೂ, ಅಭ್ಯಾಸಿ ಮನೋಭಾವದವರೂ ಹಾಗೂ ನನ್ನ ಪ್ರಿಯ ವಿದ್ಯಾರ್ಥಿಯೂ ಆದ ಡಾ॥ ಎಸ್.ಸಿ. ಪಾಟೀಲ ನೀಡಲೆಂದು ಆಶಿಸುತ್ತೇನೆ. ಅವರಿಗೆ ಉತ್ತರೋತ್ತರ ಅಭಿವೃದ್ಧಿ ದೊರೆಯಲೆಂದು ಅಭಿಮಾನ ತುಂಬಿ ಹಾರೈಸುತ್ತೇನೆ.

ಈ ಕೃತಿಯ ಮುಖಪುಟ, ಶಿಲ್ಪಚಿತ್ರಗಳ ಪ್ರತಿಕೃತಿಗಳೂ ಕಲಾವಿದರ ಭಾವಚಿತ್ರಗಳೂ ಸಹೃದಯರಲ್ಲಿ ತೃಪ್ತಿಯ ಭಾವನೆಯನ್ನು ತುಂಬುವುದೆಂದು ಭಾವಿಸಲಾಗಿದೆ. ಈ ಎಲ್ಲ ಕಾರ್ಯಗಳಿಗೆ ಕಾರಣೀ ಭೂತರಾದ ಸಾಹಸಿ ಡಾ॥ ಎಸ್.ಸಿ. ಪಾಟೀಲ ಎಲ್ಲರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಡಾ॥ ಪಾಟೀಲರ ಈ ಗ್ರಂಥವನ್ನು ಕನ್ನಡ ಜನ ಕೊಂಡು ಓದುವುದು, ಬಹುಮಾನಿಸಿ ಪ್ರೋತ್ಸಾಹಿಸುವುದು ಅವರಿಗೆ ಸಲ್ಲಿಸುವ ನಿಜವಾದ ಆಭಾರ ಮನ್ನಣೆ.

ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ
ವಿಶ್ರಾಂತ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ಅಧ್ಯಯನ ಪೀಠ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

* * *

ನಮ್ಮ ನಾಡಿನಲ್ಲಿ ಕಲಾಶಿಕ್ಷಣ ವಿವಿಧ ಮುಖವಾಗಿ ಬೆಳೆಯುತ್ತಿದೆ. ವಿಧವಿಧದ ಕಲಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೂ ವರ್ಷವರ್ಷವೂ ಅಧಿಕವಾಗುತ್ತಿದೆ. ವಿದ್ಯಾರ್ಥಿಗಳು ಪಡೆಯುತ್ತಿರುವ ಕಲಾಶಿಕ್ಷಣ ಅದು ಅವರ ಪರಿಪೂರ್ಣ ವ್ಯಕ್ತಿತ್ವದ ವಿಕಾಸಕ್ಕೆ ಸಹಾಯಕವಾಗಬೇಕು.

ಕಲಾಶಿಕ್ಷಣ ನಮ್ಮ ಶಿಕ್ಷಣ ಕ್ರಮದಲ್ಲಿ ಮೈಗೂಡಿದರೆ ಮಾತ್ರ ಕಲಾಶಿಕ್ಷಣದ ನಿಜವಾದ ಗುರಿಯನ್ನು ಸಾಧಿಸಬಹುದು.

ದೇಶದ ಕಲೆಯ ಸಂಸ್ಕೃತಿಯನ್ನು ಧರ್ಮ ಮತ್ತು ಲಲಿತಕಲಾ ದೃಷ್ಟಿಯಿಂದ ಅಧ್ಯಯನ ಮಾಡುವ ಕಾರ್ಯ ಈಗಾಗಲೇ ಸಾಕಷ್ಟು ನಡೆದಿದೆ. ಇಂಥ ಸಂದರ್ಭದಲ್ಲಿ 'ಬಾರೋಕ್ ಕಲೆ' ಕುರಿತು ಇಂಥ ಕೃತಿಯೊಂದನ್ನು ನಮಗಿತ್ತ ಎಸ್.ಸಿ. ಪಾಟೀಲ ಅವರನ್ನು ನಾನು ಹಾರ್ದಿಕವಾಗಿ ಅಭಿನಂದಿಸ ಬಯಸುತ್ತೇನೆ. ಕಲಾ ವಿದ್ಯಾರ್ಥಿಗಳು, ಕಲಾಭಿಮಾನಿಗಳು ಇದರ ಉಪಯೋಗ ಪಡೆಯಲೆಂದು ಹಾರೈಸುತ್ತೇನೆ.

ಟಿ.ಪಿ.ಅಕ್ಕಿ

ಗದಗ — ಹಿಂದಿನ ಲಲಿತಕಲಾ ಅಕಾಡೆಮಿ ಅಧ್ಯಕ್ಷರು

* * *

ಹದಿನಾರನೇ ಶತಮಾನದ ಅಂತಿಮ ಘಟ್ಟದಲ್ಲಿ 'ಬಾರೋಕ್ ಕಲೆ'ಯು ಮೂಲತಃ ರೋಮಿನಲ್ಲಿ ಹುಟ್ಟಿ ಬೆಳೆದು ಬಂದರೂ ಇಟಲಿಯ ವಿಶ್ವವಿಖ್ಯಾತ ಮೈಕೆಲ್ ಎಂಜಿಲೋ ಹಾಗೂ ಅವರ ಶಿಷ್ಯರು, ಪ್ರಶಿಷ್ಯರುಗಳಿಂದ, ಅನುಯಾಯಿಗಳಿಂದ ಬೆಳೆದು ಬಂದು ಮೈಕೆಲ್ ಎಂಜಿಲೋ 'ಬಾರೋಕ್ ಕಲೆ'ಯ ಜನಕನೆಂದು ಹೆಸರು ಪಡೆದನು.

ಮೈಕೆಲ್ ಎಂಜಿಲೋ ಹಾಗೂ ಅವನ ಅನುಯಾಯಿ ಕಲಾವಿದರಲ್ಲಿ ಪ್ರಮುಖರಾದ ಗಿಯೋವಾನಿ, ಎಲ್‌ಗ್ರೇಕೋ, ರೂಬೆನ್ಸ್ ರೆಂಬ್ರಾಂಟ್ ಬೋರೋಮಿನಿ, ವೆಲ್ಜಿಜ್ ಮೊದಲಾದವರು 'ಬಾರೋಕ್ ಕಲಾ' ಪ್ರಪಂಚಕ್ಕೆ ಸಲ್ಲಿಸಿದ ಕೊಡುಗೆಗಳು ವಿಶ್ವವಿಖ್ಯಾತವಾಗಿವೆ. ಡಾ॥ ಪಾಟೀಲರು 'ಬಾರೋಕ್ ಕಲೆ'ಯ ಬಗೆಗಿನ ವಿಷಯ ವಿಶೇಷತೆಗಳನ್ನು ತಮ್ಮ ಆಳವಾದ ಅಭ್ಯಾಸದ ಬಲದಿಂದ ನಮಗೆ ಈ ಕಲೆಯ ಬಗೆಗೆ ಒಂದು ಸಮಗ್ರ ದೃಷ್ಟಿಯನ್ನು ತಂದು ಕೊಟ್ಟಿದ್ದಾರೆ. 'ಬಾರೋಕ್ ಚಿತ್ರಕಲೆ'ಯ ಮಾರ್ಗಶೈಲಿ ಹಾಗೂ ಸಂಪ್ರದಾಯಗಳ ವಿಸ್ತೃತ ವಿವರಣೆಯೊಂದಿಗೆ ಡಾ॥ ಪಾಟೀಲರು ಈ ಕಲೆಯು ಬೆಳೆದು ಬಂದ ಧಾರ್ಮಿಕ ಹಿನ್ನೆಲೆಯನ್ನು ಆಳವಾಗಿ ಅಭ್ಯಸಿಸಿದ್ದಾರೆ, ಈ ಚಿತ್ರಕಲೆಯನ್ನು ಲೇಖಕರು ಪ್ರಾರಂಭಿಕ, ಉಜ್ವಲ ಹಾಗೂ ಅಂತಿಮ ಎಂಬ ಮೂರು ಯುಗಗಳಲ್ಲಿ ವಿಂಗಡಿಸಿ ಈ ಕಲೆಯನ್ನು ಐತಿಹಾಸಿಕವಾಗಿ ಚರ್ಚಿಸಿದ್ದಾರೆ. ಜೊತೆಗೇನೆ ಈ ಕಲೆಯ ಪ್ರಮುಖ ಲಕ್ಷಣಗಳನ್ನು ಕುರಿತು ವಿವರವಾದ ಮಾಹಿತಿ ನೀಡಿದ್ದಾರೆ. 'ಬಾರೋಕ್ ಕಲೆ'ಯ ವಾಸ್ತುಕಲೆ, ಶೈಲಿ; ಶಿಲ್ಪಕಲೆ ಹಾಗೂ ಅದರ ಶೈಲಿಯ ಬಗೆಗೆ ಆಳವಾದ ವಿವರಣೆ ಕೊಟ್ಟಿದ್ದಾರೆ.

ಪ್ರಸ್ತುತ 'ಬಾರೋಕ್ ಕಲೆ' ಗ್ರಂಥವು ಕರ್ನಾಟಕ ಚಿತ್ರಕಲಾ ಪ್ರಪಂಚಕ್ಕೊಂದು ಅಮೋಘ ಕೊಡುಗೆಯಾಗಿದೆ. ಡಾ॥ ಪಾಟೀಲರ ಚಿಂತನಶೀಲ ಹಾಗೂ ಸೃಜನಾತ್ಮಕ ಲೇಖನಿಯಿಂದ ಇಂಥ ಇನ್ನೂ ಅನೇಕ ಕೃತಿರತ್ನಗಳು ಹೊರಬರಲೆಂದು ಹಾರೈಸುವೆ.

ಪ್ರೊ. ಎ.ಯು. ಪಾಟೀಲ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ — ವಿಶ್ರಾಂತ ಪ್ರಾಧ್ಯಾಪಕರು, ಸಂಗೀತ ಮತ್ತು ಲಲಿತಕಲಾ ವಿಭಾಗ

* * *

ಕಲಾವಿದ ಮಿತ್ರ ಡಾ॥ ಎಸ್.ಸಿ. ಪಾಟೀಲರದು ಅಪರೂಪದ ಅಭಿರುಚಿಗಳ ವ್ಯಕ್ತಿತ್ವ. ಸಾಹಿತ್ಯ, ಚಿತ್ರಕಲೆ, ಮೃತ್ತಿಕಾಶಿಲ್ಪ, ಶಾಸನ, ಶಿಕ್ಷಣ–ಹೀಗೆ ಹಲವಾರು ಕ್ಷೇತ್ರದಲ್ಲಿ ಹರಿದಾಡಿದ ಅಭಿರುಚಿ. ಈ ಯಾವುದೇ ಕ್ಷೇತ್ರದಲ್ಲಿ ಪಾಟೀಲರು ಸುಮ್ಮನೆ ಕೈಯಾಡಿಸಿದವರಲ್ಲ; ಆಯಾ ಕ್ಷೇತ್ರದಲ್ಲಿ ಆಳಕ್ಕಿಳಿದು ನೋಡುವ ಕುತೂಹಲವುಳ್ಳವರು–ಪ್ರತಿಭಾಸಂಪನ್ನರು. ಶ್ರೀ ಪಾಟೀಲರ ಪ್ರತಿಭೆ ಹೂಡಿದ ಬಾಣ, ಬಿಟ್ಟ ಕ್ಷೇತ್ರದಲ್ಲಿ ಗುರಿ ಮುಟ್ಟುತ್ತದೆ.

ಇಂದು, ಕನ್ನಡ ಸಾಹಿತ್ಯ ತನ್ನ ವೈವಿಧ್ಯದಿಂದಾಗಿ ಮೈ ತುಂಬಿಕೊಳ್ಳುತ್ತಿದ್ದರೂ 'ಕಲೆ' ಕುರಿತಾದ ಕೃತಿಗಳು ಬೆರಳೆಣಿಕೆಯವೇ. ಅಂಥ ವಿರಳವಾದ ಬರವಣಿಗೆಯ ಕ್ಷೇತ್ರದಲ್ಲಿ ಮೂಡಿಬಂದ ಕೃತಿ ಪಾಟೀಲರ 'ಬಾರೋಕ್ ಕಲೆ.'

ಪಾಶ್ಚಾತ್ಯ ಕಲಾರಂಗದಲ್ಲಿ ಹದಿನಾರನೆಯ ಶತಮಾನದಲ್ಲಿ ಹುಟ್ಟಿಕೊಂಡು 2, 3 ಶತಮಾನಗಳ ಕಾಲ ವೈಭವದಿಂದ ಮೆರೆದ ಕಲಾ ಅಲೆ–ಬಾರೋಕ್, ಮೈಕೆಲ್ ಎಂಜಿಲೋನಂತಹ ಸವ್ಯಸಾಚಿ ಇದರ ಪಿತಾಮಹ, ಬರ್ನೀನಿ, ರೂಬೆನ್ಸ್, ರೆಂಬ್ರಾಂಟ್ ಮುಂತಾದ ದೈತ್ಯ ಪ್ರತಿಭೆಯ ಕಲಾವಿದರಿಂದ ಶ್ರೀಮಂತವಾಗುತ್ತ ಬಂದ ಕಲಾಶೈಲಿಯಿದು. ಈ ಶೈಲಿ, ಈ ಕಲಾವಿದರ ಬಗೆಗೆ ಎಷ್ಟು ಬರೆದರೂ ಕಡಿಮೆಯೇ. ಹೀಗಿದ್ದೂ ಈ ಕಾಲಶೈಲಿಯ ಹುಟ್ಟು–ಬೆಳವಣಿಗೆ, ಅದು ವಾಸ್ತು–ಶಿಲ್ಪ–ಭಿತ್ತಿ ಚಿತ್ರಗಳಲ್ಲಿ ಚಾಚಿಕೊಂಡು ಬೆಳೆದ ರೀತಿಯನ್ನು ಸಂಕ್ಷೇಪವಾಗಿಯಾದರೂ ಸಮಗ್ರವಾಗಿ ಕೊಡುವ ಪ್ರಯತ್ನವನ್ನು ಪಾಟೀಲರು ಮಾಡಿದ್ದಾರೆ. ಅದು ಅಲ್ಲದೆ ಬಾರೋಕ್ ಕಲಾವಿದರ ಜೀವನ ಹಾಗೂ ಕಲಾಕೃತಿಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಅನುಬಂಧವಾಗಿ ಕೆಲವು ಚಿತ್ರಗಳನ್ನು ಹೊಂದಿಸಿ ಕೊಟ್ಟಿದ್ದಾರೆ.

ಇಂಥ ಕೃತಿಗಳ ರಚನೆ ಪರಿಶ್ರಮದ್ದು. ಇಂಥವುಗಳನ್ನು ಅಚ್ಚು ಹಾಕಿಸುವುದು ಇನ್ನೂ ಕಷ್ಟದ್ದು. ಈ ಇಮ್ಮುಖದ ಕಷ್ಟವನ್ನು ಸಹಿಸಿಯೂ ಕನ್ನಡಿಗರ ಸಮಗ್ರ ಪರಿಚಯವನ್ನು ಮಾಡಿಕೊಡಲು ಮುಂದಾದ ಡಾ॥ ಎಸ್.ಸಿ.ಪಾಟೀಲರ ಸಾಹಸ ಪ್ರಶಂಸನಿಯ.

ಸದಭಿರುಚಿಯ ಕನ್ನಡಿಗರು 'ಬಾರೋಕ್ ಕಲೆ' ಯನ್ನ ಹೃದಯಾರೆ ಸ್ವಾಗತಿಸಲಿ; ಪಾಟೀಲರು ಈ ಕ್ಷೇತ್ರದಲ್ಲಿ ಇನ್ನೂ ಕೃಷಿ ಮಾಡುವಂತಾಗಲಿ.

–ಡಾ. ಬಿ.ಕೆ. ಹಿರೇಮಠ


ಪ್ರಾಧ್ಯಾಪಕರು
ಬಸವೇಶ್ವರ ಕಲಾ ಮಹಾವಿದ್ಯಾಲಯ
ಬಾಗಲಕೋಟೆ

✤ ✤

ಕಹ್ರವಾಜೋನ ಕೃತಿ



ದಿ ಬಾಯ್ ಬಿಟನ್ ಬಾಯ್ ಎ ಲಿಝರ್ಡ



ಡೆವಿಡ್ ಶಿಲ್ಪ



ಪಿಯೆಟಾ (ಅನುಕಂಪ) ಶಿಲ್ಪ



ಡೇವಿಡ್‌ನು ಗೋಲಿಯಥ್
ಚಕ್ರವನ್ನು ಎಸೆಯುತ್ತಿರುವ ಶಿಲ್ಪ



ಸೇಂಟ್ ತೇರಿಸಾಳ
ಭಾವಪೂರಿತ ಶಿಲ್ಪ



ಸ್ಮಾರಕ ಶಿಲ್ಪಗಳು





ಸೆಲ್ಫ್ ಪೋರ್ಟ್ರೇಟ್ ವಿಥ್ ಇಸ್‌ಬೆಲ್ಲಾ ಬ್ರಾಂಟ್



ಶಿಲುಬೆಯನ್ನೇರಿಸುವ ಚಿತ್ರ



ಲ್ಯಾಂಡ್‌ಸ್ಕೇಪ್ ವಿತ್ ದಿ ಸಿಪ್‌ವ್ರಿಕ್ ಆಫ್ ಆನಿಸ್



ದಿ ಟೂರ್ನಾಮೆಂಟ್



ಬೀಸಣಿಕೆಯ ಜೊತೆಗೆ
ಹೆಣ್ಣುಮಗಳು



ರಾತ್ರಿ ಪಹರೆ



ಕುಳಿತುಕೊಂಡಿರುವ ಮುದುಕ



ಮುತ್ತಿನ ನೆಕ್ಲೆಸ್ ಹಿಡಿದು
ನಿಂತಿರುವ ಹುಡುಗಿ



ಡೆಲ್ಫ್ ನಗರದ ನೋಟ



ಮನೆಯಲ್ಲಿ ಮೇರಿ ಮತ್ತು
ಮಾರ್ಥಾರೊಂದಿಗೆ ಕ್ರಿಸ್ತ



ಮನೆಯಲ್ಲಿ ತರುಣಿಯ ಚಿತ್ರ



ಪಾತ್ರೆಗೆ ಹಾಲನ್ನು
ಹಾಕುತ್ತಿರುವ ಸೇವಕಿ



ನೀರಿನ ಪಾತ್ರೆಯೊಂದಿಗೆ
ಇರುವ ಹೆಣ್ಣುಮಗಳು



ಹಿಗ್ಗಿನ ಉಡಾಳ ವ್ಯಕ್ತಿಯ ಭಾವಚಿತ್ರ



ಸೇಂಟ್ ಎಲಿಜೆಬಿತ್ ಆಸ್ಪತ್ರೆಯ ಅಧಿಕಾರಿಗಳು




ನಾಲ್ಕನೆಯ ಫಿಲಿಫ್‌ನ ಭಾವಚಿತ್ರ




ದಿ ಮೇಡ್ಸ್ ಆಫ್ ಆನರ್





ಡಾನ್ ಬಲುತ್‌ಸಾರನ ಕುದುರೆ ಸವಾರಿ




ಹರ್ಬರದ ಮುಂಜಾನೆಯ ದೃಶ್ಯ




ಹರ್ಬರದ
ಸಂಜೆಯ ದೃಶ್ಯ



ಹರ್ಬರದ
ಮುಂಜಾನೆಯ ದೃಶ್ಯ





ಕಲಾವಿದ ಡಾ. ಎಸ್. ಸಿ. ಪಾಟೀಲರದು ಅಪರೂ
ಅಭಿರುಚಿಗಳ ವ್ಯಕ್ತಿತ್ವ. ಜಾನಪದ, ಸಾಹಿತ್ಯ, ಇತಿಹಾ
ಬುಡಕಟ್ಟು, ಚಿತ್ರಕಲೆ, ಮೃತ್ತಿಕಾಶಿಲ್ಪ, ಶಾಸನ, ಶಿಕ್ಷಣ-
ಹಲವಾರು ಕ್ಷೇತ್ರದಲ್ಲಿ ಹರಿದಾಡಿದ ಅಭಿರುಚಿ.
ಯಾವುದೇ ಕ್ಷೇತ್ರದಲ್ಲಿ ಪಾಟೀಲರು ಸುವ
ಕೈಯಾಡಿಸಿದವರಲ್ಲ; ಆಯಾ ಕ್ಷೇತ್ರದಲ್ಲಿ ಆಳಕ್ಕಿ
ನೋಡುವ ಕುತೂಹಲ ಉಳ್ಳವರು – ಪ್ರತಿಭಾಸಂಪನ್ನ
ಪ್ರೊ. ಪಾಟೀಲರ ಪ್ರತಿಭೆ ಹೂಡಿದ ಬಾಣ, ಬಿಟ್ಟ ಕ್ಷೇತ್ರ
ಗುರಿ ಮುಟ್ಟುತ್ತದೆ.

–ಡಾ. ಬಿ.ಕೆ. ಹಿರೇ

ಪಾಶ್ಚಾತ್ಯ ಸಂಸ್ಕೃತಿಯ ಕಲಾ ಸಮುದ್ರದ ಮಹಾ ತೆರೆಯ
ಹೊಮ್ಮಿಬಂದ ಬಾರೋಕ್ ಕಲೆಯ ಸಂ
ಇತಿಹಾಸವನ್ನು ಈ ಕೃತಿ ನೀಡುತ್ತದೆ. 'ಬಾರೋ
ಯುಗದ ಪ್ರತಿಭಾನ್ವಿತ ಕಲಾವಿದರ ಸಂಕ್ಷಿಪ್ತ ಜೀ
ಹಾಗೂ ಅವರ ಪ್ರಸಿದ್ಧ ಕಲಾಕೃತಿಗಳ ರಸವಿಮರ್ಶೆಯ
ಡಾ|| ಪಾಟೀಲರು ನೀಡಿರುವರು. 'ಬಾರೊಕ್
ಬೆಳೆದು ಬಂದ ಹಂತಗಳನ್ನು ಗುರ್ತಿಸಿ ಅ
ಬೃಹದಾಕಾರದ ಸಾಧನೆಗಳ ಸಂಕ್ಷಿಪ್ತ ನೋಟವ
ನೀಡುವ ಪ್ರಯತ್ನ ಮಾಡಲಾಗಿದೆ. ಇದು ಒಂದು
ಕಲೆಯ ಇತಿಹಾಸ ಇನ್ನೊಂದು ಕಡೆ ಕಲಾವಿ
ಜೀವನಚರಿತ್ರೆ. ಮತ್ತೊಂದು ಮುಖದಿಂದ
ಕಲಾಕೃತಿಗಳ ರಸವಿಮರ್ಶೆ. ಹೀಗೆ ಸರಳ ಶೈಲಿ
ರಸವತ್ತಾದ ಕೃತಿಯಾಗುವಂತೆ ಮಾಡಿದೆ. ಕನ್ನಡದಲ್ಲಿ
ಒಂದು ವಿಶಿಷ್ಟ ಅಪೂರ್ವ ಕಲಾಇತಿಹಾಸ ಕೃತಿಯ
ಇದು ಮೂಡಿ ನಿಂತಿದೆ.

–ಡಾ. ಎಸ್.ಎಂ.ವೃಷಭೇಂದ್ರಸ್ವಾ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨